3. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯಗಳ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

ವಿಷಯ: ರಾಜ್ಯದ ಲೋಕಾಯುಕ್ತ ಸಂಸ್ಥೆಯಲ್ಲಿನ ಭ್ರಷ್ಟಾಚಾರ ಹಾಗೂ ಇದರ ವಿರುದ್ಧ ರಾಜ್ಯಾದ್ಯಂತ ನಡೆಯುತ್ತಿರುವ ಪ್ರತಿಭಟನೆಗಳ ಬಗ್ಗೆ

ಅಧ್ಯಕ್ಷರು: ದಯವಿಟ್ಟು ಸಂಕ್ಷಿಪ್ತವಾಗಿ ಮಾತನಾಡಿ ಬೇಗ ಮುಗಿಸಿ.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ): ಮಾನ್ಯ ಅಧ್ಯಕ್ಷರೆ, ನನ್ನ ಮಾತಿನಲ್ಲಿ ನೋಡಿ ಅದು ಅನಗತ್ಯವೆಂದು ಅನಿಸಿ ಕುಳಿತುಕೊಳ್ಳಿ ಎಂದರೆ, ಕುಳಿತುಕೊಂಡು ಬಿಡುತ್ತೇನೆ.

ಅಧ್ಯಕ್ಷರು: ಛೇ, ಇಲ್ಲ.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, 48 ಗಂಟೆಗಳ ಹಿಂದೆ ಈ ಸದನದಲ್ಲಿ ಈ ರಾಜ್ಯದಲ್ಲಿ ಆಗುತ್ತಿರುವ ರೈತರ ಆತ್ಮಹತ್ಯೆಯ ಬಗ್ಗೆ ಸುದೀರ್ಘವಾದ ಒಂದು ಚರ್ಚೆ ನಡೆಯಿತು. ಇವತ್ತು ಒಂದು ಸರ್ಕಾರಿ ವ್ಯವಸ್ಥೆಯಲ್ಲಿ ಒಂದು ಸ್ವಚ್ಛತೆ ತರಬೇಕು ಎಂದು ಒಂದು ಸಂಸ್ಥೆ ನಿರ್ಮಾಣವಾಯಿತು. ಆ ಸಂಸ್ಥೆಯ ಅವಸಾನದ ಒಂದು ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡುವ ಸ್ಥಿತಿಯಲ್ಲಿ ನಾವು ಬಂದಿದ್ದೇವೆ. ಇವತ್ತು ಈ ವಿಚಾರ ಇಲ್ಲಿ ಚರ್ಚೆ ಮಾಡುವ ಸನ್ನಿವೇಶ ಬರಬಾರದಾಗಿತ್ತು. ಇನ್ನು ಕೂಡ ಲೋಕಾಯುಕ್ತ ಸಂಸ್ಥೆಗೆ ಶಕ್ತಿ ಕೊಡುವುದು ಅದು ಇದು ಚರ್ಚೆ ಮಾಡಬೇಕಾಗಿತ್ತು. ನಾನು ಈ ಸಂದರ್ಭದಲ್ಲಿ ಸದನಕ್ಕೆ I appeal to the House, ಕೆಲವು ವಿಚಾರಗಳಲ್ಲಿ ನಾವು Ruling Party, Opposition Party, ಎಂದು adversarial politics ಬೇಡ. ಇಡೀ ಸದನ ಈ ಗಂಭೀರವಾದ ವಿಚಾರದ ಬಗ್ಗೆ ಚಿಂತನೆ ನಡೆಸೋಣ. ಆಚೆ ಒಂದು ವಿಶ್ವಾಸ ಬರುವ ಸಂದೇಶ ಹೋಗಬೇಕು. 1984-85ನೇ ಇಸವಿಯಲ್ಲಿ ಲೋಕಾಯುಕ್ತ ಕಾಯ್ದೆ ಇಲ್ಲಿ ಮಂಡಿಸಿದಾಗ ಚರ್ಚೆಯ ಎಲ್ಲಾ ವಿವರಗಳನ್ನು ನಾನು ಓದಿದ್ದೇನೆ, ಪೂರ್ತಿ ವಿವರ ನೋಡಿದ್ದೇನೆ. ನನಗೆ ಅನ್ನಿಸುತ್ತದೆ, ಆವತ್ತು ಆ ಸದನದಲ್ಲಿದ್ದವರು ಕೆಲವರು ಇಲ್ಲಿ ಇರಬಹುದು. ನಿಜವಾದ

ಅರ್ಥದಲ್ಲಿ ದಿಗ್ಗಜ ಶಾಸಕರು ಆ ಚರ್ಚೆಯಲ್ಲಿ ಭಾಗವಹಿಸಿರುವುದನ್ನು ನಾನು ಓದಿದ್ದೇನೆ. ಆದರೆ ಆ ಚರ್ಚೆಯ ಸಂದರ್ಭದಲ್ಲಿ ಲೋಕಾಯುಕ್ತ ನಿರ್ಮಾಣ ಸಂದರ್ಭದಲ್ಲಿ ಈ ರೀತಿ ಒಂದು ದಿನ ಬರಬಹುದು. ಲೋಕಾಯುಕ್ತರ ಬಗ್ಗೆ ಹಾದಿಯಲ್ಲಿ ಬೀದಿಯಲ್ಲಿ ಗಲಾಟೆ start ಆಗಬಹುದು, ಬೀದಿನಲ್ಲಿ ಚಳುವಳಿ start ಮಾಡಬಹುದು ಎಂದು ಅವರು ಯಾರೂ ಊಹೆ ಮಾಡಿರಲಿಲ್ಲ. ಇವತ್ತು ಲೋಕಾಯುಕ್ತ ಸಂಸ್ಥೆ it is very unfortunate, it is in news for all wrong reasons. ಪ್ರತಿನಿತ್ಯ ನಾವು ಕಳೆದ ಎರಡು ತಿಂಗಳಿನಿಂದ ಆ ವಿದ್ಯಮಾನ ನೋಡುತ್ತಿದ್ದೇವೆ. ಇಲ್ಲಿ ಸದನದಲ್ಲಿರುವ ಕೆಲವರಿಗೆ ನೆನೆಪು ಇರಬಹುದು. ಯಾರು ಬಹಳ ವರ್ಷಗಳಿಂದ ಬೆಂಗಳೂರನ್ನು ನೋಡುತ್ತಾ ಬಂದಿದ್ದಾರೆ. ಬೆಂಗಳೂರಿನ ಗಾಂಧಿನಗರದಲ್ಲಿ ಒಂದು ಹೋಟೆಲ್ ಇತ್ತು. ಆ ಹೋಟೆಲ್‌ನಲ್ಲಿ ವಯಸ್ಕರಿಗೆ ಮಾತ್ರ ಪ್ರವೇಶವಿತ್ತು. ಆ ಹೋಟೆಲ್ ಹೆಸರು Talk of the Town ಎಂದು. ಆ Talk of the Town Hotel ಬಗ್ಗೆ ಮಾತನಾಡುವುದು ಒಂದು Talk of the Town ಆಗಿತ್ತು. ಇವತ್ತು unfortunately ಲೋಕಾಯುಕ್ತದಲ್ಲಿ ನಡೆಯುತ್ತಿರುವ ವಿದ್ಯಮಾನ, not only talk of the Town it has become talk of the Country. ಈ ದೃಷ್ಟಿಯಿಂದ ಆ ಸಂಸ್ಥೆಯ ವಿದ್ಯಮಾನದ ಬಗ್ಗೆ ಜನಪ್ರತಿನಿಧಿಗಳಾದ ನಾವು ಇವತ್ತು ಬಹಳ ಗಂಭೀರವಾಗಿ ಚರ್ಚೆ ಮಾಡಬೇಕಾಗಿದೆ. ಲೋಕಾಯುಕ್ತ ಸಂಸ್ಥೆಯ ಆಡಳಿತದಲ್ಲಿ ಭ್ರಷ್ಟಾಚಾರ ಮಾಡುವವರಿಗೆ ಅಥವಾ ತಮ್ಮ ಸ್ಥಾನದ ದುರುಪಯೋಗ ಮಾಡಿಕೊಳ್ಳುವವರಿಗೆ ಸಿಂಹಸ್ವಪ್ನ ಆಗಬೇಕಾಗಿತ್ತು. ಆದರೆ, it is unfortunate, ಯಾರು ಆ ರೀತಿ ಇಲ್ಲ ಯಾರು ಪ್ರಾಮಾಣಿಕವಾಗಿ ಕಾರ್ಯವನ್ನು ಮಾಡಿಕೊಂಡು ಹೋಗುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ. ಅವರಿಗೆ ಇವತ್ತು ಸಿಂಹಸ್ವಪ್ನ ಆಗುತ್ತಿದೆ. ಅಷ್ಟೇ ಅಲ್ಲ, ಲೋಕಾಯುಕ್ತದ ವಿದ್ಯಮಾನ it is inducing even the ordinary bureaucrats to become corrupt, to take money, to fulfill the aspirations or the needs of the people in Lokayuktha. ಆ ಒಂದು ಪರಿಸ್ಥಿತಿ ಇವತ್ತು ಬಂದುಬಿಟ್ಟಿದೆ. ನಾವು ಸಾರ್ವಜನಿಕ ಜೀವನದಲ್ಲಿ ಸ್ವಚ್ಛತೆ ಇರಬೇಕೆಂದು ಬಯಸುವವರು ಸಾಕಷ್ಟು

ಮಂದಿ ಇನ್ನು ಸಮಾಜದಲ್ಲಿದ್ದಾರೆ. ಅವರಿಗೆ ಇವತ್ತು ಈ ವಿದ್ಯಮಾನಗಳು ಆಘಾತ ತಂದಿದೆ. ಅವರೆಲ್ಲರೂ ಕೂಡ ಇದರ ಬಗ್ಗೆ ಪ್ರಶ್ನೆ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಉದಾಹರಣೆಗೆ Bar Council of Karnataka/ ವಕೀಲರ ಪರಿಷತ್ತು, ಅದು ಇವತ್ತು ಈ ವಿದ್ಯಮಾನದಿಂದ ಚಕಿತರಾಗಿ ಒಂದು ಸರ್ವಾನುಮತದ ನಿರ್ಣಯ ತೆಗೆದುಕೊಂಡು ವಕೀಲರು ಇವತ್ತು ಬೀದಿಗೆ ಬಂದಿದ್ದಾರೆ. ಮಾಜಿ ಲೋಕಾಯುಕ್ತರು ಇದರ ವಿರುದ್ಧ ಇವತ್ತು ರಸ್ತೆಗೆ ಬಂದಿದ್ದಾರೆ. ಅನೇಕ ಹಿರಿಯರು ಇವತ್ತು ರಸ್ತೆಗೆ ಬಂದು ದಿನನಿತ್ಯ ಡಾ|| ಅಂಬೇಡ್ಕರ್ ಬೀದಿಯಲ್ಲಿ ಬೇರೆ ಬೇರೆ ವಿದ್ಯಮಾನಗಳನ್ನು ನಾವು ನೋಡುತ್ತಿದ್ದೇವೆ. ಕೆಲವು ವರ್ಷಗಳ ಹಿಂದೆ ಒಂದು ಪದವನ್ನು ನಾವು ಮೊದಲನೆಯ ಬಾರಿಗೆ ಕೇಳಿದೆವು. Unconstitutional authorities/Extra constitutional authorities ಎಂಬ ಒಂದು ಪದವನ್ನು ನಾವು ಕೇಳಿದೆವು. Constitutionally ಅಥವಾ legally ಯಾವುದೋ ಒಂದು ವ್ಯಕ್ತಿಗೆ ಒಂದು ಸ್ಥಾನ ಸಿಕ್ಕಾಗ ಆ ಸ್ಥಾನದಿಂದ ಅವನು ಕಾರ್ಯ ಮಾಡುವುದರ ಬದಲು ಅವನ ಹೆಸರು ಹೇಳಿಕೊಂಡು ಅವನ ಹೆಸರು ದುರುಪಯೋಗ ಪಡಿಸಿಕೊಂಡು ಬೇರೆಯವರು ಆ ಕಾರ್ಯ ಮಾಡಿದರೆ ಆ ಸ್ಥಾನದ ದುರುಪಯೋಗವಾದರೆ ಅದನ್ನು extra constitutional authorities ಎಂದು ಇಡೀ ದೇಶದಲ್ಲಿ ತಮಗೂ ಅದು ಗೊತ್ತಿದೆ. 40 ವರ್ಷದಿಂದ ಬಹಳ ದೊಡ್ಡ ಒಂದು ಚರ್ಚೆ ಆಗುತ್ತಿದೆ. Extra constitutional authorities ಬಗ್ಗೆ. ಇವತ್ತು ಕರ್ನಾಟಕ ಲೋಕಾಯುಕ್ತದಲ್ಲಿ ಮಧ್ಯವರ್ತಿಗಳ ಕಾಟ, ಮಧ್ಯವರ್ತಿಗಳ ಆಟ, extra constitutional authorities ಅವರ ದೊಡ್ಡ ಪಾತ್ರ ಇವತ್ತು ಪ್ರತಿ ದಿವಸ ನಾವು ನೋಡುತ್ತಿದ್ದೇವೆ. ಇವತ್ತು ರಾಜ್ಯದಲ್ಲಿ ಒಂದು ಟಿ.ವಿ.ಚಾನೆಲ್ "Times Now" ಎಂದು ಇದೆ. ಅವರು "The Naiton wants to know" ಎಂದು ಕೇಳುತ್ತಾರೆ. ನಾನು ಇವತ್ತು ಕೇಳುತ್ತೇನೆ, The State wants to know who is this Krishna Rao? Is he an officer in Lokayuktha? I don't know. Who is this Ashwin Rao? Is he the GPA holder of some dignitary? I don't know. Who is this Bhaskar? Is he official liason

officer in Lokayuktha; We don't know. ಈ ರೀತಿ ಈ ಮೂರು ಜನರದ್ದು ಪಾತ್ರ ಲೋಕಾಯುಕ್ತ ಸಂಸ್ಥೆಯ ಮಾನವನ್ನು ಇವತ್ತು ಮೂರಾಬಟ್ಟೆ ಮಾಡಿ ಬಿಟ್ಟಿದೆ. ಆ ಘಟನೆಯನ್ನು ಕೇಳಿದರೆ ಆಶ್ಚರ್ಯವಾಗುತ್ತದೆ. ಇಂತಹ ಸಂಸ್ಥೆ ಈ ಮಟ್ಟಕ್ಕೆ ಬಂತಾ? ಯಾರದೋ ಕೈಗೆ ಆಟ ಆಡುವ ಸಂಗತಿ ಆಯಿತಾ ಎಂದು ಅನಿಸುತ್ತದೆ. ಪ್ರಚಲಿತ ಈ ತ್ರಿಮೂರ್ತಿಗಳು ಇವತ್ತು ಏನು ಸುದ್ದಿ ಮಾಡುತ್ತಿದ್ದಾರೆ, ಒಂದು ರೀತಿಯ ಸರ್ಕಾರಿ ವ್ಯವಸ್ಥೆಯಲ್ಲಿ ಏನು ಅಧಿಕಾರ ವರ್ಗ, ಅಧಿಕಾರಶಾಹಿ ಎಂದು ಏನು ಹೇಳುತ್ತೇವೆ, ಜೊತೆಗೆ Political executive ನಲ್ಲಿ ಕೂಡ ಒಂದು ರೀತಿಯ ಆತಂಕವನ್ನು ನಿರ್ಮಾಣ ಮಾಡುತ್ತಿದ್ದಾರೆ. They are creating terror. ಇವರನ್ನು ಆತಂಕವಾದಿಗಳು ಎಂದು ಕರೆಯಬಹುದಾ? I don't know. ಆದರೆ bureaucratic level ನಲ್ಲಂತೂ terriorist ಮಾಡುವಂಥ ಒಂದು ಕೆಲಸವನ್ನು ಆತಂಕವನ್ನು ಇವತ್ತು ನಿರ್ಮಾಣ ಮಾಡುತ್ತಿದ್ದಾರೆ. ಇವರದ್ದು ಬಹಳ sophisticated modus-operandi. ಈ ಮೂರು ಜನರ ಜೊತೆ ಇನ್ನೊಂದು ಹೆಸರನ್ನು ನಾವು ಕೇಳುತ್ತಿದ್ದೇವೆ. ಸೈಯ್ಯದ್ ರಿಯಾಜ್. Who is this Syed Riyaz? ಅವರು ಹೇಳುತ್ತಾರೆ, Joint Commissioner post ನಲ್ಲಿರುವವರು. DIG Rank ನಲ್ಲಿರುವವರು. Sub Inspector ಆಗಿ ಲೋಕಾಯುಕ್ತಕ್ಕೆ ಬಂದರು. ಇಲ್ಲಿಯೇ ಬೆಳೆದು ಬೆಳೆದು ಲೋಕಾಯುಕ್ತದಲ್ಲಿ absorb ಆಗಿ ಬಿಟ್ಟರು. ಇವತ್ತು ಅವರು Joint Commissioner rank. PRO ಕೆಲಸ ಲೋಕಾಯುಕ್ತದ ಹಿರಿಮೆಯನ್ನು ಜಾಸ್ತಿ ಮಾಡುವುದಕ್ಕೆ ಇರಬೇಕಾಗಿತ್ತು. ಆದರೆ ಲೋಕಾಯುಕ್ತದಲ್ಲಿ ಇರುವವರ needs ಅನ್ನು fulfill ಮಾಡುವಂಥ PRO ಇವತ್ತು ಆಗಿ ಬಿಟ್ಟಿದ್ದಾರೆ. ಇವತ್ತು ಈ ಮಧ್ಯವರ್ತಿಗಳ ಹಿಡಿತಕ್ಕೆ ಸಿಕ್ಕಿರುವ ಅನೇಕ ಉದಾಹರಣೆಗಳು ಪ್ರತಿನಿತ್ಯ ಮಾಧ್ಯಮದಲ್ಲಿ ಬರುತ್ತಿವೆ. ಸ್ವತಃ ಲೋಕಾಯುಕ್ತ S.P. ಅವರು ಸೋನಿಯಾ ನಾರಂಗ್ ಈ ಕುರಿತು complaint register ಮಾಡಿಕೊಂಡಿದ್ದಾರೆ. ಆ complaint register ಮಾಡಿಕೊಳ್ಳುವಾಗ ಬಹಳ detail ಆಗಿ complaint ಬರೆದಿದ್ದಾರೆ. ಅವರು ಹೇಳುವ ಒಂದು ಮಾತು ಈ ಸದನದಲ್ಲಿ ನಾವೆಲ್ಲರೂ reflect ಮಾಡಬೇಕು. ಅವರು ಹೇಳುತ್ತಾರೆ, "I request you to take up the

matter with appropriate authorities to check the CCTV footage especially on 5th and 7th of May. The common man looks at this institution with lot of faith as well as awe. It becomes our foremost duty as well as responsibility to live up to the genuine expectation of the common people as well as the ideals of this esteemed institution" ಎಂದು complaint ನಲ್ಲಿ ಬರೆಯುತ್ತಾರೆ. ಅವರು ಇನ್ನೊಂದನ್ನು ಬರೆಯುತ್ತಾರೆ. To identifying those indulging in such nefarious activities which bring disrepute to this esteemed institution. ಇದು ಸೋನಿಯಾ ನಾರಂಗ್ ಅವರು ರಿಜಿಸ್ಟ್ರಾರ್ ಲೋಕಾಯುಕ್ತಕ್ಕೆ ಬರೆದಿರುವ ಪತ್ರ. ಸನ್ಮಾನ್ಯ ಸಭಾಧ್ಯಕ್ಷರೆ, 56/2015 ಒಂದು FIR register ಆಗಿದೆ. It is registred on 1st July 2015. 2015 ರಲ್ಲಿ ಈ FIR register ಆಗಿದೆ, against ಅಶ್ವಿನಿರಾವ್ S/O. ವೈ.ಭಾಸ್ಕರರಾವ್, FIR has been filed. ಎರಡನೆಯದು, Bangalore Urban D.C. Sri. Shankar, ಯಾರ ಬಗ್ಗೆ ವ್ಯಾಪಕವಾದ ಹೊಗಳಿಕೆ, ಬೆಂಬಲ ಬಂದಿದೆ, ಸರ್ಕಾರಿ ಒತ್ತುವರಿ ಭೂಮಿಯನ್ನು ತೆಗೆಯುತ್ತಿದ್ದಾರೆ. ಸರ್ಕಾರದ ಭೂಮಿಯನ್ನು ವಾಪಸ್ಸು ಕೊಡಿಸುತ್ತಿದ್ದಾರೆ, ಸಾವಿರಾರು ಕೋಟಿ, ನೂರಾರು ಕೋಟಿ ಎಂದು ನಾವು ಪ್ರತಿ ದಿವಸ ನೋಡುತ್ತಿದ್ದೇವಲ್ಲ, ಅವರ ಈ ಕಾರ್ಯಕ್ಕೆ ಅಶ್ವಿನ್‌ರಾವ್ phone ಮಾಡಿ ಅಡ್ಡಿ ಮಾಡಿ ನೀವು ತೆಗೆಯಬಾರದು ಎಂದು ಹೇಳಿರುವುದು ಕೂಡ ಇವತ್ತು it is in public domain. BDA Commissionser ರವರಿಗೆ ಅಶ್ವಿನ್‌ರಾವ್ ನೂರಕ್ಕೂ ಜಾಸ್ತಿ phone ಗಳನ್ನು ಮಾಡಿದ್ದಾರೆನ್ನುವುದು ಇವತ್ತು ನಮ್ಮ ಗಮನಕ್ಕೆ ಬಂದಿದೆ. ಬೆಂಗಳೂರು ತಾಲ್ಲೂಕು ತಹಶೀಲ್ದಾರರನ್ನು ನಾನು ಮಾತನಾಡಿಸಿದೆ. ನೀವು ಏಕೆ ಆ ಕೆಲಸ ಮಾಡುತ್ತಿದ್ದೀರಿ, ನೀವು ಏಕೆ ಈ ಕೆಲಸ ಮಾಡುತ್ತಿದ್ದೀರಿ ಎಂದು ಕೇಳುವುದಕ್ಕೆ ಕನಿಷ್ಠ ಬಾರಿ 3 ಸಲ ಅವರನ್ನು ಶ್ರೀ ಅಶ್ವಿನ್‌ರಾವ್‌ರವರು ಲೋಕಾಯುಕ್ತ office ಗೆ ಕರೆಸಿಕೊಂಡಿರುವುದು ಗಮನಕ್ಕೆ ಬಂದಿದೆ. I want to know what is that authority that gives him power to use Lokayuktha building/Lokayuktha office? ಇದರ ಬಗ್ಗೆ ಇವತ್ತು ನಾವು ಬಹಳ

ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ. ಅದಕ್ಕೋಸ್ಕರ ನಾನು extra constitutional authority ಎನ್ನುವ ಪದವನ್ನು use ಮಾಡಿದ್ದು. ನನಗೆ ಈ ಸದನಕ್ಕೆ impeachment ಮಾಡುವುದಕ್ಕೆ ಅವಕಾಶ ಇಲ್ಲವೆಂದು ತಾವು ಹೇಳಿಬಿಟ್ಟಿದ್ದೀರಿ. ಅದೇನೋ mutatis mutandis ಎನ್ನುವುದು ಇವತ್ತು ರಾಜ್ಯದಲ್ಲಿ ಚಲಾವಣೆಯಲ್ಲಿರುವ ಪದ. ನಾವು impeachment ಮಾಡುವುದಕ್ಕೆ ಆಗದಿದ್ದರೂ ಕೂಡ ಹೊರಗಡೆ unimpeachable evidence ಇವತ್ತು ಸಿಕ್ಕಿದೆ. ಲೋಕಾಯುಕ್ತ office ನಲ್ಲಿ ಏನೇನು ವಿದ್ಯಮಾನ ಆಗುತ್ತಿದೆ, ಇದೇ ವಿದ್ಯಮಾನ ಮುಂದುವರಿದರೆ it is injurious to the health of the Karnataka State's administrative health ಎನ್ನುವ unimpeachable evidence ಇವತ್ತು ಸಿಕ್ಕಿದೆ. ಇನ್ನು, ನನ್ನ ಹತ್ತಿರ ಇನ್ನೊಂದು specific example ಇದೆ. Example ಎಲ್ಲವನ್ನೂ ಓದಲಿಕ್ಕೆ ಹೋಗುವುದಿಲ್ಲ. ಇವರ modus operandi ಏನು? ಎಷ್ಟು suave nature ನಲ್ಲಿ ಮಾಡುತ್ತಾರೆ? ಯಾವ ರೀತಿ ಮಾಡುತ್ತಾರೆ? ಈ ಮೂರು ಜನ ಸೇರಿಕೊಂಡು they will choose their targets, they will choose their victims. ಶೋಲೆ ಎನ್ನುವಂಥ ಒಂದು ಸಿನಿಮಾ ಬಂದಿತ್ತು. ಆ ಸಿನಿಮಾದಲ್ಲಿ ಗಬ್ಬರ್‌ಸಿಂಗ್ "ಚುನ್‌ಚುನ್‌ಕರ್ ಮಾರೂಂಗಾ" ಎಂದು ಹೇಳುತ್ತಿದ್ದ. ಅದೇ ತರಹ ಇವರು they will choose. Just come and meet ಎಂದು ಅವರಿಗೆ ಒಂದು phone call ಹೋಗುತ್ತದೆ, ಅದೂ ಕೂಡ ಲೋಕಾಯುಕ್ತಕ್ಕೆ ಸಂಬಂಧಪಟ್ಟ ಫೋನೇ ಹೋಗುತ್ತದೆ. ಮಾನ್ಯ ರಮೇಶ್‌ಕುಮಾರ್‌ರವರೆ, ನಿಮಗೂ ಪರಿಚಯವಿರುವ ಒಬ್ಬ ಅಧಿಕಾರಿಯವರಿಗೆ ದಯವಿಟ್ಟು ನಿಮ್ಮನ್ನು ಲೋಕಾಯುಕ್ತದವರು ನೋಡಬೇಕೆಂದಿದ್ದಾರೆ, ನೀವು ನಾಳೆ ಬನ್ನಿ ಎಂದು ಏಪ್ರಿಲ್ 20ನೇ ತಾರೀಖಿಗೆ ಒಂದು phone call ಹೋಯಿತು. ಮಾರನೇ ದಿವಸ ಬಸವ ಜಯಂತಿ ಆಗಿತ್ತು. ಎಲ್ಲಿಗೆ ಬರಲಿ ಎಂದು ಆ ಅಧಿಕಾರಿ ಕೇಳಿದರು. ನೀವು ಲೋಕಾಯುಕ್ತರವರ ಮನೆಗೆ ಬನ್ನಿ ಎಂದು ಹೇಳಿದ್ದಾರೆ. ಆಯಿತು ಬರುತ್ತೇನೆ, ಎಷ್ಟು ಗಂಟೆಗೆ ಬರಬೇಕೆಂದು ಅಧಿಕಾರಿ ಕೇಳಿದ್ದಾರೆ. ಸಂಜೆ 7–00 ಗಂಟೆಗೆ ಬನ್ನಿ ಎಂದು ಹೇಳಿದರು. ಸರಿ, ಏನಾದರೂ specific ವಿಷಯ ಇದೆಯೇನೋ ನನ್ನ ಹತ್ತಿರ

ಮಾತನಾಡುವುದಕ್ಕೆ ನಾನು prepare ಆಗಿ ಬರುತ್ತೇನೆಂದು ಹೇಳುತ್ತಾರೆ. ಪಾಪ, ಲೋಕಾಯುಕ್ತ ಎಂದಾಕ್ಷಣ ಅವೆಲ್ಲ ಭಾವನೆ ಬರುತ್ತದೆ. ಆ ತರಹದ್ದು ಏನಿಲ್ಲರೀ, ನೀವು ಬನ್ನಿ, ಲೋಕಾಯುಕ್ತದವರನ್ನು ಭೇಟಿ ಮಾಡಿ ಎಂದರು. ಪಾಪ ಈ ಮನುಷ್ಯ ಮಾರನೇ ದಿವಸ ಹೋಗಿ ಹಣ ತೆತ್ತು ಒಂದು ಒಳ್ಳೆಯ bouquet ತೆಗೆದುಕೊಂಡು he went to Lokayuktha's residence. ಅವನಿಗೇನು ಗೊತ್ತು? ಇಲ್ಲಿ ಲೋಕಾಯುಕ್ತರ ಮನೆಗೆ bouquet ತಂದರೆ, I will receive brickbats ಎಂದು ಅವನಿಗೇನು ಗೊತ್ತು? ಆ ಮನುಷ್ಯ bouquet ತೆಗೆದುಕೊಂಡು ಹೋದ. ಹೋದ ತಕ್ಷಣ first room ನಲ್ಲಿ ಕೃಷ್ಣರಾವ್ ಭೇಟಿ ಆಗುತ್ತಾರೆ, ಕೂರಿಸಿಕೊಳ್ಳುತ್ತಾರೆ. ನಂತರ next room ಗೆ ಕರೆದುಕೊಂಡು ಹೋಗುತ್ತಾರೆ. ಅಲ್ಲಿ ಇನ್ನೊಬ್ಬರು ಭೇಟಿಯಾಗುತ್ತಾರೆ. ಅವರು ಇವರ ಇಲಾಖೆಯ ಬಗ್ಗೆ ಸರ್ಕಾರಿ, ರಾಜ್ಯ ಸರ್ಕಾರದ ಒಂದು ಸಂಸ್ಥೆಯ ಮುಖ್ಯಸ್ಥರು ಅವರು. ಅವರ ಜೊತೆಯೆಲ್ಲ ಮಾತನಾಡಿ – "ನಿಮ್ಮ ಬಗ್ಗೆ ತುಂಬಾ complaints ಇವೆ, ಯಾವುದೋ ಒಂದು ವಿಶೇಷ ಕೆಲಸ, ನೀವು ಅದನ್ನು ಯಾವಾಗಿನಿಂದ ಮಾಡುವುದಕ್ಕೆ ಪ್ರಾರಂಭಿಸಿದಿರಿ,...

ಅಧ್ಯಕ್ಷರು: ಬೀಗತನ ಮಾಡಿಕೊಳ್ಳುವುದಕ್ಕೆ ಇರಬಹುದು.

ಶ್ರೀ ಎಸ್. ಸುರೇಶ್ ಕುಮಾರ್: ಮುಂದೆ ಹೇಳುತ್ತೇನೆ. ಬೀಗತನ, ಇಂಥ ಬೀಗರು ಆಗಿಹೋಗಿಬಿಟ್ಟರೆ dowry deaths ಜಾಸ್ತಿ ಆಗಿಬಿಡುತ್ತದೆ. So, ಎಲ್ಲಾ ಕೇಳಿಬಿಟ್ಟು ಆಯಿತು ನೀವು ಹೋಗಿ ಎಂದು ಕಳುಹಿಸಿದ. ಆಚೆಗೆ ಬಂದಮೇಲೆ ಈ ಕೃಷ್ಣರಾವ್ ಒಳಗಡೆ ಮಾತನಾಡಿ adjust ಮಾಡಿಕೊಳ್ಳಿ ಎಂದು ಹೇಳುತ್ತಾನೆ. ಏನು ಸ್ವಾಮಿ, ಏನು adjust ಮಾಡಿಕೊಳ್ಳಬೇಕೆಂದು ಈ ಅಧಿಕಾರಿಗೆ ಹಿಂದೆ ಗೊತ್ತಿಲ್ಲ, ಮುಂದೆ ಗೊತ್ತಿಲ್ಲ. ಇಲ್ಲ, ನಿಮ್ಮ ಮೇಲೆ ತುಂಬಾ complaint ಇದೆ, ಅಶ್ವಿನ್‌ರಾವ್ ಬಹಳ disciplined, ಒಂದೇ ಒಂದು ಸಲ ಕರೆಯುವುದು, ಆಗ settlement ಮಾಡಿಕೊಂಡರೆ ಬಹಳ ಒಳ್ಳೆಯದು, ಇಲ್ಲದಿದ್ದರೆ ಬಹಳ ಕಷ್ಟ ಎಂದು ಹೇಳಿದರು. ಅದನ್ನು ಮಾತನಾಡುತ್ತಿದ್ದಾಗ ಇದ್ದಕ್ಕಿದ್ದಹಾಗೆ ಆಗ ಒಬ್ಬರು Additional Chief Secretary ಆ ಮನೆಗೆ

ಬರುತ್ತಾರೆ. That was on 21st April. ಈಗ Additional Chief Secretary ಬಂದುಬಿಟ್ಟಿದ್ದಾರೆ, ನೀವು ಹೋಗಿ, ಆಮೇಲೆ ಮಾತನಾಡೋಣ ಎಂದು ಕಳುಹಿಸಿಬಿಟ್ಟರು. ಅವರು good riddance ಎಂದು ಬಂದರು.

ಅಧ್ಯಕ್ಷರು: Additional Chief Secretary ನಮ್ಮ ಸರ್ಕಾರದವರಾ?

ಶ್ರೀ ಎಸ್. ಸುರೇಶ್ ಕುಮಾರ್: ಹೌದು ಸರ್, Additional Chief Secretary ನಮ್ಮ ಸರ್ಕಾರದವರೇ, ಈಗ ಇರುವವರೇ. I don't know whether that person becomes Chief Secretary. I don't know. ಅದಾದಮೇಲೆ 4 ದಿವಸ ಬಿಟ್ಟು ನೀವು ಬಂದುಬಿಡಿ West End Hotel ಗೆ ಎಂದು ಮತ್ತೆ phone call ಬಂತು. ಇವರು ಹೋದರು, ಆದರೆ ಈ ಸಲ bouquet ತೆಗೆದುಕೊಂಡು ಹೋಗಲಿಲ್ಲ. West End Hotel ಗೆ ಹೋಗಿ ಅವರ ಜೊತೆಗೆ ಚರ್ಚೆ ಮಾಡಿದರು. ನೋಡಿ, ನಿಮ್ಮ ಮೇಲೆ ತುಂಬಾ complaint ಇದೆ, ನಮಗೆ ಯಾರ ಮೇಲೆ ಕನಿಕರ ಇದೆ, ಅವರನ್ನು ಕರೆದು ನಾವು ಮಾತನಾಡುತ್ತೇವೆ. ನೀವು ಇಲ್ಲಿಯೇ settle ಮಾಡಿಕೊಂಡರೆ ಬಹಳ ಒಳ್ಳೆಯದು. ಇಲ್ಲದೇ ಇದ್ದರೆ ಏನಾಗುತ್ತದೆ ಎಂದರೆ, BBMP ಯಲ್ಲಿ ಒಬ್ಬರು CAO ಕನಕರಾಜು ಎಂದು ಇದ್ದರು. ಅವರ ಸ್ಥಿತಿ ಏನಾಯಿತು ಎಂದು ಗೊತ್ತೇ? ಅವರು ನಮ್ಮ ಜೊತೆ adjust ಆಗಲಿಲ್ಲ. ಅವರ ಮನೆಯನ್ನು raid ಮಾಡಿದೆವು. ಅವರನ್ನು ಜೈಲಿಗೆ ಕಳುಹಿಸಿದೆವು. Here is an example for you. So, ದಯವಿಟ್ಟು oblige ಮಾಡಿಬಿಡಿ ಎಂದರು. ಅದಕ್ಕೆ ಇವರು ಹೇಳಿದರು, ಸರ್, ಅಂಥದ್ದೇನಿಲ್ಲ, ನನ್ನ ಇಲಾಖೆಯೂ ಅಂಥದ್ದಲ್ಲ ಎಂದು he expressed his inability, he expressed his sincerity. ಕೊನೆಗೆ ಒಂದು ಕೊಟ್ಟುಬಿಡಿ ಎಂದರು. ಒಂದು ಅಂದರೆ ಒಂದು ಲಕ್ಷವೇ ಎಂದು ಕೇಳಿದರು. ಅದಕ್ಕೆ ಒಂದು ಕೋಟಿಗಿಂತ ಕಡಿಮೆ ಏನು ಮಾತೇ ಆಗುವುದಿಲ್ಲವೆಂದರು. ಅದಕ್ಕೆ ಅಧಿಕಾರಿ, ಸರ್, impossible ಎಂದರು. ಕೊನೆಗೆ reverse sensex ಅದು. 50 ಲಕ್ಷಕ್ಕೆ ಇಳಿಯಿತು, 25 ಲಕ್ಷಕ್ಕೆ ಇಳಿಯಿತು, 10 ಲಕ್ಷಕ್ಕೆ ಇಳಿಯಿತು. ಸರ್, ಆಗುವುದಿಲ್ಲ, ನನ್ನ ಕೈಲಿ ಖಂಡಿತ ಆಗುವುದಿಲ್ಲ ಎಂದ ತಕ್ಷಣ he was bold, he was confident about his activities, he said so. ನಿಮ್ಮ ಇಲಾಖೆಯಲ್ಲಿ ಆ

ವಿಭಾಗ ನೋಡಿಕೊಳ್ಳುವುದು ಯಾರು ಎಂದು ಕೇಳಿದರು. ಅವರು ಇನ್ನೊಬ್ಬರ ಹೆಸರು ಹೇಳಿದರು. ಅವರ phone number ಕೊಡಿ ಎಂದು ಕೇಳಿ ಮಾರನೇ ದಿವಸ ಅವರನ್ನು ಕರೆಸಿ ಕರೆದುಕೊಂಡು ಹೋದರು. So, ಈ ರೀತಿ ಮೊದಲು ಅವರನ್ನು ಕರೆಯುತ್ತಾರೆ, ನಿಮ್ಮ ಮೇಲೆ ಎಷ್ಟು complaints ಇದೆ ಎಂದು gently he will be informed. ಆಮೇಲೆ, ನೀವು ಇದಕ್ಕೆ ಒಪ್ಪಿಕೊಳ್ಳದಿದ್ದರೆ ಏನು ಕಾದಿದೆ ಎಂದು ಹೇಳುತ್ತಾರೆ. ಆಮೇಲೆ figure ಗಳಿಗೆ ಬರುತ್ತಾರೆ. Figure ಅನ್ನು collect ಮಾಡಿಕೊಳ್ಳುತ್ತಾರೆ. ಇದು ನಡೆಯುತ್ತಿರುವುದು ಎಲ್ಲಿ? ಲೋಕಾಯುಕ್ತ ಕಛೇರಿಯಲ್ಲಿ Crescent road ನಲ್ಲಿರುವ ಒಂದು ಮನೆಯಲ್ಲಿ. ಆ crescent road ನಲ್ಲಿರುವ ಮನೆ ಯಾವುದು ಎಂದು ನೋಡುತ್ತಾ ಹೋದೆ.

I don't know whether Hon'ble Minister Sri H.K. Patil is a proud neighbour of that house. I don't know. H.K Patil ರವರ ಮನೆ ಪಕ್ಕದಲ್ಲಿರುವ ಮನೆಯಲ್ಲಿ ಇವೆಲ್ಲ ಆಗುತ್ತಿರುವುದು. ಅಲ್ಲಿ Board ನೋಡಿದೆ. ವೈ.ಭಾಸ್ಕರರಾವ್, ಲೋಕಾಯುಕ್ತ ಎಂದು ಇತ್ತು. ಏನು ಸ್ವಾಮಿ, ನಿಮ್ಮ ಮನೆ ಪಕ್ಕದಲ್ಲಿಯೇ ಈ ವಿದ್ಯಮಾನವೆಲ್ಲ ನಡೆಯುತ್ತಿದೆ. ಇಡೀ ರಾಜ್ಯದ ಅಧಿಕಾರಿಶಾಹಿಯನ್ನು ಅಲುಗಾಡಿಸುವ ಘಟನೆ ನಿಮ್ಮ ಮನೆ ಪಕ್ಕದಲ್ಲಿ ನಡೆಯುತ್ತಿದೆ. ನಿಮಗೆ ಗೊತ್ತಿಲ್ಲದೆ ಇರುವುದು ಬಹಳ ಒಳ್ಳೆಯದು. ಗೊತ್ತಿದ್ದರೆ ಅದೇನೋ ಒಂದು ಕಥೆ ಆಗುತ್ತಿತ್ತು.

ಶ್ರೀ ಬಸವರಾಜ ಬೊಮ್ಮಾಯಿ: ಆಕಸ್ಮಾತ್ ಅವರು ಇವರ ಮನೆಗೆ ಬಂದು ಮಾಡಿಕೊಂಡಿದ್ದರೆ ಏನು ಮಾಡುತ್ತಿದ್ದರು? ನಮ್ಮ ಮನೆಯಲ್ಲಿ ಬೇಡ ಪಕ್ಕದ ಮನೆಗೆ ಹೋಗೋಣವೆಂದು ಅಲ್ಲಿ ಮಾತುಕತೆ ಮಾಡಿದ್ದರೆ, ಇವರು ಯಾರೋ Chief Secretary ಬಂದಿದ್ದಾರೆ ತಡಿ ಎಂದು ಹೇಳಿ ಚಾ ತರಿಸಪ್ಪ ಎಂದು ಹೇಳಿ ಚಾ ತರಿಸಿ.....

ಶ್ರೀ ಎಸ್. ಸುರೇಶ್‌ಕುಮಾರ್: ಇಷ್ಟು ಘಟನೆಗಳು ನಡೆಯುತ್ತಿವೆ. ಈಗ ಹೇಳಿ, ಜನಮಾನಸದಲ್ಲಿ ಇಷ್ಟು ಸ್ಪಷ್ಟವಾಗಿ ಲೋಕಾಯುಕ್ತದ ಬಗ್ಗೆ ಈ ಚಿತ್ರಣ ಬಂದಿರುವಾಗ ಲೋಕಾಯುಕ್ತ ಇರುವುದು ಸ್ವಚ್ಛತೆ ಮಾಡುವುದಕ್ಕಲ್ಲ, ಸ್ವಚ್ಛ

ಇರುವವರನ್ನೂ ಕೂಡ ಹಾಳು ಮಾಡುವುದಕ್ಕೆ, ಅವರನ್ನೂ ಕೂಡ ಭ್ರಷ್ಟರನ್ನಾಗಿ ಮಾಡುವುದಕ್ಕೆ ಎಂದು ಬಂದಾಗ, ಜನಪ್ರತಿನಿಧಿಗಳಿಂದ ತುಂಬಿರುವ ಈ ಸದನ ನಾವು ಸುಮ್ಮನೆ ಇರುವುದಕ್ಕೆ ಆಗುತ್ತದೆಯೇ? ನಾವು ಚರ್ಚೆ ಮಾಡಬಾರದೇ? ಇದಕ್ಕೆ ಒಂದು ಪರಿಹಾರ ಹುಡುಕಬಾರದೇ? ಇದರ ಬಗ್ಗೆ ನಾವು ಇವತ್ತು ಗಂಭೀರವಾಗಿ ಯೋಚನೆ ಮಾಡಬೇಕು. ಸುಮ್ಮನೆ legal stand, technical stand ಇದ್ದರೆ ಆಗುವುದಿಲ್ಲ. It is not a moral legal problem. It is a moral problem. It is an ethical problem. ಇಲ್ಲದಿದ್ದರೆ ಮುಂದೆ ಸಮಾಜ, ರಾಜ್ಯ ಯಾವ ರೀತಿ ಹೋಗುತ್ತದೆ ಎಂದು ನೀವು, ನಾವು ಊಹೆ ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಇವತ್ತು ನಾವು ಕಡಿವಾಣ ಹಾಕಬೇಕು. ಇವತ್ತು SIT ರಚಿಸಿಬಿಟ್ಟಿದ್ದೇವೆ ಎಂದು ಸರ್ಕಾರ ಹೇಳುತ್ತದೆ, ಸನ್ಮಾನ್ಯ Law Minister ಕೂಡ ಹೇಳುತ್ತಾರೆ. SIT- Special Investigating Team. SIT ಎಂದು ಯಾರು ಇಟ್ಟರೋ ಜಯಚಂದ್ರರವರೆ ಗೊತ್ತಿಲ್ಲ. ಅದು Sit ಆಗಿದೆ. ಅದು ಕುಳಿತುಕೊಳ್ಳಬೇಕಷ್ಟೇ. I do not know when it is going to stand. ಈಗ ಗೊತ್ತಾಯಿತು, ಮಧ್ಯಾಹ್ನ the first complainant Krishnamurthy 3 ಗಂಟೆಗೆ SIT ಮುಂದೆ ಹೋಗುತ್ತಿದ್ದಾರೆ, ಅವರು ತಮ್ಮ ವಿಚಾರವನ್ನು ಹೇಳುತ್ತಾರೆಂದು ನನ್ನ ಗಮನಕ್ಕೆ ಬಂದಿದೆ.

ಅಧ್ಯಕ್ಷರು: ಇವತ್ತು?

ಶ್ರೀ ಎಸ್. ಸುರೇಶ್‌ಕುಮಾರ್: ಇವತ್ತು 3 ಗಂಟೆಗೆ ಇದೆ. ಈಗ SIT ಏಕೆ ರಚಿಸಿದರು; ಅದೊಂದು ಬಹಳ ವಿಚಿತ್ರ. ಈ ರೀತಿ complaint ಮಗನ ಮೇಲೆ, ಕೃಷ್ಣರಾವ್ ಎನ್ನುವ ಖಾಸಾ ಶಿಷ್ಯನ ಮೇಲೆ, ಒಬ್ಬ ರಿಯಾಜ್ ಎನ್ನುವವರ ಮೇಲೆ, ಒಬ್ಬ ಭಾಸ್ಕರ್ ಎನ್ನುವವರ ಮೇಲೆ, ಸಭಾಧ್ಯಕ್ಷರೆ, ಬಹಳ ವಿಶೇಷ ಎಂದರೆ ಆ ಭಾಸ್ಕರ್ ಈಗ he wants to become an approver. The main player wants to become an approver as in any criminal case. ಅವರ ಮೇಲೆ ಬಂದಾಗ ನಮ್ಮ ಸನ್ಮಾನ್ಯ ಲೋಕಾಯುಕ್ತರು CCBಗೆ hand over ಮಾಡಿದರು. ಕೇವಲ handle ಮಾಡಲಿಲ್ಲ, ಒಬ್ಬ officer ಅನ್ನೂ ಕೂಡ ಹೆಸರಿಸಿ, ನೀವು investigate ಮಾಡಬೇಕು ಎಂದರು. ಅಲ್ಲವೇ Law Minister

ರವರೇ? That police officer was sensitive. ನಮ್ಮ ಮಾವನದ್ದೇ ಒಂದು ಕೇಸ್ ಲೋಕಾಯುಕ್ತದಲ್ಲಿ ನಡೆಯುತ್ತಿದೆ ಎಂದು ಅವರಿಗೆ ಗೊತ್ತಾಯಿತು. ನಮ್ಮ ಮಾವನ ವಿಚಾರಣೆ ನಡೆಯುತ್ತಿರುವಾಗ ನಾನು ಇದನ್ನು investigate ಮಾಡಬಾರದು ಎಂದು ಅಷ್ಟು ಸೂಕ್ಷ್ಮತೆ ಆ Inspector ಗೆ ಇತ್ತು. ಆ Inspector, Joint Commissioner, DGP ಯೋ; ಯಾರೋ; ನನಗನಿಸುತ್ತದೆ, ಅಷ್ಟು ಸೂಕ್ಷ್ಮತೆ ಲೋಕಾಯುಕ್ತವನ್ನು lead ಮಾಡುತ್ತಿರುವವರಿಗೂ ಬಂದುಬಿಟ್ಟಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು; ಇವತ್ತು institution ಅನ್ನು head ಮಾಡುವವರು, ಮುಖ್ಯಸ್ಥರು ಇಷ್ಟು ಸೂಕ್ಷ್ಮತೆ ಕಳೆದುಕೊಳ್ಳಬಾರದು. ಸಂವೇದನಾರಹಿತ ಆಗಬಾರದು. Insensitive ಆಗಬಾರದು. ಈ ರೀತಿ ಇರುವುದರಿಂದ ಯಾವಾಗ CCB ಯವರು ನಾವು ನಡೆಸುವುದಿಲ್ಲವೆಂದು ಹಿಂಜರಿದರೋ, ಒಂದು Special Investigating Team ಮಾಡಿ ಎಂದು ಇವರೇ ಬರೆಯುತ್ತಾರೆ and Government duly obliged. ತುರ್ತು ಪರಿಸ್ಥಿತಿ ಸಮಯದಲ್ಲಿ ಒಂದು ಮಾತನ್ನು ನಾವು ಕೇಳುತ್ತಿದ್ದೆವು.

ಅಧ್ಯಕ್ಷರು: ಸುರೇಶ್‌ಕುಮಾರ್‌ರವರೆ, Section 15 ನಲ್ಲಿ ಅದಕ್ಕೆ ಅವಕಾಶವಿದೆಯೇ?

ಶ್ರೀ ಎಸ್.ಸುರೇಶ್‌ಕುಮಾರ್: ನಾನು Section 15 ಅನ್ನು ಓದುತ್ತೇನೆ. Section 15 ಯಾವಾಗ ಬರುತ್ತದೆಂದರೆ, ಲೋಕಾಯುಕ್ತವೇ ಯಾವುದಾದರೂ investigate ಮಾಡಿಸಬೇಕಾದರೆ ಹೊರಗಡೆಯ agency ಯದ್ದು ಕೂಡ support ತೆಗೆದುಕೊಳ್ಳಬಹುದು. ರಾಜ್ಯ ಬಿಟ್ಟು, ಯಾರಾದರೂ support ತೆಗೆದುಕೊಳ್ಳಬಹುದು ಎಂದು ಇದೆ. ಇವತ್ತು ಅವರ ಮೇಲೆಯೇ ಸಮಸ್ಯೆ ಬಂದಿರುವಾಗ? ನೀವೂ ಕೂಡ practicing Advocate ಆಗಿದ್ದೀರಿ. ಜಯಚಂದ್ರರವರು practicing Advocate ಆಗಿದ್ದರು. ಈ ಸದನದಲ್ಲಿ ಬಹಳ ಜನ ಇದ್ದೇವೆ. ಎಲ್ಲಿಯಾದರೂ ಕೂಡ complaint lodge ಮಾಡಿ accused ಮೇಲೆ ಮಾಡುತ್ತಾರೆ, ಅವರು ನನಗೆ ಇಂಥ Judge ಆಗಬೇಕು, ಇಂಥ forum ವಿಚಾರಣೆ ಮಾಡಬೇಕು, ಈ ರೀತಿಯೇ ಮಾಡಬೇಕೆಂದು ಹೇಳುವ

ಉದಾಹರಣೆ ಇಡೀ ಪ್ರಪಂಚದಲ್ಲಿ ಎಲ್ಲಿಯಾದರೂ ಇದೆಯೇ? North Korea ದಲ್ಲಿರಬಹುದು, ನನಗೆ ಗೊತ್ತಿಲ್ಲ. ಭಾರತದಲ್ಲಂತೂ ಇಲ್ಲ. ನಿನ್ನೆ ಇಲ್ಲಿ ಸಿ.ಟಿ. ರವಿಯವರು ಶೂನ್ಯವೇಳೆಯಲ್ಲಿ ಒಂದು ಪ್ರಶ್ನೆ ಎತ್ತಿದ್ದರು. ಹಾನಗಲ್‌ನಲ್ಲಿ ಒಬ್ಬ ಅಪ್ರಾಪ್ತ ಬಾಲಕಿಯನ್ನು ಅಪಹರಿಸಿಕೊಂಡು ಹೋಗಿದ್ದಾರೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದ ತಕ್ಷಣ, Home Minister ರವರು, ನಾವು FIR lodge ಮಾಡಿದ್ದೇವೆಂದರು. ತಕ್ಷಣ ತಾವು Home Minister ರವರನ್ನು, FIR lodge ಮಾಡಿದರೆ ಏಕೆ arrest ಮಾಡಿಲ್ಲವೆಂದು ಕೇಳಿದಿರಿ. ಅದಕ್ಕೆ Home Minister ರವರು, ತಲೆತಪ್ಪಿಸಿಕೊಂಡಿದ್ದಾರೆ, ನಾವು ಹುಡುಕುತ್ತಿದ್ದೇವೆ ಎನ್ನುವ ಒಂದು ಮಾತನ್ನು ಹೇಳಿದರು. ಈಗ ಈ ಪ್ರಕರಣದಲ್ಲಿ FIR has been lodged against Sri Ashwin Rao on 1st July 2015. ಏಕೆ ಇದುವರೆಗೂ arrest ಮಾಡಿಲ್ಲ; So, press conference ಮಾಡುತ್ತಾರೆ. ಎಲ್ಲವನ್ನೂ ಕೂಡ ಮಾಡುತ್ತಾರೆ. ನಾನು 'Animal Form; ಎನ್ನುವ book ನಲ್ಲಿ "all are equal, some are more equal" ಎಂದು ನಾನು ಓದಿದ್ದೆ. So, all accused are equal, some accused are more equal FIR ಹಾಕಿದರೂ ಕೂಡ ನಾವು ಮಾಡುವುದಿಲ್ಲ. ಅರೆ, ಇವರು ರಾಜಾರೋಷವಾಗಿ Government Guest House ನಲ್ಲಿದ್ದಾರೆ. Government building ನಲ್ಲಿದ್ದಾರೆ. FIR ಬಂದ ಮೇಲೆ ನಾವು ಅವರನ್ನು arrest ಮಾಡುವುದಿಲ್ಲವೆಂದರೆ, what message we are sending to the outside world, outside society? ಈಗ ಲೋಕಾಯುಕ್ತದಲ್ಲಿ ಬಹಳ ನಡೆಯಬಾರದ ಸಂಗತಿಗಳು ಜರುಗಿಬಿಟ್ಟಿವೆ. 3–4 ವರ್ಷಗಳ ಹಿಂದೆ, ಸ್ವಲ್ಪ ವರ್ಷಗಳ ಹಿಂದೆ, ಇನ್ನೊಂದು Legal jargon ನಲ್ಲಿ ಇನ್ನೊಂದು ಪದ ಬಂತು. Needle of suspicion ಎಂದು ಬಂತು ಅಂದರೆ ಸಂಶಯದ ಮುಳ್ಳು ಎಂದಾಗುತ್ತದೆ. ಈ ಪ್ರಕರಣದಲ್ಲಿ needle of suspicion ಯಾರ ಕಡೆ ಇದೆ; ಅಶ್ವಿನ್‌ರಾವ್? ಕೃಷ್ಣರಾವ್? ಭಾಸ್ಕರ್? ರಿಜಾಯ್? ಅಶ್ವಿನ್‌ರಾವ್ Son of ಯಾರು ಎಂದು FIR ನಲ್ಲಿ ಹೇಳಿದ್ದಾರೆ. ನಾನೇನೂ ಹೇಳುವ ಅಗತ್ಯವಿಲ್ಲ. Son of Y. Bhaskar Rao.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಸುರೇಶ್‌ಕುಮಾರ್‌ರವರೆ, correct ಆಗಿ ಹೇಳುತ್ತಿದ್ದೀರಿ, ಚೆನ್ನಾಗಿ ಚರ್ಚೆ ಮಾಡುತ್ತಿದ್ದೀರಿ. SIT ಮಾಡುವಂಥ ಅಧಿಕಾರ ಸರ್ಕಾರಕ್ಕೆ ಇದೆಯೋ? ಇಲ್ಲವೋ? ಎಂದು ಸ್ಪಷ್ಟವಾಗಿ ಬೇಕು. ಮಾಡಿರುವುದು ತಪ್ಪೋ? ಅಲ್ಲವೋ? ಎರಡನ್ನೂ ಸ್ಪಷ್ಟವಾಗಿ ಹೇಳಬೇಕು. ಇದನ್ನು ಕೇವಲ ಮತ್ತೆ ಚರ್ಚೆ ಮಾಡಿ ಅದನ್ನೇ ಮೇಲಿನಿಂದ ಕೆಳಗೆ, ಕೆಳಗಿನಿಂದ ಮೇಲೆ ಹಾಕಿಕೊಂಡು ಕೆದಕಿಕೊಂಡು ಬಿಟ್ಟುಕೊಂಡು ಹೋಗಬಾರದು. ಸ್ಪಷ್ಟವಾಗಬೇಕು. SIT ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇತ್ತೇ? Section 15 ಪ್ರಕಾರ ಅಧಿಕಾರ ಇದ್ದರೆ ಅದನ್ನು ಮಾಡಿರುವುದು ತಪ್ಪೇ? ಸರಿಯೋ?

ಶ್ರೀ ಎಸ್. ಸುರೇಶ್‌ಕುಮಾರ್: Needle of suspicion ಈ ಒಟ್ಟು ಪ್ರಕರಣ ಆಗುತ್ತಿರುವ ಎರಡು ಸ್ಥಳಗಳ ಬಗ್ಗೆ ತೋರಿಸುತ್ತಿದೆ. ಒಂದು, ಲೋಕಾಯುಕ್ತ ಕಛೇರಿಯ ಮೊದಲನೇ ಮಹಡಿಯಲ್ಲಿ ಒಂದು ರೂಮಿನಲ್ಲಿ, ಎಲ್ಲವೂ ಆಗಿರುವುದು ಅಲ್ಲಿಯೇ. ವಿದ್ಯಮಾನ, dealings, ಚರ್ಚೆ ಎಲ್ಲವೂ ಕೂಡ ಅಲ್ಲಿಯೇ ಆಗಿರುವುದು. ಹೆದರಿಸುವುದು, complaint ಇದೆ ಎನ್ನುವುದು, ವ್ಯವಹಾರ, adjust ಮಾಡಿಬಿಡಿ ಎನ್ನುವುದು. ಇನ್ನೊಂದು, Crescent Road ನಲ್ಲಿರುವ ಸರ್ಕಾರಿ ವಸತಿ ಗೃಹದಲ್ಲಿ. ಅದು ಸನ್ಮಾನ್ಯ ಲೋಕಾಯುಕ್ತರಿಗೆ ನಾವು ಕೊಟ್ಟಿರುವ ಒಂದು ವಸತಿ ಗೃಹ ಅಥವಾ ಅವರೇ ತೆಗೆದುಕೊಂಡಿರುವ ಒಂದು ವಸತಿ ಗೃಹ. ಇವೆರಡೂ ಕಡೆ ಆಗಿರುವಾಗ needle of suspicion ಬಹಳ ಸ್ಪಷ್ಟವಾಗಿ ಜಾಗಗಳನ್ನು, ವ್ಯಕ್ತಿಗಳನ್ನು ತೋರಿಸುತ್ತಿರುವಾಗ, ಶಿವಲಿಂಗೇಗೌಡರವರು, SIT ಮಾಡುವುದಕ್ಕೆ ಅಧಿಕಾರ ಇದೆಯೇ ಎಂದು ಕೇಳಿದರು. ಸರ್ಕಾರಕ್ಕೆ ಏನು ಬೇಕಾದರೂ ಮಾಡುವುದಕ್ಕೆ ಅಧಿಕಾರ ಇದೆ. ಆದರೆ, ಮಾಡುವಾಗ ವಿವೇಚನೆ ಎನ್ನುವುದು ಕೂಡ ಇರಬೇಕು. ಯಾವುದಕ್ಕೆ sit ಮಾಡಬೇಕು, ಯಾವುದಕ್ಕೆ stand ಮಾಡಬೇಕೆನ್ನುವುದು ಗೊತ್ತಿರಬೇಕು.

ಅಧ್ಯಕ್ಷರು: ಹಾಗಲ್ಲ. ಏನೆಲ್ಲಾ ಮಾಡಬೇಕು ಎಂದಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್: ನಾನು ಹೇಳುತ್ತಿದ್ದೇನೆ. ನಿಮಗೂ ಗೊತ್ತಿದೆ. ಸರ್ಕಾರ ಬಿಳಿ ಕುರಿಯನ್ನು ಕರಿ ಕುರಿ ಮಾಡಬಹುದು.

ಅಧ್ಯಕ್ಷರು: ಅವರು ಸ್ಪಷ್ಟವಾಗಿ ಹೇಳಿ ಎಂದು ಕೇಳುತ್ತಿದ್ದಾರೆ.

ಶ್ರೀ ಎಸ್. ಸುರೇಶ್‌ಕುಮಾರ್: ನಾನು ಹೇಳುತ್ತಿದ್ದೇನೆ. I am coming to that. ಸರ್ಕಾರ ಈ ಪ್ರಕರಣದಲ್ಲಿ SIT ಮಾಡಬಾರದಾಗಿತ್ತು. Act ನಲ್ಲಿ ಏನೇ ಇರಬಹುದು. ಸಾರ್, ವಿವೇಚನೆ ಎನ್ನುವುದೊಂದು ಇದೆ.

ಅಧ್ಯಕ್ಷರು: ಹಾಗಲ್ಲ, ಲೋಕಾಯುಕ್ತ ಕಾನೂನಿನಲ್ಲಿ Section 15 ರ ಪ್ರಕಾರ, ಏಕೆಂದರೆ, ನನಗೂ ಗೊತ್ತಿಲ್ಲ, ಮೊನ್ನೆ ಇದೆಲ್ಲ ಬಂದದ್ದು ನೋಡುವಂಥ ಅವಕಾಶ ಸಿಕ್ಕಿತು, 15ರಲ್ಲಿ ಮಾಡುವುದಕ್ಕೆ ಅವಕಾಶ ಇದೆಯೇ? ಇಲ್ಲವೇ?

ಶ್ರೀ ಜಿ.ಹೆಚ್. ಶ್ರೀನಿವಾಸ್: ಲೋಕಾಯುಕ್ತರನ್ನು CBI ಗೆ ವಹಿಸುವುದಕ್ಕೆ ಬರುತ್ತದೆಯೇ? ಕಾನೂನಿನಲ್ಲಿ ಅವಕಾಶ ಇದೆಯೇ? ಇಲ್ಲ.

ಅಧ್ಯಕ್ಷರು: ಆಯಿತು ಸ್ವಾಮಿ.

ಶ್ರೀ ಎಸ್. ಸುರೇಶ್‌ಕುಮಾರ್: Act ಕೊಡಿ ಸಾರ್.

ಶ್ರೀ ಜಿ.ಹೆಚ್. ಶ್ರೀನಿವಾಸ್: ಅವರು ಏನು ಬೇಕಾದರೂ ಮಾಡಬಹುದು ಎಂದು ಹೇಳಿದಿರಲ್ಲ. ನಾನು ಅದಕ್ಕೇ ಹೇಳುತ್ತಿರುವುದು. ಮಾನ್ಯ ಸುರೇಶ್‌ಕುಮಾರ್‌ರವರೆ, ಅದಕ್ಕೆ ಕಾನೂನಿನಲ್ಲಿ ಅವಕಾಶವಿದೆಯೇ?

ಅಧ್ಯಕ್ಷರು: ಅವರೂ ಕೇಳುತ್ತಿದ್ದಾರೆ. ಓದಿ ಹೇಳಿ. ಓದಿ ಹೇಳುತ್ತಾರೆ, ತಿಳಿದುಕೊಳ್ಳಿ.

ಶ್ರೀ ಎಸ್. ಸುರೇಶ್‌ಕುಮಾರ್: Section 15 ಬಗ್ಗೆ ಹೇಳಿದಿರಿ.

ಅಧ್ಯಕ್ಷರು: ಯಾವ Act?

ಶ್ರೀ ಎಸ್. ಸುರೇಶ್‌ಕುಮಾರ್: ಲೋಕಾಯುಕ್ತ Act.

ಅಧ್ಯಕ್ಷರು: ಹೇಳಿ ಮತ್ತೆ?

ಶ್ರೀ ಎಸ್. ಸುರೇಶ್‌ಕುಮಾರ್: ಅದನ್ನು ಓದಿ ಎಂದು ನೀವೇ ಹೇಳಿದಿರಲ್ಲ.

ಅಧ್ಯಕ್ಷರು: ನಾನಲ್ಲ, ಮಾನ್ಯ ಸದಸ್ಯರು ಕೇಳುತ್ತಾರೆ.

ಶ್ರೀ ಎಸ್. ಸುರೇಶ್‌ಕುಮಾರ್: ಲೋಕಾಯುಕ್ತ Act ನಲ್ಲಿ, Section 15 ಏನು ಹೇಳುತ್ತದೆಂದರೆ, Staff of Lokayukta, etc., ಎಲ್ಲ ಹೇಳುತ್ತದೆ. ಮುಂದೆ, 'Without prejudice to the provisions of sub-secton (1) ಅಂದರೆ ಯಾರ್‍ಯಾರು staff ಇದ್ದಾರೆ ಬಿಟ್ಟು, the Lokayutka or an Upa Lokayukta may for the purpose of conducting investigations under this Act utilize the services of. . . utilize ಗೆ ನೀವು ನಮ್ಮ ಪ್ರಕರಣವನ್ನು ಇವರ ಕೈನಿಂದಲೇ handle ಮಾಡಿಸಿ ಎಂದು ಹೇಳುವುದಕ್ಕೆ ಬಹಳ ವ್ಯತ್ಯಾಸವಿದೆ. Utilize the services of any officer or investigating agency of the State Government or any officer or investigating agency of the Central Government with the prior concurrence of the Central Government and State Government ಎಂದು Act ನಲ್ಲಿದೆ. ನನ್ನ ಬಗ್ಗೆಯೇ ಒಂದು complaint ಬಂದಾಗ.......

ಶ್ರೀ ಆರ್. ಜಗದೀಶ್ ಕುಮಾರ್: ಸುರೇಶ್‌ಕುಮಾರ್‌ರವರೆ, for the purposes of that Act.

SRI. S. SURESH KUMAR: Yes.

SRI R. JAGADISH KUMAR: Not under criminal procedure Act.

ಶ್ರೀ ಎಸ್. ಸುರೇಶ್‌ಕುಮಾರ್: ಈ Act ನಲ್ಲಿ Prevention of Corruption ಬಗ್ಗೆ case ಬಂದಾಗ utilize ಮಾಡಿಕೊಳ್ಳುವುದಕ್ಕೆ ಒಂದು ಅವಕಾಶವಿದೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಸುರೇಶ್ ಕುಮಾರ್‌ರವರದ್ದು complete ಆದ ಮೇಲೆ ನಾನು expain ಮಾಡುತ್ತೇನೆ. Section 15ನಲ್ಲಿ ಏನಿದೆ, ಲೋಕಾಯುಕ್ತ office ಏನಿದೆ, ಅದಕ್ಕೆ ಸಂಬಂದಪಟ್ಟಹಾಗೆ I will explain it.

ಶ್ರೀ ಎಸ್. ಸುರೇಶ್ ಕುಮಾರ್: ಈಗ ಸರ್ಕಾರ ಹೇಳುತ್ತಿದೆ.

ಶ್ರೀ ಬಸವರಾಜ್ ಬೊಮ್ಮಾಯಿ: ಇದು hair splitting issue ಇದೆ. ಆದ್ದರಿಂದ, ಸರ್ಕಾರ ಈ ಸಂದರ್ಭದಲ್ಲಿ ಯಾವ ರೀತಿ hair splitting issue ಬಂದಾಗ ನಡೆದುಕೊಳ್ಳಬೇಕಾಗಿತ್ತು ಎನ್ನುವಂಥದ್ದೇ ಈಗ ಚರ್ಚೆ ಮಾಡುತ್ತಿರುವಂಥದ್ದು. ಈ ಎಲ್ಲಾ section ಇರುವಂಥದ್ದು ಇವೆಲ್ಲಾ ಸ್ಥಾಪಿತವಾಗಿರುವಂತದ್ದು. ಇಲ್ಲಿ ಬಂದಿರುವಂಥದ್ದು ಲೋಕಾಯುಕ್ತ, ಲೋಕಾಯುಕ್ತ ಸಂಬಂಧಿಕರು, ಇವೆರಡೂ ಒಂದೆಯೆ? ಇಲ್ಲಿ ಪ್ರಶ್ನೆ ಇರುವುದು ಅದು.

ಶ್ರೀ ಜಗದೀಶ್ ಶೆಟ್ಟರ್: ಲೋಕಾಯುಕ್ತರ ಕಡೆ ಯಾವುದೊ ಒಂದು compliant file ಆಗಿರುತ್ತದೆ. ಯಾರೊಬ್ಬ ಬಗ್ಗೆ expertise, ಒಂದು agency fix ಮಾಡಬೇಕಾಗಿರುತ್ತದೆ, ಅದನ್ನು ನಾನು explain ಮಾಡಿ ಹೇಳುತ್ತೇನೆ.

ಶ್ರೀ ಬಸವರಾಜ್ ಬೊಮ್ಮಾಯಿ: ಲೋಕಾಯುಕ್ತದ definition is extended to the family? ಲೋಕಾಯುಕ್ತರು ಎಂದರೆ ಅವರ family members ಎಲ್ಲರೂ ಕೂಡ ಲೋಕಾಯುಕ್ತರೆ? I am making the point.

ಅಧ್ಯಕ್ಷರು: ಬೊಮ್ಮಾಯಿರವರೆ, ಸುರೇಶ್ ಕುಮಾರ್‌ರವರು ಹೆಚ್ಚು ಕಡಿಮೆ ಹೇಳಿದ್ದಾರಲ್ಲ, ನಮ್ಮ ಮುಂದೆ ಪ್ರಶ್ನೆ ಇರುವುದು.

ಶ್ರೀ ಬಸವರಾಜ್ ಬೊಮ್ಮಾಯಿ: ನೀವು section 15 refer ಮಾಡಿದ್ದಕ್ಕೆ ಹೇಳುತ್ತಿರುವುದು, section 15 ಇರುವುದು, ಲೋಕಾಯುಕ್ತ ಅವರ ಕಛೇರಿಯಲ್ಲಿ ಇರುವವರ ಬಗ್ಗೆ enquiry ಮಾಡುವ ಸಂದರ್ಭದಲ್ಲಿ ಏನು ಮಾಡಬೇಕು ಎಂದು ಇದೆ.

ಅಧ್ಯಕ್ಷರು: ಹೌದೇನ್ರಿ? ಇನ್ನೊಂದು ಸಾರಿ ಅದನ್ನು ಓದಿ.

ಶ್ರೀ ಬಸವರಾಜ್ ಬೊಮ್ಮಾಯಿ: ಇಲ್ಲಿ ಪ್ರಶ್ನೆ ಬಂದಿರುವುದು ಲೋಕಾಯುಕ್ತ ಕಛೇರಿಯಲ್ಲಿರುವವರು ಒಂದು ಭಾಗ ಇದ್ದರೆ, ಆ ಕಛೇರಿಗೆ ಸಂಬಂಧ ಇಲ್ಲದಿರುವ ಲೋಕಾಯುಕ್ತರ ಮನೆಯಲ್ಲಿರುವ ಅವರ ಸಂಬಂಧಿಕರ ವ್ಯವಹಾರದ ಬಗ್ಗೆ ಇಂದು suspicion of needle ಬಂದಿರುವುದು. So ಇಲ್ಲಿ section 15 operate ಆಗುವುದಿಲ್ಲ. split heir issue ಇದು.

ಶ್ರೀ ಕೆ.ಜಿ. ಬೋಪಯ್ಯ: ಈಗ section 15 ಏನೆಂದರೆ, ಒಬ್ಬ ವ್ಯಕ್ತಿಯ ಮೇಲೆ, ಯಾರ ಮೇಲಾದರೂ ಒಂದು corruption case investigation ಆದಾಗ ಯಾರದೊ expert ಸಹಾಯ ಬೇಕು, ಅಥವಾ ಹೊರಗಡೆ ಹೊಗಬೇಕು, ಅದು ಎಲ್ಲವನ್ನೂ ಕೇಳಿ. They can taken the help of .. ಅದು that is meaning of section 15.

ಶ್ರೀ ಬಸವರಾಜ್ ಬೊಮ್ಮಾಯಿ: ಪ್ರಶ್ನೆ ಅದು ಅಲ್ಲ, meaning of that is correct ಅದು ಹೇಳುವುದು ಸರಿಯಿದೆ. ಈಗ ಏನಿದೆ ಎಂದರೆ, ಲೋಕಾಯುಕ್ತರು ತಮ್ಮ ಸ್ಥಾನವನ್ನು insulate ಮಾಡಿ ಬಜಾವ್ ಮಾಡುವ ಸಲುವಾಗಿ ಆ ಸ್ಥಾನವನ್ನು ಒಂದು ಕಡೆ ಬಳಕೆ ಮಾಡುತ್ತಾರೆ. ಯಾರು investigate ಮಾಡತಕ್ಕಂಥ discretion use ಮಾಡುತ್ತಾರೆ, ಆ ಸ್ಥಾನದ corruption ಅಷ್ಟೇ ಅಲ್ಲ, ಅದನ್ನು ಉಳಿಸುವ ಸಲುವಾಗಿ the conduct of the Lokayukta..

ಅಧ್ಯಕ್ಷರು: ನಾನು ಏಕೆ ಹೇಳುತ್ತೇನೆಂದರೆ, ಈಗ ಒಂದು Act ಇದೆ, ಈ ಸದನ ಮಾಡಿರುವ ಕಾನೂನು ಅದು. ಈ ಸದನಕ್ಕೆ ಏನು ಅಭಿಪ್ರಾಯವನ್ನು ನೀವು ಕೊಡುತ್ತೀರಿ? ಇದು ಮೊದಲನೆ ಸಾರಿ ಬಂದಿರುವುದು.

ಶ್ರೀ ಜಗದೀಶ್ ಶೆಟ್ಟರ್: ನಾನು explain ಮಾಡುವಾಗ ಹೇಳುತ್ತೇನೆ.

ಶ್ರೀ ಜಿ.ಹೆಚ್. ಶ್ರೀನಿವಾಸ: ಮಾನ್ಯ ಸುರೇಶ್ ಕುಮಾರ್‌ರವರೆ ಒಂದು ನಿಮಿಷ. ಅಶ್ವಿನ್ ಕುಮಾರ್‌ರವರು public servants ಅಲ್ಲ ಅವರ ಬಗ್ಗೆ.

ಅಧ್ಯಕ್ಷರು: ಒಂದು ನಿಮಿಷ ತಾಳಿ ಅವರೇನು ಹೇಳುತ್ತಾರೆ.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ನಾನು ಮುಗಿಸಿ ಬಿಡುತ್ತೇನೆ. ನನ್ನ ವಿಚಾರ ಬಹಳ ಸ್ಪಷ್ಟ ಮಾಡಿದ್ದೇನೆ. ಈ ಪ್ರಕರಣ ಲೋಕಾಯುಕ್ತರ ಕುಟುಂಬಕ್ಕೆ ಸಂಬಂಧಪಟ್ಟ ಒಂದು ಬಹಳ ಗಂಭೀರವಾದ ಆರೋಪ ಬಂದಾಗ FIR ಬಂದಾಗ ಇದನ್ನು SIT ಗೆ ಕೊಟ್ಟಿರುವುದು ಅದು ಸೂಕ್ತವಾದ ಕ್ರಮವಲ್ಲ, ಮಾಡಬಾರದಾಗಿತ್ತು, ಸರ್ಕಾರ ಎಡವಿದೆ. ಅದು deliberately ಎಡವಿದೆಯೊ ಹಾಗೆ ಎಡವಿದೆಯೊ ಅದು ಬೇಡ. English ನಲ್ಲಿ ಇನ್ನೊಂದು ಪದವಿದೆ. Probity ನೈತಿಕ ಪ್ರಜ್ಞೆ, ಮೊನ್ನೆ ಮಾನ್ಯ ರಮೇಶ್ ಕುಮಾರ್‌ರವರ ಜೊತೆಗೆ ಮಾತನಾಡುವಾಗ ನನಗೊಂದು ಘಟನೆ ಹೇಳಿದರು, ಅದು ಬಹಳ ಮನಸ್ಸಿಗೆ ತಟ್ಟಿದ ಘಟನೆ. ಈ ಸದನದಲ್ಲಿ ಒಬ್ಬ ಹಿರಿಯ ಸದಸ್ಯರು ಚುನಾವಣೆಯಲ್ಲಿ 200 vote ನಿಂದ ಸೋತು ಬಿಟ್ಟಿದ್ದರು. ಅವರು he preferred an Election Petition. Election Petition came before one of the finest Judge of this country. ಅವರ ಮುಂದೆ ಬಂದಾಗ ನಮ್ಮ ಯಾರು ಸದಸ್ಯರು Election Petition ಹಾಕಿದ್ದರು, ಅವರ ಹಿತೈಷಿಗಳು, ಅವರ ಆತ್ಮೀಯರು, ಇವರಿಗೆ ಚುನಾವಣಾ counting ನಲ್ಲಿ ಅನ್ಯಾಯವಾಗಿದೆ ಎಂದು ಗೊತ್ತಿರುವವರು, ಮತ್ತೆ ಆ Judge ಗೆ ಬಹಳ ವರ್ಷಗಳಿಂದ family ಪರಿಚಯ ಇರುವವರು, ಹೋಗಿ ಅವರಿಗೆ ಗ್ರಾಮೀಣ ಭಾಷೆಯಲ್ಲಿ ಒಂದು ಮಾತು ಹೇಳಿದರು. "ಚಾರ್ ನಮ್ಮ ಹುಡುಗ ಒಳ್ಳೆಯವನು ಚಾರ್, ಅವನಿಗೆ ಸಹಾಯ ಮಾಡಿ ಚಾರ್" ಅದೇ ರೀತಿಯಾಗಿ ಒಂದು ತಮಿಳು-ಕನ್ನಡ ಮಿಶ್ರಿತ ಭಾಷೆಯಲ್ಲಿ ಪಾಪ ಹೇಳಿದರು. ಮಾರನೇ ದಿವಸ ಈ ಪ್ರಕರಣ ಆ Judge ಮುಂದೆ ಬಂತು. ಅವರು ಒಂದೇ ಮಾತು ಹೇಳಿದ್ದು, 'not before me'. That is called probity. That is the highest level of probity. ಆ probity ನ್ನು ನಾವು ಎಲ್ಲಾ ಕಡೆ ಎಲ್ಲರಿಂದ ಅಪೇಕ್ಷೆ ಪಡಬಾರದು ಎನ್ನುವುದು ನಿಜ. ಆದರೆ ಇಷ್ಟೆಲ್ಲಾ ಇವತ್ತು ಆಗುತ್ತಿರುವಾಗ, 1942 ರಲ್ಲಿ ನಡೆದ Quit India Movement

ನಾವು ನೋಡಿರಲಿಲ್ಲ, ಪ್ರತಿ ದಿವಸ ಇವತ್ತು Quit Lokayukta Movement ನೋಡುತ್ತಿದ್ದೇವೆ. ಎಲ್ಲರೂ ಬಂದು ರಾಜೀನಾಮೆ ಕೊಡಿ ಎಂದು ಕೇಳುತ್ತಿದ್ದಾರೆ. But probity ಪ್ರಶ್ನೆ, ಆತ್ಮಸಾಕ್ಷಿ ಪ್ರಶ್ನೆ, ನಾವು ಏನೂ ಹೇಳುವುದಕ್ಕೆ ಆಗುವುದಿಲ್ಲ. ಲೋಕಾಯುಕ್ತದ್ದು ಯಾವ ರೀತಿಯಾಗಿ mis-use ಆಗುತ್ತಿದೆ ಎಂದು ಕೊನೆಯ ಉದಾಹರಣೆ ಹೇಳಿ ನಾನು ಕುಳಿತುಕೊಂಡು ಬಿಡುತ್ತೇನೆ. ನಮ್ಮ ಸದನದಲ್ಲಿ CAG ಒಂದು report ಕೊಡುತ್ತೆ. CAG report ನ್ನು ಇಲ್ಲಿ ನಾವು place ಮಾಡುತ್ತೇವೆ. ಆ report ನಲ್ಲಿ ಏನಾದರೂ ಅಂಶ ಇದ್ದರೆ ನಾವು Public Accounts Committe ಗೆ ಕೊಡುತ್ತೇವೆ. Public Accounts Committe will look into it and comes out with its own opinion, with its own recommendations. ನಾನು ಎಲ್ಲಿಯೂ ಕೇಳಿರಲಿಲ್ಲ. CAG Report ಇಟ್ಟುಕೊಂಡು ಒಬ್ಬ ವ್ಯಕ್ತಿ ಲೋಕಾಯುಕ್ತಕ್ಕೆ ಹೋಗುತ್ತಾರೆ. ಲೋಕಾಯುಕ್ತದವರು CID ಗೆ investigation ಮಾಡಿ ಎಂದು ಹೇಳುತ್ತಾರೆ. CID ಯವರು ಅವರು ಹೇಳಿದ speed ಗೆ ಮಾಡದಿರುವಾಗ ಇದೇ ಲೋಕಾಯುಕ್ತ ಹೇಳುತ್ತಾರೆ, ಇನ್ನೈದು ದಿವಸದಲ್ಲಿ submit ಮಾಡಬೇಕೆಂದು ಹೇಳುತ್ತಾರೆ. ಆಗುವುದಿಲ್ಲ ಸಾರ್ ನನಗೊಂದು minimum 10 ದಿವಸ ಬೇಕೆಂದು CID ಯವರು ಹೇಳಿದರೆ, ಇಲ್ಲ you should file the report forthwith ಎಂದು ಹೇಳುತ್ತಾರೆ. ಒಂದು incomplete report ಬರುತ್ತದೆ. Based on that incomplete report FIR will be filed against the two former Chief Ministers of this House. If this is not mis-use of power, If this is not violation, what else? ಬಹಳ ಬೇಜಾರು ಆಗುತ್ತದೆ. ಯಾವ ಸಂಸ್ಥೆ ಒಂದು ಉದಾಹರಣೆಯಾಗಬೇಕಾಗಿತ್ತೋ, ಇವತ್ತು ಕೆಟ್ಟ ಸಂಗತಿಗಳಿಗೆ ಉದಾಹರಣೆಯಾಗುತ್ತಿದೆ. ಅದಕ್ಕೋಸ್ಕರ ನಾನು ಸಭಾಧ್ಯಕ್ಷರ ಮೂಲಕ ಸದನಕ್ಕೆ ಕೇಳಿಕೊಳ್ಳುವುದು, let a good message go out of this house. ಸದನ ತನ್ನ ಕಳಕಳಿ ತೋರಿಸುತ್ತದೆ, ಅವನತಿ ಬಗ್ಗೆ ಕಳಕಳಿ ತೋರಿಸುತ್ತದೆ, ಆ deterioration ಬಗ್ಗೆ ಕಳಕಳಿ ತೋರಿಸುತ್ತದೆ, ಅವಸಾನವಾಗುವುದು ಬೇಡ ಆ ಒಂದು ಭಾವನೆ. ಎರಡನೆಯದಾಗಿ, ಯಾರು ಹೊರಗಡೆ ಸಾತ್ವಿಕ ಆಕ್ರೋಶ

ತೋರಿಸುತ್ತಿದ್ದಾರೆ, ಈ ಲೋಕಾಯುಕ್ತ ಉಳಿಯಬೇಕು ಈ ರೀತಿ ಆಗಬಾರದು ಎಂದು, ಆ ಆಕ್ರೋಶಕ್ಕೆ ನಾವು ಸ್ಪಂದಿಸಬೇಕು. ನಿಜ, legal frame ನಲ್ಲಿಯೇ ಸ್ಪಂದಿಸೋಣ. ಕಾನೂನು ನಿಯಮದೊಳಗಡೆಯೆ ಸ್ಪಂದಿಸೋಣ, ಸ್ಪಂದಿಸಬೇಕು. ಮೂರನೆಯದು, let Lokayukta understand the mood of this house. We are all representatives of this house, 224+1=225 ಜನ representatives ಇದ್ದೀವಿ, We reflect the mood of the people of this state. ಆ ಭಾವನೆಯನ್ನು ಅರ್ಥ ಮಾಡಿಕೊಂಡು through you I request Honorable Lokayukta, please in the interest of the institution, please go out. ಆ institutions ನ್ನು ನೀವು ಉಳಿಸಿ. ದಯವಿಟ್ಟು ಉಳಿಸಿ. ಇನ್ನೊಂದು institutions ನ್ನು ಕಟ್ಟುವುದು ಬಹಳ ಕಷ್ಟವಿದೆ. And Karnataka Lokayukta Act ಇಡೀ ದೇಶದಲ್ಲಿ ಒಂದು ಮಾದರಿ Lokayukta Act. ಅದೇನು ಬದಲಾವಣೆ ತರಬೇಕು ನೀವು ತನ್ನಿ, ನಾವು ಚರ್ಚೆ ಮಾಡೋಣ. ಆದರೆ, ಒಳ್ಳೊಳ್ಳೆದು ಲೋಕಾಯುಕ್ತರು ಬಂದಿದ್ದರು ಎಂದು ಹೇಳುತ್ತಾರೆ. ಇಂಥದ್ದಕ್ಕೆ ದಯವಿಟ್ಟು Lokayukta Act it should not become a laughing stock. Let the humiliation stop here. ಎರಡನೆಯದು, SIT ಬಗ್ಗೆ ನಾಡಿನ ಎಲ್ಲರೂ ಕೂಡ ಸ್ವತಃ former Advocate General ಆಗಿದ್ದವರು, former Supreme Court ನ Judge ಆಗಿದ್ದವರು, former Lokayukta ಬಂದು ಸನ್ಮಾನ್ಯ ಸಭಾಧ್ಯಕ್ಷರ ಜೊತೆಗೂ ಚರ್ಚೆ ಮಾಡಿದ್ದಾರೆ. ಎಲ್ಲರ ಭಾವನೆ SIT will not do justice. ಖಂಡಿತ it will not do justice. ನನ್ನ ಗಮನಕ್ಕೆ ಇನ್ನೊಂದು ಆಘಾತಕಾರಿ ವಿಚಾರ ಬಂದಿದೆ. ಕುಮಾರಸ್ವಾಮಿಯವರು 169 ಜನ ದುಡ್ಡು ಕೊಟ್ಟಿರುವವರ ಒಂದು ಪಟ್ಟಿ ಇದೆ ಎನ್ನುವ ಮಾತು ಹೇಳಿದರು. ತಕ್ಷಣ ರಮೇಶ್ ಕುಮಾರ್‌ರವರು, ಆ ಪಟ್ಟಿ ಸದನದ ಆಸ್ತಿ ಆಗಬೇಕು, ಪಟ್ಟಿ ಕೊಡಬೇಕೆಂದು ಹೇಳಿದರು. 169 ಜನ ಯಾರ್‍ಯಾರು ಕೊಟ್ಟಿದ್ದಾರೆ, ನಮಗೆ ಗೊತ್ತಿಲ್ಲ. ಲೋಕಾಯುಕ್ತರ ಮಗನ ಹತ್ತಿರ ಒಂದು ಸಣ್ಣ diary ಇರುತ್ತದೆ, ಎಷ್ಟು ಕೊಟ್ಟಿದ್ದಾರೆ, ಇನ್ನೆಷ್ಟು balance, ಇವೆಲ್ಲಾ ಇರುತ್ತದೆ. 169–170 ಜನಕ್ಕೂ ಮಾತನಾಡದಿರುವ ಹಾಗೆ ಮಾಡುವುದಕ್ಕೆ SIT ಮುಂದೆ ಬರದಿರುವ

ಹಾಗೆ ಮಾಡುವುದಕ್ಕೆ ಇವತ್ತು ವ್ಯವಸ್ಥಿತ ಸಂಚು ನಡೆಯುತ್ತಿರುವುದು ಕೂಡ ನನ್ನ ಗಮನಕ್ಕೆ ಬಂದಿದೆ. ಅದಕ್ಕೋಸ್ಕರ SIT will be a sitting duck. ಅದರ ಮುಖ್ಯಸ್ಥರು ಯಾರು ಆಗಿದ್ದಾರೆಯೋ ಅವರ ಬಗ್ಗೆ ನಮಗೆ ಗೊತ್ತಿದೆ. ಅವರು ಹಿಂದೆ ಐಜಿ ಆಗಿದ್ದರು. He will become a mute spectators ಆಗಿರುವುದರಿಂದ ಅವರು ಏನು ಮಾಡುವುದಕ್ಕೆ ಆಗುವುದಿಲ್ಲ. ಇಡೀ ನಾಡಿಗೆ ನೀವು ನ್ಯಾಯವನ್ನು ದೊರಕಿಸಿ ಕೊಡಬೇಕಾದರೆ ಹಾಗೂ ಇಡೀ ನಾಡಿನ ವಿಶ್ವಾಸವನ್ನು ಮತ್ತೆ ಜಾಗೃತಿಗೊಳಿಸಬೇಕಾದರೆ please hand over the case to CBI ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು): ಸನ್ಮಾನ್ಯ ಸುರೇಶ್ ಕುಮಾರ್‌ರವರು ಬಹಳ ಉತ್ತಮವಾಗಿ ಮತ್ತು ಮಾರ್ಮಿಕವಾಗಿ ಹಲವಾರು ವಿಚಾರಗಳನ್ನು ಬಹಳ ಚೆನ್ನಾಗಿ ಈ ಸದನದ ಮುಂದಿಟ್ಟಿದ್ದಾರೆ. ಈ ವಿಚಾರವನ್ನು ಹಿಂದೆ ಬೆಳಗಾವಿ ಅಧಿವೇಶನದಲ್ಲಿ ನಾವು ಪ್ರಸ್ತಾಪ ಮಾಡಿದ್ದೆವು. ಆ ಸಂದರ್ಭದಲ್ಲಿ ಈ ವಿಚಾರವನ್ನು ಯಾವ ರೀತಿಯಾಗಿ ಪ್ರಸ್ತಾಪ ಮಾಡಬೇಕೆಂಬ ಬಗ್ಗೆ ತಾವು ಕೂಲಂಕುಷವಾಗಿ ವಿಚಾರ ಮಾಡಿ ಬಿಎಸಿ ಸಭೆಯಲ್ಲಿ ತಾವು allow ಮಾಡಿದ್ದೀರಿ. ಈ ಬಗ್ಗೆ ಅಲ್ಲಿಯೂ ಸಹ ಚರ್ಚೆ ಆಯಿತು. ಆನಂತರ ಈ ಬಗ್ಗೆ ಇಲ್ಲಿ ಮತ್ತೊಮ್ಮೆ ಚರ್ಚೆಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದೀರಿ. ಈ ಬಗ್ಗೆ ನಿಲುವಳಿ ಸೂಚನೆ ಕೊಟ್ಟಾಗ ಅದನ್ನು ನಿಯಮ 69ಕ್ಕೆ convert ಮಾಡಿ ಚರ್ಚೆಗೆ ಅವಕಾಶ ಕೊಡುತ್ತೇನೆಂಬ ಮಾತನ್ನು ತಾವು ಹೇಳಿದ್ದೀರಿ. ಅದರಂತೆ ಇವತ್ತು ಆ ವಿಚಾರದ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಟ್ಟಿದ್ದೀರಿ. ಲೋಕಾಯುಕ್ತದಲ್ಲಿನ ಭ್ರಷ್ಟಾಚಾರ ವ್ಯವಸ್ಥೆಯಲ್ಲಿ ಅಲ್ಲಿ ಮಧ್ಯವರ್ತಿಗಳು ಸೇರಿದ್ದಾರೆ.

ಅಧ್ಯಕ್ಷರು: ಮಾನ್ಯ ವಿರೋಧಪಕ್ಷದ ನಾಯಕರೆ, ಒಂದು ನಿಮಿಷ ಇರಿ. ಮಾನ್ಯ ಮಂತ್ರಿಗಳು 371(ಜೆ)ಗೆ ಸಂಬಂಧಪಟ್ಟಂತೆ ಉತ್ತರ ಕೊಡುತ್ತಾರಂತೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಮಧ್ಯಾಹ್ನ 3 ಗಂಟೆಗೆ ಉತ್ತರ ಕೊಡಲಿ. ಈ ವಿಷಯವನ್ನು ನಾವು complete ಮಾಡುತ್ತೇವೆ. ಇದು ಮುಗಿದ ಮೇಲೆ ಉತ್ತರ ಕೊಡಲಿ. ಈ ವಿಷಯದ ಮೇಲಿನ ಚರ್ಚೆ ಬಹಳ ಗಂಭೀರವಾಗಿ ಪ್ರಾರಂಭವಾಗಿದೆ. ಆದ್ದರಿಂದ, ಆರ್ಟಿಕಲ್ 371(ಜೆ) ಗೆ ಸಂಬಂಧಪಟ್ಟಂತೆ ಮಧ್ಯಾಹ್ನ 3.00 ಗಂಟೆಗೆ ಉತ್ತರ ಕೊಟ್ಟರೆ ಒಳ್ಳೆಯದು. ಈಗ ಲೋಕಾಯುಕ್ತ ವಿಷಯದ ಬಗ್ಗೆ ಚರ್ಚೆ ಈಗ ಪ್ರಾರಂಭವಾಗಿದೆ.

ಶ್ರೀ ಸಿದ್ದರಾಮಯ್ಯ: ಪರವಾಗಿಲ್ಲ, ಮತ್ತೆ ಮಧ್ಯಾಹ್ನದ ಮೇಲೆ ಮುಂದುವರಿಸಿ.

ಶ್ರೀ ಜಗದೀಶ್ ಶೆಟ್ಟರ್: ಆ ರೀತಿ ಬೇಡ, ವಿಷಯ discontinue ಆಗುತ್ತದೆ.

ಶ್ರೀ ಸಿದ್ದರಾಮಯ್ಯ: Discontinue ಏನೂ ಆಗುವುದಿಲ್ಲ. ಈಗಾಗಲೇ ಅವರು ಮಾತನಾಡಿ ಮುಗಿಸಿದ್ದಾರೆ. ಆಮೇಲೆ ನೀವು ಮಾತನಾಡಿದರೆ ಆಯಿತು.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಬಹಳಷ್ಟು ವಿಚಾರಗಳನ್ನು ಮಾತನಾಡಬೇಕಾಗಿದೆ. ಈಗ ಒಬ್ಬರು ಮಾತ್ರ ಮಾತನಾಡಿದ್ದಾರೆ. ನಾನು ಒಂದು ಸಭೆಗೆ ಹೋಗಿದ್ದರಿಂದ ನಾನು ಸದನಕ್ಕೆ ತಡವಾಗಿ ಬಂದೆ. ಆದ್ದರಿಂದ, ಅವರು ಪ್ರಾರಂಭ ಮಾಡಿದ್ದರು.

ಶ್ರೀ ಸಿದ್ದರಾಮಯ್ಯ: ಈ ಬಗ್ಗೆ ನಾನು ನಿನ್ನೆ ದಿವಸ ಉತ್ತರ ಕೊಡಬೇಕಾಗಿತ್ತು. ಸ್ವಲ್ಪ ಜ್ವರ ಬಂದ ಪ್ರಯುಕ್ತ ನಾನು ಹೊರಟು ಹೋದೆ.

ಶ್ರೀ ಜಗದೀಶ್ ಶೆಟ್ಟರ್: ಇವತ್ತು ಮಧ್ಯಾಹ್ನ ಕೊಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯ ಮಂತ್ರಿಗಳು ಸರಿಯಾದ ಸಮಯಕ್ಕೆ ಇದ್ದಿದ್ದರೆ ಅವರ ಉತ್ತರವೇ ಮೊದಲು ಆಗುತ್ತಿತ್ತು.

ಶ್ರೀ ಸಿದ್ದರಾಮಯ್ಯ: ನಾನು ಮೇಲ್ಗಡೆ ಕಛೇರಿಯಲ್ಲಿದ್ದೆ, ನಾನು ಇಲ್ಲಿಗೆ ಬರುವುದರೊಳಗೆ ಇವರನ್ನು ತಾವು ಮಾತನಾಡುವುದಕ್ಕೆ ಕರೆದುಬಿಟ್ಟಿದ್ದೀರಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅಜೆಂಡಾ ಪ್ರಕಾರ ವಿಷಯ ಮುಗಿದ ಮೇಲೆ ಬೇರೆ ವಿಷಯದ ಬಗ್ಗೆ ಮಾನ್ಯ ಸಭಾಧ್ಯಕ್ಷರು ಕರೆಯುತ್ತಾರೆ. ಇದು ನಿಮಗೂ ಮತ್ತು ಇಲ್ಲಿರುವ ಎಲ್ಲರಿಗೂ ಸಹ ಗೊತ್ತಿದೆ.

ಶ್ರೀ ಸಿದ್ದರಾಮಯ್ಯ: ಈ ವಿಷಯದ ಬಗ್ಗೆ ಮಾತನಾಡುವುದಕ್ಕೆ ಅವರು ಒಬ್ಬರೇ ಸಾಕು. ಆದ್ದರಿಂದ, ನೀವೆಲ್ಲ ಏಕೆ ಮಾತನಾಡುತ್ತೀರಿ? ನೀವೆಲ್ಲ ಅವರು ಜೊತೆಗೆ support ಆಗಿ ನಿಂತರೆ ಸಾಕು.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಮುಖ್ಯಮಂತ್ರಿಗಳೆ, energy minister ರವರು ಇವತ್ತು ಮಧ್ಯಾಹ್ನ lunch ಕೊಡುತ್ತಿದ್ದಾರೆ. After lunch you come energized. ಆನಂತರ ತಾವು ಮಾತನಾಡಿ.

ಶ್ರೀ ಸಿದ್ದರಾಮಯ್ಯ: ನಾವೆಲ್ಲ ಯಾವಾಗಲೂ ಸಹ energize ಆಗಿರುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ಉತ್ತರ ಹೇಳುವುದಕ್ಕೆ ದಯವಿಟ್ಟು ಮಧ್ಯಾಹ್ನ ಅವರಿಗೆ ಅವಕಾಶ ಕೊಡಿ. ಈಗ ಆ ವಿಷಯವನ್ನು continue ಮಾಡಿ ಮುಗಿಸುತ್ತೇವೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಏನು ಮಾಡುತ್ತೀರಿ ಎಂಬ ಬಗ್ಗೆ leave to you.

ಶ್ರೀ ಜಗದೀಶ್ ಶೆಟ್ಟರ್: Lunch ಮುಗಿದ ಮೇಲೆ ಉತ್ತರ ಕೊಡಿ.

ಅಧ್ಯಕ್ಷರು: ಮಾನ್ಯ ಮುಖ್ಯ ಮಂತ್ರಿಗಳೆ, ವಾಸ್ತವಿಕವಾಗಿ ತಾವು ಉತ್ತರವನ್ನು ಕೊಡಬೇಕಾಗಿತ್ತು.

ಶ್ರೀ ಸಿದ್ದರಾಮಯ್ಯ: ಹೌದು.

ಅಧ್ಯಕ್ಷರು: ಆದರೆ, ಸ್ವಲ್ಪ ಹೆಚ್ಚು ಕಡಿಮೆ ಆದ ಕಾರಣಕ್ಕಾಗಿ ಬೇರೆ ವಿಷಯದ ಬಗ್ಗೆ ಚರ್ಚೆಗೆ ತೆಗೆದುಕೊಂಡಿದ್ದೇವೆ. ಏಕೆಂದರೆ, ಸುಮ್ಮನೆ ಇರುವುದಕ್ಕೆ ಆಗದೆ ಇರುವ ಕಾರಣ ಈ ವಿಷಯದ ಬಗ್ಗೆ ಚರ್ಚೆ ಪ್ರಾರಂಭ ಮಾಡಿ ಎಂದು ಹೇಳಿ ಈ ವಿಷಯವನ್ನು ತೆಗೆದುಕೊಳ್ಳಲಾಗಿದೆ.

ಶ್ರೀ ಆರ್.ವಿ. ದೇಶ್‌ಪಾಂಡೆ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಬಂದ ನಂತರ ರಿಪ್ಲೈ ಮಾಡಲೆಂದು ನಾನು ಒಂದು ಸಲಹೆಯನ್ನು ಕೊಟ್ಟಿದ್ದೆ. ಆದ್ದರಿಂದ, ಈ ವಿಷಯದ ಮೇಲಿನ ಚರ್ಚೆಯನ್ನು stop ಮಾಡಿ ಆನಂತರ ತೆಗೆದುಕೊಳ್ಳಬಹುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಇದು ಹೇಗೆ ಸರಿಯಾಗುತ್ತದೆ?

ಶ್ರೀ ಜಗದೀಶ್ ಶೆಟ್ಟರ್: ಇದು ಸರಿಯಾಗುವುದಿಲ್ಲ.

ಅಧ್ಯಕ್ಷರು: ಚರ್ಚೆಗೆ ತೊಂದರೆ ಏನೂ ಆಗುವುದಿಲ್ಲ. ಆಗ ಉತ್ತರ ಕೊಡುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಬಂದಿರಲಿಲ್ಲ. ಆನಂತರ ನೀವು ಕೂಡ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ.

ಶ್ರೀ ಬಸವರಾಜ್‌ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಮಾತನಾಡಿ ಮುಗಿಸಲಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಬಂದು ಉತ್ತರ ಪ್ರಾರಂಭ ಮಾಡಿದ್ದರೆ ನಮ್ಮದೇನು ಅಭ್ಯಂತರ ಇರಲಿಲ್ಲ. ಅಜೆಂಡಾ ಪ್ರಕಾರ ಮೊದಲು ಅದೇ ವಿಷಯ ಇತ್ತು. ಅದಕ್ಕೆ ನಾವು ಸಹ ಒಪ್ಪಿಕೊಂಡಿದ್ದೇವೆ. ಆದರೆ, ಈಗ ಆ ವಿಷಯವನ್ನು ಪ್ರಾರಂಭ ಮಾಡಿರುವುದರಿಂದ ಇದನ್ನು lunch hour ಒಳಗೆ complete ಮಾಡುತ್ತೇವೆ. ಮಧ್ಯಾಹ್ನ ಮೂರು ಗಂಟೆಗೆ ಸೇರಿದಾಗ ಮೊದಲು ಅವರೇ ಉತ್ತರ ಕೊಡಲಿ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳೆ, ಇನ್ನು ಅರ್ಧ ಗಂಟೆಯಲ್ಲಿ ಈ ವಿಷಯವನ್ನು ಪೂರೈಸೋಣ ಬಿಡಿ.

ಶ್ರೀ ಬಸವರಾಜ್ ಬೊಮ್ಮಾಯಿ: ಈಗ ಅವಕಾಶ ಕೊಟ್ಟರೆ ಈ ವಿಷಯ ಮುಗಿಯುತ್ತದೆ. ಇಲ್ಲದಿದ್ದರೆ ಏನು ಮಾಡಿದರೂ ಸಹ complete ಆಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಮುಖ್ಯಮಂತ್ರಿಗಳೆ, ತಾವು ಮಧ್ಯಾಹ್ನ 3.00 ಗಂಟೆಗೆ ಉತ್ತರ ಕೊಡಿ.

ಡಾ|| ಉಮೇಶ್ ಜಿ. ಜಾಧವ್: ಮಾನ್ಯ ಅಧ್ಯಕ್ಷರೆ, we are waiting for reply.

ಶ್ರೀ ಜಿ.ಹೆಚ್. ಶ್ರೀನಿವಾಸ್: ಮಾನ್ಯ ಅಧ್ಯಕ್ಷರೆ, ನಾವೆಲ್ಲ ಮಾನ್ಯ ಮುಖ್ಯ ಮಂತ್ರಿಗಳು ಉತ್ತರಕ್ಕಾಗಿ ಕಾಯುತ್ತಿದ್ದೇವೆ. ಆದ್ದರಿಂದ, ಮೊದಲು ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಲಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಮಧ್ಯಾಹ್ನ ಊಟ ಆದ ಮೇಲೆ ಉತ್ತರ ಕೊಡಲಿ.

ಅಧ್ಯಕ್ಷರು: ಆಯಿತು ಬಿಡಿ. ತಾವು ಮಾತನಾಡಿ.

ಶ್ರೀ ವೈ.ಎಸ್.ವಿ. ದತ್ತಾ: ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ನಮಗೇನು ಅಭ್ಯಂತರ ಇಲ್ಲ. ಆದರೆ, ನಮ್ಮ ಅವಿಶ್ವಾಸ ನಿರ್ಣಯದ ಪ್ರಸ್ತಾವನೆಯನ್ನು ಬೆಳಿಗ್ಗೆ ಸಮಯದಲ್ಲಿ ತೆಗೆದುಕೊಳ್ಳಿ. ಮಾನ್ಯ ಮುಖ್ಯ ಮಂತ್ರಿಗಳೂ 371(ಜೆ) ಬಗ್ಗೆ ಮಧ್ಯಾಹ್ನ ಉತ್ತರ ಕೊಡಲಿ. ಆದರೆ, ನಮ್ಮ ಆವಿಶ್ವಾಸ ನಿರ್ಣಯದ ಪ್ರಸ್ತಾವನೆಯನ್ನು ನಾಳೆ ಬೆಳಿಗ್ಗೆ ತೆಗೆದುಕೊಳ್ಳಿ.

ಶ್ರೀ ಆರ್.ವಿ. ದೇಶ್‌ಪಾಂಡೆ: ಮಾನ್ಯ ಅಧ್ಯಕ್ಷರೆ, ಅವರಿಗೆ No confidence motion ಮೇಲೆ ಚರ್ಚೆ ಮಾಡುವುದಕ್ಕೆ ಆಸಕ್ತಿ ಇಲ್ಲ. No confidence move ಆದ ನಂತರ immediately ಚರ್ಚೆಯಾಗಬೇಕು. ಆದ್ದರಿಂದ, ಅದರ ಬಗ್ಗೆ ಚರ್ಚೆ ಮಾಡುವುದನ್ನು ಬಿಟ್ಟು ನಾಳೆ, ನಾಡಿದ್ದು ತೆಗೆದುಕೊಳ್ಳಿ ಎಂದರೆ ಏನರ್ಥ? No confidence ಮೇಲೆ ಚರ್ಚೆ ಮಾಡುವುದಕ್ಕೆ you should be immediately ready.(ಗೊಂದಲ) No confidence is a bias in the opposition. .

ಶ್ರೀ ವೈ.ಎಸ್.ವಿ. ದತ್ತಾ: No, ಅದರ ಮಹತ್ವವನ್ನು ಈ ಸದನ ದುರ್ಬಲ ಮಾಡುತ್ತಿದೆ ಎಂದು ಮತ್ತು ಯಾವುದೋ ಅಜೆಂಡಾವನ್ನು ಇದರ ಮಧ್ಯೆ ಹಾಕುವುದಕ್ಕೆ ಆಗುವುದಿಲ್ಲ. It should be a continuous process ಎಂದು ಇವತ್ತು ಬೆಳಿಗ್ಗೆ ಪ್ರಾರಂಭದಲ್ಲಿಯೇ ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ: ಮೊದಲೇ ಅದು ದುರ್ಬಲವಾಗಿರುವುದರಿಂದ ಮತ್ತೆ ದುರ್ಬಲವಾಗುವುದು ಎಲ್ಲಿಂದ ಬಂತು?

ಶ್ರೀ ವೈ.ಎಸ್.ವಿ. ದತ್ತಾ: ಮಾನ್ಯ ಮುಖ್ಯಮಂತ್ರಿಗಳೆ, ನಾನು ಹೇಳುತ್ತಿರುವುದು ಏನೆಂದರೆ, ಯಾರು ದುರ್ಬಲರು, ಯಾರು ಸಬಲರು ಎನ್ನತಕ್ಕಂಥ ಪ್ರಶ್ನೆ ಅಲ್ಲ. ಪ್ರಸ್ತಾಪ ಮಾಡಬೇಕೆಂದು ಇರುವ ವಿಷಯದ ಮಹತ್ವ ಮತ್ತು ಗಂಭೀರತೆಯ ಬಗ್ಗೆ ಹೇಳಿದ್ದೇವೆ. ಅವಿಶ್ವಾಸ ಎಂದರೆ ಅದು ಚರ್ಚೆಗೆ ಬಂದರೆ ಚರ್ಚೆ ಅಂತಿಮವಾಗುವವರೆಗೆ ಅದು continuous process ಆಗಬೇಕು. ಇದಕ್ಕೆ ನಾವು ತಯಾರಿದ್ದೇವೆ. ಆದರೆ, ಮಧ್ಯದಲ್ಲಿ ಹರಕುಪೊರಕು ಆಗಬಾರದು ಹಾಗೆಯೇ ಈ ಮಧ್ಯದಲ್ಲಿ ಕಲಾಪ ನಿಂತು ಹೋಯಿತೆಂಬುದು ಆಗಬಾರದು ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಸಿದ್ದರಾಮಯ್ಯ: ನೀವು 28 ಜನ ಎದ್ದು ನಿಂತುಕೊಂಡ ತಕ್ಷಣವೇ ವಿಶ್ವಾಸ ಇಲ್ಲವೇ? ಇಡೀ ರಾಜ್ಯದ 6 ಕೋಟಿ ಜನರ ವಿಶ್ವಾಸ ನಮ್ಮ

ಮೇಲೆ ಇದೆ.

ಶ್ರೀ ಎಂ. ಸತೀಶ್‌ರೆಡ್ಡಿ: ಮಾನ್ಯ ಮುಖ್ಯ ಮಂತ್ರಿಗಳೆ, totally 6 ಕೋಟಿ ಜನ ನಿಮಗೆ ವಿಶ್ವಾಸವನ್ನು ಎಲ್ಲಿ ಕೊಟ್ಟಿದ್ದಾರೆ?

ಶ್ರೀ ವೈ.ಎಸ್.ವಿ. ದತ್ತಾ: ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ಮೂರು ವರ್ಷಕ್ಕೆ ಜನಾದೇಶ ಬಂದರೂ ಸಹ ನಾವು ಒಪ್ಪಿಕೊಂಡಿದ್ದೇವೆ ಆದರೆ, ಯಾವ ವಿಷಯದಲ್ಲಿ ವಿಫಲತೆ ಆಗಿದೆ ಎಂಬ ಬಗ್ಗೆ ಹೇಳುವುದಕ್ಕೆ ಅವಕಾಶವನ್ನು ನಾವು ತೆಗೆದುಕೊಳ್ಳುತ್ತೇವೆ, ಅದನ್ನು ನೀವು ಸವಾಲು ಎಂದು ತೆಗೆದುಕೊಳ್ಳಿ. ನಾವೇನು ಸರ್ಕಾರವನ್ನು ಉರುಳಿಸುವುದಕ್ಕಲ್ಲ.

ಶ್ರೀ ಸಿದ್ದರಾಮಯ್ಯ: ಮಾನ್ಯ ದತ್ತಾತ್ರರವರೇ, ಈ ವಿಷಯದ ಬಗ್ಗೆ ಈಗಲೇ ಪ್ರಾರಂಭ ಮಾಡಿ ಎಂದು ನಾನು ಅವತ್ತು ಹೇಳಿದ್ದೇನೆ.

ಶ್ರೀ ವೈ.ಎಸ್.ವಿ. ದತ್ತಾ: ಆಗ ನಾವೂ ಸಹ ತಯಾರಿದ್ದೆವು.

ಶ್ರೀ ಸಿದ್ದರಾಮಯ್ಯ: ಆಗ ನೀವು ತಯಾರು ಇರಲಿಲ್ಲ ಬಿಡಿ. ಈಗಲೇ ಪ್ರಾರಂಭ ಮಾಡಿ ನಾವು ತಯಾರಾಗಿದ್ದೇವೆಂದು ಅವತ್ತು ನಾನು ಹೇಳಿದ್ದೆ.

ಶ್ರೀ ವೈ.ಎಸ್.ವಿ. ದತ್ತಾ: ನಾವು ತಯಾರಿದ್ದೇವೆ, ಈಗಾಗಲೇ ಪ್ರಾರಂಭ ಮಾಡಿ ಎಂದು ನಾವೂ ಸಹ ಹೇಳಿದ್ದೇವೆ. ಆದರೆ, ಸರ್ಕಾರವನ್ನು ಉರುಳಿಸುವಷ್ಟು ನಾವು ಇದ್ದೇವೆಂದು ಹಮ್ಮುಬಿಮ್ಮು ನಮಗಿಲ್ಲ, ಅಷ್ಟು ಮೂರ್ಖರು ಸಹ ನಾವಲ್ಲ. ಇದೊಂದು ಅವಕಾಶ ನಮಗೆ ಇದೆ. ಇದೊಂದು ಸವಾಲೆಂದು ನೀವು ಸ್ವೀಕಾರ ಮಾಡಿ ಎಂದು ನಾವು ಹೇಳುತ್ತೇವೆ.

ಅಧ್ಯಕ್ಷರು: ಆಯಿತು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ತಾವು ಲೋಕಾಯುಕ್ತ ವಿಷಯಕ್ಕೆ ಸಂಬಂಧಪಟ್ಟಂತೆ ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ. ಈ ವಿಷಯ ಮುಗಿಯುವ ತನಕ ಬೇರೆ ವಿಷಯಕ್ಕೆ ಅವಕಾಶ ಕೊಡಬಾರದೆಂದು ತಮ್ಮಲ್ಲಿ ನಾವು ವಿನಂತಿ ಮಾಡಿಕೊಳ್ಳುತ್ತೇವೆ.

ಅಧ್ಯಕ್ಷರು: ಆಯಿತು ಎಂದು ಹೇಳಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅವರು ಒಬ್ಬರು ಮಾತನಾಡಿದ ಮೇಲೆ ಅಲ್ಲ, ಈ ಸದನದಲ್ಲಿ ಉಳಿದವರೆಲ್ಲರಿಗೂ ಮಾತನಾಡುವುದಕ್ಕೆ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು: ಇದೊಂದು ಕತೆ ಆಯಿತಲ್ಲಾ? ಆಯಿತು ಪ್ರಾರಂಭ ಮಾಡಿ ಎಂದು ಹೇಳಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ತಾವು ಈಗಾಗಲೇ ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ. ಆದ್ದರಿಂದ, ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು: ನನ್ನ ಅನಿಸಿಕೆಯನ್ನು ತಮಗೆ ಹೇಳುತ್ತೇನೆ. ಬೇಡಿಕೆ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಆಗದ ರೀತಿಯಲ್ಲಿ ಇವತ್ತು ಒಂದು ಕಡೆ ನಡೆಯುತ್ತಿದೆ. ದಯವಿಟ್ಟು ಅದಕ್ಕೆ ಅವಕಾಶ ಕೊಡಬೇಡಿ. ಈ ಬಗ್ಗೆ ಚರ್ಚೆ ಎಷ್ಟು ಬೇಕೋ ಅಷ್ಟು ಮಾಡಿ. ಬೇಡಿಕೆ ಮೇಲೆ ಚರ್ಚೆ ಮಾಡುವುದಕ್ಕೆ ಮಾನ್ಯ ಸದಸ್ಯರಿಗೆ ಅವಕಾಶವನ್ನು ಒದಗಿಸಿಕೊಡಿ ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಬೇಡಿಕೆಗಳ ಮೇಲೆ ಚರ್ಚೆ ಪ್ರಾರಂಭ ಮಾಡಿರುವುದಕ್ಕೆ ನಾವು ಸಹಕಾರವನ್ನು ಕೊಟ್ಟಿದ್ದೇವೆ. ಬಹಳಷ್ಟು ಪ್ರಮುಖ ಬೇಡಿಕೆಗಳಿಗೆ ಈಗಾಗಲೇ ಒಪ್ಪಿಗೆಯನ್ನು ಕೊಟ್ಟಿದ್ದೇವೆ.

ಶ್ರೀ ಸಿದ್ದರಾಮಯ್ಯ: ಕೇವಲ ನಾಲ್ಕು ಇಲಾಖೆಯ ಬೇಡಿಕೆಗಳಿಗೆ ಮಾತ್ರ ಒಪ್ಪಿಗೆ ಸಿಕ್ಕಿದೆ.

ಶ್ರೀ ಜಗದೀಶ್ ಶೆಟ್ಟರ್: ನಾಲ್ಕು ಆಗಿರಲಿ. ಆದರೆ, ಈಗ ಚರ್ಚೆ ನಡೆಯುತ್ತಿದೆ. ಇದಕ್ಕೆ ನಮ್ಮ ಸಹಕಾರ ಇದೆ. ಮಾನ್ಯ ಅಧ್ಯಕ್ಷರೆ, ಈಗ ತಾವು ವ್ಯಕ್ತಪಡಿಸಿರುವ ನಿಮ್ಮ ಭಾವನೆ ಪ್ರಕಾರ ಆ ಕೆಲಸವನ್ನು ನಾವು ಮಾಡುತ್ತೇವೆ. ಇಡೀ ರಾಜ್ಯದಲ್ಲಿ ಇವತ್ತು ಲೋಕಾಯುಕ್ತ ಬಗ್ಗೆ ಪ್ರಸ್ತಾಪ ಆಗುತ್ತಿದೆ. ಹಾಗೆಯೇ ಲೋಕಾಯುಕ್ತ ಸಂಸ್ಥೆ ಬಗ್ಗೆ ಇವತ್ತು ಸಂಶಯಗಳು ಪ್ರಾರಂಭ ಆಗಿವೆ. ಆ ಒಂದು ಲೋಕಾಯುಕ್ತ ಸಂಸ್ಥೆಯ ಗೌರವ ಮತ್ತು ಉಳಿಯಬೇಕಾಗಿದೆ. ಆ ಸಂಸ್ಥೆಯ ಗೌರವ ನುಚ್ಚುನೂರು ಆಗತಕ್ಕಂಥ ಪರಿಸ್ಥಿತಿ ಇವತ್ತಿನ ದಿವಸ ನಿರ್ಮಾಣವಾಗಿದೆ.

ಅಧ್ಯಕ್ಷರು: ಗೌರವ ಉಳಿಯಬೇಕು, ಹಾಗೆಯೇ ಈ ಸದನದ ಉದ್ದೇಶ ಕೂಡ ಸಾರ್ಥಕವಾಗಬೇಕು.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಸದನದ ಉದ್ದೇಶ ಕೂಡ ಉಳಿಯಬೇಕು. ಏಕೆಂದರೆ, 1984ನೇ ಇಸವಿಯಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಒಂದು ಸದುದ್ದೇಶದಿಂದ ಈ ಒಂದು ಲೋಕಾಯುಕ್ತ ಕಾನೂನನ್ನು ತೆಗೆದುಕೊಂಡು ಬಂದರು. ಭ್ರಷ್ಟ ವ್ಯವಸ್ಥೆಯ ವಿರುದ್ಧ ಅಂದರೆ, ಭ್ರಷ್ಟ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಏನಿದ್ದಾರೆ, ಅವರ ವಿರುದ್ಧ ಒಂದು ಅಂಕುಶ ಇರಬೇಕೆಂದು ಹಾಗೂ ಅವರ ಮೇಲೆ ಕಾನೂನು ರೀತಿಯ ಒಂದು ಕ್ರಮ ಆಗಬೇಕೆಂಬ ಮೂಲ ಉದ್ದೇಶದಿಂದ ಈ ಕಾನೂನನ್ನು ತೆಗೆದುಕೊಂಡು ಬಂದರು. ಆದರೆ, ಇವತ್ತು ಈ ಒಂದು ಲೋಕಾಯುಕ್ತ ಸಂಸ್ಥೆಯ ಮೇಲೆ ಹಾಗೂ ಅಲ್ಲಿದ್ದಂಥ ವ್ಯಕ್ತಿಗಳ ಮೇಲೆ ಅಂದರೆ, ಅವರ ಮಗನ ಮೇಲೆ ಈ ರೀತಿಯಾದಂಥ ಭ್ರಷ್ಟಾಚಾರದ ಆಪಾದನೆ ಬಂದಂಥ ಸಂದರ್ಭದಲ್ಲಿ ಮತ್ತು ಎಲ್ಲಾ dealing ಗಳಗೆ ಅಶ್ವಿನ್ ರಾವ್ ರವರು center point ಆದ ಸಂದರ್ಭದಲ್ಲಿ, ಇದರ ಬಗ್ಗೆ ಇಡೀ ರಾಜ್ಯದಲ್ಲಿ ಆಕ್ರೋಶ, ಜನಾಂದೋಲನ ನಡೆಯುತ್ತಿದೆ. ಇವತ್ತಿನ ದಿವಸ Advocates, Doctors ಇರಬಹುದು, Non political persons ಇರಬಹುದು. ಇಡೀ advocate class ಇವತ್ತು ಬೀದಿ ಹೋರಾಟಕ್ಕಿಳಿದಿದ್ದಾರೆ. ಹಾಗೆಯೇ ಲೋಕಾಯುಕ್ತ ಕಛೇರಿ ಮುಂದೆ ದಿನನಿತ್ಯ ಹೋರಾಟಗಳು ನಡೆಯುತ್ತಿವೆ. ಈ ರೀತಿಯಾದಂಥ ಒಂದು ವಾತಾವರಣ ಇದ್ದಂಥ ಸಂದರ್ಭದಲ್ಲಿ ಲೋಕಾಯುಕ್ತ ಮೇಲೆ ಯಾರು ನಂಬಿಕೆ ಇಡದೇ ಇರತಕ್ಕಂಥ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. Corruption issue ಬಗ್ಗೆ ಇಷ್ಟೊಂದು ಚರ್ಚೆ ಮತ್ತು ತನಿಖೆ ಆಗತಕ್ಕಂಥ ಸಂದರ್ಭದಲ್ಲಿ ಲೋಕಾಯುಕ್ತರಿಗೆ ನಿಜವಾಗಿ ಏನಾದರೂ ಸ್ವಲ್ಪ ನೈತಿಕತೆ ಇದ್ದಿದ್ದರೆ ತಕ್ಷಣ ರಾಜೀನಾಮೆಯನ್ನು ಕೊಟ್ಟು ಹೋಗಬೇಕಾಗಿತ್ತು. ಆಗ ಸಂಸ್ಥೆಗೆ ಗೌರವ ಬರುತ್ತಿತ್ತು. ಆದರೆ, ಆ ರೀತಿ ಕುಮಾರ್‌ರವರು ಹಲವಾರು ವಿಚಾರಗಳನ್ನು ಹೇಳಿದ್ದಾರೆ. ಕೆಲವೊಂದು ವಿಚಾರಗಳನ್ನು ಮಾತ್ರ ನಾನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಇಲ್ಲಿ ಮಧ್ಯವರ್ತಿಗಳು ಯಾವ ರೀತಿಯಾಗಿ ಕೆಲಸ ಮಾಡುತ್ತಿದ್ದಾರೆಂದು ಹೇಳುತ್ತೇನೆ. ಇವರಲ್ಲಿ ಪ್ರಮುಖವಾಗಿ ಅಶ್ವಿನ್‌ರಾವ್ ಮತ್ತು PRO ಆಗಿರುವ ರಿಯಾಜ್ ಅಹಮದ್ ಮತ್ತು ಕೃಷ್ಣರಾವ್ ಹಾಗೂ ಭಾಸ್ಕರ್, ಶ್ರೀನಿವಾಸಗೌಡ ಎಂಬುವವರು ಇದ್ದಾರೆ.

ಅಧ್ಯಕ್ಷರು: ಮಾನ್ಯ ಸುರೇಶ್‌ಕುಮಾರ್‌ರವರು ಈ ವಿಷಯ ಹೇಳಿದ್ದಾರೆ ಬಿಡಿ.

ಶ್ರೀ ಜಗದೀಶ್ ಶೆಟ್ಟರ್: ಈ ರೀತಿ ಹಲವಾರು ವ್ಯಕ್ತಿಗಳು ಈ ಒಂದು ಸಂಸ್ಥೆಯಲ್ಲಿದ್ದುಕೊಂಡು ಲೋಕಾಯುಕ್ತ ಹೆಸರಿನಲ್ಲಿ ಅಧಿಕಾರಿಗಳನ್ನು ಹೆದರಿಸುವಂಥಾದ್ದು, ಬ್ಲಾಕ್‌ಮೇಲ್ ಮಾಡುವಂಥಾದ್ದು, ಅದರ ಮೂಲಕ ಹಣವನ್ನು ಕಲೆಕ್ಟ್ ಮಾಡುವಂಥಾದ್ದು ನಡೆದಿದ್ದು, ಅವರ ಮೇಲೆ ಏನು ಕ್ರಮವಾಗಿದೆ? ಈ ಸದನಕ್ಕೆ ಏನು ಅಧಿಕಾರವಿದೆ? 1984ರಲ್ಲಿ ಈ ಒಂದು ಕಾನೂನನ್ನು ತಂದಾಗ ಈ ರೀತಿಯ ಘಟನೆಗಳಾಗುತ್ತವೆ ಎಂದು ಬಹುಶಃ ಯಾರೂ ನಿರೀಕ್ಷೆ ಮಾಡಿರಲಿಕ್ಕಿಲ್ಲ. ಸ್ವತಃ ಲೋಕಾಯುಕ್ತರ ಮನೆಯ ಮಕ್ಕಳೇ ಈ ರೀತಿ corruption ಮಾಡುತ್ತಾರೆ ಎನ್ನುವ ನಿರೀಕ್ಷೆ ಆ ಕಾನೂನನ್ನು ತಂದಂಥ ಸಂದರ್ಭದಲ್ಲಿ ಯಾರಿಗೂ ಇರಲಿಕ್ಕಿಲ್ಲ. ಆದರೆ ಇಂಥ ಘಟನೆಗಳು ನಡೆದಾಗ ಈ ಸದನ ಮತ್ತು ಸರ್ಕಾರ ಅಸಹಾಯಕವಾಗಬಾರದು ಎನ್ನುವುದೇ ನಮ್ಮ ಮೊದಲ ಭಾವನೆ. ನಾವು ಅಸಹಾಯಕರಾಗಬಾರದು. ಜನಪ್ರತಿಗಳಾದ ನೀವೇನು ಮಾಡುತ್ತಿದ್ದೀರಿ ಎಂದು ಇವತ್ತು ಇಡೀ ರಾಜ್ಯ ಮತ್ತು ಜನರು ನಮ್ಮನ್ನು ಕೇಳುತ್ತಿದ್ದಾರೆ. ಮುಖ್ಯಮಂತ್ರಿಗಳು ಒಂದೆರಡು ಕಡೆ ಸ್ಟೇಟ್‌ಮೆಂಟ್ ಕೊಟ್ಟರು, ಕಾನೂನು ರೀತಿ ಬರುತ್ತಿದ್ದರೆ ನಾನು ಮಾಡುತ್ತಿದ್ದೆ, ಸಿ.ಬಿ.ಐ.ಗೆ ಕೊಡುತ್ತಿದ್ದೆ ಎನ್ನುವಂಥ ಮಾತನ್ನು ಅವರು ಹೇಳಿದರು. ಸನ್ಮಾನ್ಯ ಅಧ್ಯಕ್ಷರೆ, ತಾವೂ ಸಹ ಹಲವಾರು ಪ್ರಶ್ನೆಗಳನ್ನು raise ಮಾಡಿದಿರಿ.

ಶ್ರೀ ಕೆ. ಶಿವಮೂರ್ತಿ: ಮಾನ್ಯ ಅಧ್ಯಕ್ಷರೆ, ಲೋಕಾಯುಕ್ತದ ಬಗ್ಗೆ ಭಾರತೀಯ ಜನತಾ ಪಕ್ಷದವರು ಚರ್ಚೆಗೆ ತೆಗೆದುಕೊಂಡು ಬಂದಿದ್ದಾರೆ. ನಾನು ತಮ್ಮ ಮೂಲಕ ವಿರೋಧ ಪಕ್ಷದ ನಾಯಕರನ್ನು ಕೇಳಿಕೊಳ್ಳುತ್ತೇನೆ, 1984ರಲ್ಲಿ ರಚನೆಯಾಗಿರುವಂಥ ಸಂಸ್ಥೆಯಿದು. ತಮ್ಮ ರಾಜಕೀಯ ಪಕ್ಷ ಆಡಳಿತದಲ್ಲಿರುವ ರಾಜ್ಯಗಳಲ್ಲಿ ಲೋಕಾಯುಕ್ತರು ಇದ್ದಾರೋ, ಇಲ್ಲವೋ?

ಶ್ರೀ ಜಗದೀಶ್ ಶೆಟ್ಟರ್: ಮೊದಲು ಇಲ್ಲಿನದನ್ನು ವಿಚಾರ ಮಾಡೋಣ.

ಶ್ರೀ ಕೆ. ಶಿವಮೂರ್ತಿ: ಇದರ ಬಗ್ಗೆ ತಮಗೆ ನಂಬಿಕೆ ಇದೆಯೇ? ಭಾರತೀಯ ಜನತಾ ಪಕ್ಷ ಆಡಳಿತದಲ್ಲಿರುವ ಹಲವಾರು ರಾಜ್ಯಗಳಲ್ಲಿ ಲೋಕಾಯುಕ್ತ ಇಲ್ಲ. ತಮಗೆ ಆ ಸಂಸ್ಥೆಯ ಬಗ್ಗೆ ನಂಬಿಕೆ ಇಲ್ಲ. ತಮಗೆ ನಂಬಿಕೆ ಇದ್ದರೆ ಜಾಸ್ತಿ ಪುಷ್ಟೀಕರಣ ಕೊಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್: Section 15 of the Lokayukta Act ಹೀಗೆ ಹೇಳುತ್ತದೆ: "(1) There shall be such officers and employees as may be prescribed to assist the Lokayukta and the Upalokayukta or the Upalokayuktas in the discharge of their functions under this Act.

(2) The categories, recruitment and conditions of service of the officers and employees referred in sub-section (1) including such special conditions as may be necessary for enabling them to act without fear in the discharge of their funcitons, shall be such as may be prescribed in consultation with me Lokayukta.

(3) Without prejudice to the provisions of sub-section (1), the Lokayukta or an Upalokayukta may for the purpose of conducting investigations under this Act utilize the services of:

(a) any officer or investigating agency of the State Government; or

(aa) any officer or investigating agency of the Central Government with the prior concurrence of the Central Government and State Government;"ಎಂದು ಇದೆ. ಇದರ ಬಗ್ಗೆ ನನ್ನ interpretation ಎಂದರೆ, ಲೋಕಾಯುಕ್ತಕ್ಕೆ ಯಾವುದೋ ಒಂದು ಕೇಸ್ ಹೋಗುತ್ತದೆ, ಅದು corruption ಬಗ್ಗೆಯಾಗಲೀ, ಯಾವುದೇ ಅಧಿಕಾರಿಗಳ ಬಗ್ಗೆ, ಯಾವುದೇ ಜನಪ್ರತಿನಿಧಿಗಳ ಬಗ್ಗೆ complaint ಹೋಗುತ್ತದೆ ಎಂದು ಇಟ್ಟುಕೊಳ್ಳೋಣ. ಆ complaint ಬಂದಂಥ ಸಂದರ್ಭದಲ್ಲಿ ಏನೋ ಒಂದಿಷ್ಟು complications

ಇದೆ, investigation ಸರಿಯಾಗಿ ಆಗಬೇಕು ಎಂದು ಲೋಕಾಯುಕ್ತರು ರಾಜ್ಯ ಸರ್ಕಾರದ ಕೆಲವೊಂದು ಏಜೆನ್ಸಿಗಳ assistance ತೆಗೆದುಕೊಳ್ಳಬಹುದು, ಕೇಂದ್ರ ಸರ್ಕಾರದ ಏಜೆನ್ಸಿಗಳ assistance ತೆಗೆದುಕೊಳ್ಳಬಹುದು. ಆದರೆ ಇವತ್ತು ಇಲ್ಲಿ ಏನಾಗಿದೆ ಎಂದರೆ, ಲೋಕಾಯುಕ್ತದಲ್ಲಿ ಯಾರೂ complaint ಕೊಟ್ಟಿಲ್ಲ. ಲೋಕಾಯುಕ್ತರ ಮಗನಾದ ಅಶ್ವಿನ್‌ರಾವ್ ಮೇಲೆಯೇ complaint ಆಗಿದೆ. ಅಶ್ವಿನ್‌ರಾವ್ ಒಬ್ಬ independent person. ಲೋಕಾಯುಕ್ತ ಕಾನೂನಿನ ಅಡಿಯಲ್ಲಿ ಬರುವಂಥ ವ್ಯಕ್ತಿಯಲ್ಲ ಅಶ್ವಿನ್‌ರಾವ್. ಆತ ಒಬ್ಬ ಸ್ವತಂತ್ರ ವ್ಯಕ್ತಿ. ಆತ ಇಲ್ಲಿ ಮಧ್ಯವರ್ತಿಯಾಗಿ ಕೆಲಸ ಮಾಡಿ ಹಣವನ್ನು ದೋಚುವಂಥ, corruption ಮಾಡುವಂಥ ಕೆಲಸವನ್ನು ಮಾಡಿದ್ದಾನೆ. ಹೀಗಾಗಿ Section 15 ಈ ವಿಷಯದಲ್ಲಿ ಅನ್ವಯವಾಗುವುದಿಲ್ಲ ಎನ್ನುವುದು ನನ್ನ ಮೊದಲ interpretaiton. ಇನ್ನೊಂದು ಬಹಳ ಮುಖ್ಯವಾದಂಥದ್ದು ಎಂದರೆ Section 18 ಇದೆ.

ಅಧ್ಯಕ್ಷರು: Section 15ರಲ್ಲಿ ಈ ರೀತಿ ಇದೆ, ರಮೇಶ್ ಕುಮಾರ್‌ರವರೇ ನೀವೂ ಸ್ವಲ್ಪ ನೋಡಿ. (1) "(1) There shall be such officers and employees as may be prescribed to assist the Lokayukta and the Upalokayukta or the Upalokayuktas in the discharge of their functions under this Act". 'There shall be such officer...' ಎಂದರೆ ಅವರು Government Officer ರವರೋ ಅಥವಾ ಬೇರೆ ಯಾರು?

ಶ್ರೀ ಜಗದೀಶ್ ಶೆಟ್ಟರ್: ಅಂದರೆ ಲೋಕಾಯುಕ್ತ ಸಂಸ್ಥೆಯ ಅಧಿಕಾರಿಗಳು ಎಂದು ಅರ್ಥ ಬರುತ್ತದೆ. "Section 15 of Lokayukta Act, (1) There shall be such officers and employees as may be prescribed to assist the Lokayukta and the Upalokayukta..." ಅಂದರೆ, ಆ ಸಂಸ್ಥೆಯಲ್ಲಿದ್ದಂಥ ಅಧಿಕಾರಿಗಳ assistance ತೆಗೆದುಕೊಳ್ಳಬಹುದು. ಅವರು ಪೊಲೀಸ್ ಸಿಬ್ಬಂದಿ ಇರಬಹುದು, ಇನ್ಸ್‌ಪೆಕ್ಟರ್ ಇರಬಹುದು, A.D.G.P ಇರಬಹುದು, ಲೋಕಾಯುಕ್ತ ಸಂಸ್ಥೆಯಲ್ಲಿರುವ Teamಗೆ ಇದು ಅನ್ವಯವಾಗುತ್ತದೆ. ಅದಕ್ಕೆ, ನನ್ನ interpretation ಏನೆಂದರೆ, ಇವತ್ತು

ಅಶ್ವಿನ್‌ರಾವ್ ಮೇಲೆ ಏನು F I.R. ಆಗಿದೆ, ಮೇಲೆ ಏನು investigation ನಡೆಯುತ್ತಿದೆ, ಅದು Section 15 ವ್ಯಾಪ್ತಿಯಲ್ಲಿ ಬರುವುದಿಲ್ಲ ಎನ್ನುವುದನ್ನು ನಾನು ಇಲ್ಲಿ ಪ್ರಮುಖವಾಗಿ interpretation ಮಾಡಲು ಪ್ರಯತ್ನ ಮಾಡುತ್ತಿದ್ದೇನೆ.

Section 18 ಈ ರೀತಿ ಇದೆ: "(1) No suit, prosecution or other legal proceedings shall lie against the Lokayukta or an Upalokayukta or against any officer, employee, agency or person referred to in Section 15...." Section 15ಅನ್ನು refere ಮಾಡುತ್ತಾರೆ. Section 15ರ interpretaiton ಪ್ರಕಾರ ಅದರಲ್ಲಿ ಅಶ್ವಿನ್‌ರಾವ್ ಬರುವುದಿಲ್ಲ.

(1) No suit, prosecution or other legal proceedings shall lie against the Lokayukta or an Upalokayukta or against any officer, employee, agency or person referred to in Section 15 in respect of anything which is in good faith done while acting or purporting to act in the discharge or his official duties under this Act.

(2) No proceedings of the Lokayukta or an Upalokayukta shall be held to be bad for want of forum and except on the ground of jurisdiction, no proceedings or decision of the Lokayukta or an Upalokayukta shall be liable to be challenged, reviewed, quashed or called in question in any court of ordinary Civil Jurisdiciton".

ಅವರು ಆರ್ಡರ್ ಮಾಡಿದ್ದನ್ನು challenge ಮಾಡುವುದು ಒಂದು ಕಡೆಯಾಗುತ್ತದೆ. ಹೀಗಾಗಿ, ಇಲ್ಲಿ protection ಇದ್ದದ್ದು Section 15 ಪ್ರಕಾರ ಅಧಿಕಾರಿಗಳ ವರ್ಗ ಏನಿದೆ, ಅದಕ್ಕೆ ಮಾತ್ರ ಸಂಬಂಧಪಟ್ಟಂಥಾದ್ದು. ನಾನು ಇಲ್ಲಿ ಹೇಳುವಂಥದ್ದು ಮತ್ತು ರಾಜ್ಯ ಸರ್ಕಾರಕ್ಕೆ ಒತ್ತಾಯ ಮಾಡುವಂಥಾದ್ದು ಏನೆಂದರೆ ಇವತ್ತು ಅಶ್ವಿನ್‌ರಾವ್ ಮೇಲೆ ಈಗಾಗಲೇ complaint ಆಗಿದ್ದು F.I.R. file ಆಗಿದೆ. ಅಶ್ವಿನ್‌ರಾವ್ ಲೋಕಾಯುಕ್ತ ಸಂಸ್ಥೆಗೆ ಸರ್ಕಾರದಿಂದ

ನೇಮಕವಾದಂಥ ವ್ಯಕ್ತಿಯಲ್ಲ. ನೀವು ಲೋಕಾಯುಕ್ತ ಸಂಸ್ಥೆಗೆ ಡೆಪ್ಯುಟೇಷನ್ ಮೇಲೆ ಕೆಲವು S.P.ಗಳನ್ನು A.D.G.P. ಮತ್ತು ಇನ್ನಿತರ ಅಧಿಕಾರಿಗಳನ್ನು ಕಳುಹಿಸುತ್ತೀರಿ. They become employees of the Lokayukta Organization. ಆದರೆ ಇಲ್ಲಿ ಈ ಅಶ್ವಿನ್‌ರಾವ್‌ರವರನ್ನು ರಾಜ್ಯ ಸರ್ಕಾರ ನೇಮಕ ಮಾಡಿಲ್ಲ ಅಥವಾ ಇವರನ್ನು ಭಾಸ್ಕರರಾವ್‌ರವರು ನೇಮಕ ಮಾಡಿಲ್ಲ. He is not an employee, he is not an Officer of the Lokayukta Organization. ಹೀಗಾಗಿ, Section 15 and Section 18 ಇವುಗಳು ಅಶ್ವಿನ್‌ರಾವ್ ಮೇಲೆ ಇರುವಂಥ ಪ್ರಕರಣಗಳಿಗೆ, ಆತನ ಮೇಲೆ ಬಂದಂಥ ಭ್ರಷ್ಟಾಚಾರ ಹಗರಣಗಳಿಗೆ ಯಾವುದೇ ರೀತಿಯಾದಂಥ ಸಂಬಂಧವಿಲ್ಲ ಎನ್ನುವುದನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಅದಕ್ಕಾಗಿ Section 15 and Section 18 ಇಲ್ಲಿ applicable ಆಗುವುದಿಲ್ಲ ಎನ್ನುವುದನ್ನು ನಾನು ಇಲ್ಲಿ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಯಾವಾಗ Section 15 and Section 18 applicable ಆಗುವುದಿಲ್ಲ ಆಗ ರಾಜ್ಯ ಸರ್ಕಾರದವರು independent ಆಗಿ ಆತನನ್ನು ತನಿಖೆ ಮಾಡಲು ಸಾಧ್ಯವಿದೆ. ರಾಜ್ಯದ any agency ಯಿಂದ ವಿಚಾರಣೆ ಮಾಡಿ ಎಂದು ಲೋಕಾಯುಕ್ತದವರು ತಮಗೆ refer ಮಾಡಿದ್ದಾರೆ. S.I.T.ಯಿಂದಲೇ ಮಾಡಬೇಕು ಎಂದು ಅವರು specific ಆಗಿ ಹೇಳಿದ್ದಾರೆ ಎಂದು ತಾವು last time interpretation ಮಾಡಿದಿರಿ.

ಶ್ರೀ ಕೆ.ಜೆ. ಜಾರ್ಜ್: S.I.T. ಎಂದೇ ಅವರು ಪತ್ರ ಬರೆದಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ಆಯಿತು, specific ಆಗಿ S.I.T. ಎಂದು ಅವರು ಪತ್ರ ಬರೆದಿದ್ದಾರೆ ಎಂದು last time ಚರ್ಚೆ ಮಾಡುವಾಗ ತಾವು ಹೇಳಿದಿರಿ.

ಶ್ರೀ ಸಿದ್ದರಾಮಯ್ಯ: ನಾವು ಆ ರೀತಿ ಹೇಳಲಿಲ್ಲ, ಅವರು ಬರೆದಿರುವುದೇ ಹಾಗೆ.

ಶ್ರೀ ಜಗದೀಶ ಶೆಟ್ಟರ್: ಆ ರೀತಿ ಬರೆದಿದ್ದಾರೆ ಎನ್ನುವ ಮಾತನ್ನು ನೀವು ಹೇಳಿದಿರಿ. ಅದರ ಪ್ರಕಾರ ನೀವು S.I T.ಯನ್ನು ನೇಮಕ ಮಾಡಿದ್ದೀರಿ. ಇವತ್ತು ಅಶ್ವಿನ್‌ರಾವ್ ಮೇಲೆ F.I.R. ಆಗಿದೆ. F.I.R. ಆದಮೇಲೆ ಕೂಡಲೇ ಆತನನ್ನು arrest ಮಾಡಿ investigation ತೀವ್ರಗತಿಯಿಂದ ನಡೆಯಬೇಕಾಗಿತ್ತು. ನಿನ್ನೆ ನಾನು ಇಲ್ಲಿ ಶೂನ್ಯವೇಳೆಯಲ್ಲಿ ಗದಗಿನಲ್ಲಿ 15–20 ದಿವಸವಾದರೂ ಕುಡಿಯುವ ನೀರನ್ನು ಸರಬರಾಜು ಮಾಡದೇ ಇರುವುದರಿಂದ ಅಲ್ಲಿ ತೊಂದರೆಯಾಗಿದೆ ಎಂದು ಪ್ರಸ್ತಾಪ ಮಾಡಿದೆ. ಅದಕ್ಕೆ ನಿನ್ನೆ ಹೆಚ್.ಕೆ. ಪಾಟೀಲರೂ ಉತ್ತರ ಕೊಟ್ಟರು. ಅಲ್ಲಿ ನೀರಿನ ಸಲುವಾಗಿ ಧರಣಿ ಮಾಡಿ, ಹೋರಾಟ ಮಾಡುತ್ತಿದ್ದವರ ಮೇಲೆ non-bailable case ಹಾಕಿ, ಅವರನ್ನು arrest ಮಾಡಿದ್ದಾರೆ. ಕುಡಿಯುವ ನೀರಿನ ಸಲುವಾಗಿ ಹೋರಾಟ ಮಾಡುವವರನ್ನು ತಕ್ಷಣವೇ ಅರೆಸ್ಟ್ ಮಾಡಿ ಜೈಲಿಗೆ ಹಾಕಿದ್ದಾರೆ. ಆದರೆ ನೂರಾರು ಕೋಟಿ ರೂಪಾಯಿಗಳನ್ನು ಲೂಟಿ ಮಾಡಿ, ಅಧಿಕಾರಿಗಳನ್ನು ಬ್ಲಾಕ್‌ಮೇಲ್ ಮಾಡಿ, ಲೋಕಾಯುಕ್ತ ಸಂಸ್ಥೆಯ ಹೆಸರನ್ನು ದುರುಪಯೋಗ ಮಾಡಿದಂಥ ವ್ಯಕ್ತಿಯಾದ ಅಶ್ವಿನ್‌ರಾವ್ ಮತ್ತು ಆತನ ಸಹಪಾಠಿಗಳ ಮೇಲೆ ಯಾವುದೇ ಕ್ರಮ ಆಗುತ್ತಿಲ್ಲ. ಇವತ್ತಿನವರೆಗೂ ಅವನನ್ನು ಅರೆಸ್ಟ್ ಮಾಡುತ್ತಿಲ್ಲ.

ಶ್ರೀ ಕೆ.ಜೆ. ಜಾರ್ಜ್: ಕಾನೂನು ಪ್ರಕಾರ ಯಾರೇ ಮುಷ್ಕರ ಮಾಡಿದರೆ ಅಥವಾ ಶಾಂತಿಯುತವಾಗಿ ಮಾಡಿದರೆ ಪೊಲೀಸರು ಅವರನ್ನು ಅರೆಸ್ಟ್ ಮಾಡುವುದಿಲ್ಲ. ಕಾನೂನು ಉಲ್ಲಂಘನೆಯಾದಂಥ ಸಂದರ್ಭದಲ್ಲಿ ಮಾತ್ರ ಅರೆಸ್ಟ್ ಮಾಡುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್: ಅದಕ್ಕೇ ನಾನು ಹೇಳಿದ್ದು, ನಿಮ್ಮ ಪ್ರಕಾರ ಅಶ್ವಿನ್‌ರಾವ್ ಇನ್ನೂ ಯಾವುದೇ ಕಾನೂನನ್ನು ಉಲ್ಲಂಘನೆ ಮಾಡಿಲ್ಲ ಎಂದು ನನಗನ್ನಿಸುತ್ತದೆ.

ಅಧ್ಯಕ್ಷರು: ಆಯಿತು, ನೀವು ಹೇಳಿ. ಇದು ಎಲ್ಲ ಸರ್ಕಾರಗಳಲ್ಲೂ ನಡೆದಿವೆ.

ಶ್ರೀ ಜಗದೀಶ ಶೆಟ್ಟರ್: ಇದುವರೆಗೆ ಅಶ್ವಿನ್‌ರಾವ್ ಯಾವುದೇ ಕಾನೂನನ್ನು ಉಲ್ಲಂಘನೆ ಮಾಡಿಲ್ಲ, ಅದಕ್ಕೇ ನೀವು ಅರೆಸ್ಟ್ ಮಾಡಿಲ್ಲ. ಹಾಗೇ ಆಗಲಿ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಕೆ.ಜೆ. ಜಾರ್ಜ್: ಮಾನ್ಯ ಜಗದೀಶ್ ಶೆಟ್ಟರ್‌ರವರೆ, ತಾವು ಹೇಳುವುದು ಸತ್ಯಕ್ಕೆ ದೂರವಾಗಿದೆ. ಅಶ್ವಿನ್‌ರಾವ್ ಮೇಲೆ ಆಗಲಿ ಅಥವಾ ಇನ್ನೊಬ್ಬರ ಮೇಲೆ ಆಗಲಿ, ಈಗಾಗಲೇ SIT ಯನ್ನು ನೇಮಕ ಮಾಡಿದ್ದೇವೆ. ತನಿಖೆ ನಡೆಯುತ್ತಿದೆ. Investigation ಗೆ allow ಮಾಡಿ ಯಾರೇ ತಪ್ಪು ಮಾಡಿದ್ದರೂ ಸಹ ಅವರ ಮೇಲೆ ಕಾನೂನಿನ ಪ್ರಕಾರವಾಗಿ ಕ್ರಮ ತೆಗೆದುಕೊಳ್ಳಲು ನಮ್ಮ ಸರ್ಕಾರ ಹಿಂಜರಿಯುವುದಿಲ್ಲ.

ಶ್ರೀ ಜಗದೀಶ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ನಾನು ಹೇಳಿದ ಪ್ರಕಾರ, ಒಂದು ಕಡೆ ಮಾನ್ಯ ಮುಖ್ಯಮಂತ್ರಿಯವರು ಹೇಳಿಕೆಯನ್ನು ಕೊಟ್ಟರು. ಗೃಹ ಸಚಿವರೂ ಒಂದು ಕಡೆ ಹೇಳಿದರು. ಏನೆಂದರೆ, ನಾವು ಲೋಕಾಯುಕ್ತ ಕಾನೂನಿನ ಅಡಿ ಇದನ್ನು ಸಿ.ಬಿ.ಐ ಗೆ ವಹಿಸಬೇಕೆಂದು ಒತ್ತಾಯ ಮಾಡಿದಾಗ, ನೀವು ಆ ಅಧಿಕಾರ ನನಗೆ ಇಲ್ಲವೆಂದು ಹೇಳಿದಿರಿ. ನಾನು ಇವತ್ತು ಹೇಳುತ್ತಿದ್ದೇನೆ. ಈ ಒಂದು ಸೆಕ್ಷನ್ ಪ್ರಕಾರ SIT ಮುಖಾಂತರ ತನಿಖೆಯಾಗಬೇಕೆಂದು, ಒಂದು ಕಡೆ ವಿಚಾರ ಮಾಡಬೇಕು, ಇವತ್ತು ಯಾವ ಲೋಕಾಯುಕ್ತರ ಮಗನ ಮೇಲೆ corruption charges ಬಂದಿದೆ, ಆತನ ಬಗ್ಗೆ ಅವರು ಇಂಥವರಿಂದಲೇ ತನಿಖೆ ಮಾಡಬೇಕು ಎನ್ನುವಂತಹ ಸಲಹೆ ಸೂಚನೆಯನ್ನು ಕೊಡುವುದು ಇದೆಯಲ್ಲಾ, ಅದು ಬಹಳ ಆಘಾತಕಾರಿಯಾದ ಸಂಗತಿ. ಹೀಗಾಗಿ ಇವತ್ತು ಹೇಗಾದರೂ FIR file ಆಗಿದೆ. FIR file ಆದ ಮೇಲೆ ಅದರ ಪ್ರಕಾರ, ಕೆಲವೊಂದು ಪ್ರಕರಣಗಳನ್ನು ನಾವು ಏನು ನೋಡಿದ್ದೇವೆ, ಕ್ರಿಕೆಟ್ ಬೆಟ್ಟಿಂಗ್ ಪ್ರಕರಣ ನಡೆದಾಗ ನೀವು ಅದನ್ನು ಸಿ.ಐ.ಡಿ.ಗೆ ಕೊಡುತ್ತೇವೆ ಎಂದು ಹೇಳಿದಿರಿ, ಅದರಂತೆ ಕೊಟ್ಟಿದ್ದೀರಿ. ಅದರ

ಬಗ್ಗೆ ಮತ್ತೊಂದು ಬಾರಿ detail ಆಗಿ ಚರ್ಚೆ ಮಾಡುತ್ತೇನೆ. FIR file ಮಾಡಿದಂತಹ ಸಂದರ್ಭದಲ್ಲಿ ಲಾಟರಿ ಹಗರಣ ನಡೆಯಿತು. ಅದನ್ನು ನೀವು CBI ಗೆ refer ಮಾಡಿದಿರಿ. ಡಿ.ಕೆ. ರವಿಯವರ ಹತ್ಯೆ ಆಯಿತು. ಆ ಒಂದು ಸಂದರ್ಭದಲ್ಲಿ ಅದನ್ನು CBI ಗೆ refer ಮಾಡಿದಿರಿ. ಇವತ್ತು ಅಶ್ವಿನ್‌ರವರ ಬಗ್ಗೆ FIR file ಆಗಿದೆ. ನಮಗೆ ಅಧಿಕಾರವಿಲ್ಲ ಎಂದು ರಾಜ್ಯಸರ್ಕಾರ ಹೇಳುವಂಥದ್ದು ಇದೆಯಲ್ಲಾ, ಅದು ಸರಿಯಲ್ಲ. ಇದರ ಬಗ್ಗೆ ನೀವು ದೃಢವಾದಂತಹ ನಿರ್ಧಾರ ಕೈಗೊಳ್ಳಬೇಕಾಗಿದ್ದರೆ, ಒಂದು bold step ತೆಗೆದುಕೊಳ್ಳಬೇಕಾಗಿದ್ದರೆ, ಇಂತಹ ಒಂದು corruption ನಡೆಯುವಂತಹ ಸಂದರ್ಭದಲ್ಲಿ ಇವರ ಮೇಲೆ ಒಂದು ದೃಢವಾದಂತಹ answer ಕೊಡಬೇಕಾಗಿದ್ದರೆ, ನೀವು FIR file ಆಗಿದೆಯಲ್ಲಾ, ಆ FIR ಪ್ರಕರಣವನ್ನೇ CBI ಗೆ refer ಮಾಡಬಹುದಾಗಿತ್ತು. ಆದರೂ ತಾವು ಮಾಡಲಿಲ್ಲ.

ಶ್ರೀ ಕೆ.ಜೆ. ಜಾರ್ಜ್: ಮಾನ್ಯ ಜಗದೀಶ್ ಶೆಟ್ಟರ್‌ರವರೆ, ನೋಡಿ ನಮ್ಮ ಪೋಲೀಸ್‌ನವರಿಗೆ ಯಾರೂ complaint ಕೊಟ್ಟಿರಲಿಲ್ಲ. ಕೃಷ್ಣಮೂರ್ತಿಯವರು ಮೊದಲು ಲೋಕಾಯುಕ್ತ ಪೋಲೀಸ್‌ನವರಿಗೆ complaint ಕೊಟ್ಟಿದ್ದಾರೆ. ಯಾವಾಗ ಲೋಕಾಯುಕ್ತ ಪೋಲೀಸ್‌ರವರು FIR ಮಾಡಿದ್ದಾರೆ. ಆವತ್ತು ಹೈಕೋರ್ಟ್‌ನಿಂದ ಆದೇಶ ಬಂದಿದೆ. ಸರ್ಕಾರ SIT ಯವರನ್ನು ನೇಮಿಸಿದೆ. SITಯವರೆ Investigation ಮಾಡಲಿ. ಅಲ್ಲಿಯತನಕ ಲೋಕಾಯುಕ್ತ ಪೋಲೀಸ್‌ನವರು ಮಾಡಬಾರದು ಎಂದು ಹೈಕೋರ್ಟ್ ಆದೇಶ ಕೊಟ್ಟಿದೆ. ಅದಕ್ಕೋಸ್ಕರ SIT ಯಿಂದ Investigation ನಡೆಯುತ್ತಿದೆ.

ಶ್ರೀ ಜಗದೀಶ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ, ಕಮಲ್‌ಪಂಥ್‌ರವರ ನೇತೃತ್ವದಲ್ಲಿ SIT ಎಂದು ಏನು ಮಾಡಿದ್ದಾರೆ, ಜುಲೈ 8ನೇ ತಾರೀಖಿಗೆ ಒಬ್ಬರು ಕೃಷ್ಣಮೂರ್ತಿ ಎನ್ನುವವರು ಒಂದು complaint file ಮಾಡುತ್ತಾರೆ. ಆ complaint ಅನ್ನು register ಮಾಡಿಕೊಂಡಿದ್ದಾರೆ. ಅದರ ಮೇಲೆ ತನಿಖೆಯಾಗಬೇಕು. ಹೀಗಾಗಿ ನಿಮಗೆ ನಿಜವಾಗಿಯೂ ಇವತ್ತು ಕಳಕಳಿ ಇದ್ದರೆ ನಾನು ಹೇಳುವಂಥದ್ದು ಏನೆಂದರೆ, ಕೃಷ್ಣಮೂರ್ತಿಯವರು ಜುಲೈ 8ನೇ

ತಾರೀಖಿನಂದು ಕೊಟ್ಟಿರುವ complaint ನಲ್ಲಿ ನೇರವಾಗಿ ಆಪಾದನೆ ಏನು ಮಾಡಿದ್ದಾರೆ ಎಂದರೆ, 'ನಾನು ಭಾಸ್ಕರ್‌ರವರ ಹತ್ತಿರ ನನ್ನ ಕೋರಮಂಗಲ ಜಮೀನಿನ ವಿಷಯವನ್ನು ತಿಳಿಸಿದೆನು. ಅವರು ನನಗೆ ನೀವು ಅಶ್ವಿನ್‌ರಾವ್‌ಗೆ ಏನು ಕೊಡುತ್ತೀರೋ ಎಂದು ಹೇಳಿದ್ದರೋ ಅದರಲ್ಲಿ ನನಗೆ 20 ಲಕ್ಷ ರೂ.ಗಳನ್ನು ನನಗೆ ಕೊಡಿ. ನಾನು ನಿಮ್ಮ ಕೆಲಸವನ್ನು ಏಳು ದಿವಸಗಳಲ್ಲಿ ಮಾಡಿಕೊಡುತ್ತೇನೆ ಎಂದು ಹೇಳಿದರು. ಈಗಾಗಲೇ ನಾನು ಮೇಲೆ ಹೇಳಿದ ಪ್ರಕಾರ ನನ್ನ original file ಲೋಕಾಯುಕ್ತ ಆಫೀಸ್‌ನ ರಿಯಾಜ್ ಹತ್ತಿರ ಇದೆ ಎಂದು ಭಾಸ್ಕರ್‌ರವರಿಗೆ ಹೇಳಿದೆ. ಅದಕ್ಕೆ ಅವರು ನೀವು ನನಗೆ ಎರಡು ಲಕ್ಷ ರೂ.ಗಳನ್ನು ಕೊಟ್ಟರೆ ನಿಮ್ಮ original file ನಿಮಗೆ ಕೊಡುತ್ತೇನೆ ಎಂದು ಹೇಳಿದರು. ಮಾರನೆ ದಿನ ಎರಡು ಲಕ್ಷ ರೂ.ಗಳ ನಗದು ಹಣವನ್ನು ತೆಗೆದುಕೊಂಡು ಹೋಗಿ ಭಾಸ್ಕರ್‌ರವರಿಗೆ ಕೊಟ್ಟೆನು. ಅದೇ ದಿನ ಸಂಜೆ ಲೋಕಾಯುಕ್ತ ಆಫೀಸ್‌ನಲ್ಲಿದ್ದ original file ಅನ್ನು ಸಂಜೆ 6.30 ಗಂಟೆಗೆ ಲೋಕಾಯುಕ್ತ ಆಫೀಸ್‌ನ ರಿಯಾಜ್‌ರವರ ಕಛೇರಿಯಲ್ಲಿ ಕೊಟ್ಟಿರುತ್ತಾರೆ? ಎರಡು ಲಕ್ಷ ರೂ.ಗಳನ್ನು ಕೊಟ್ಟಕೂಡಲೇ ಆ original file ಕೂಡ ಬಂದಿತು. 'ಅದನ್ನು ನಾನು ಪರಿಶೀಲನೆ ಮಾಡಲಾಗಿ ಎಲ್ಲವೂ ಸರಿಯಾಗಿರುತ್ತದೆ. ಆದ್ದರಿಂದ ನನಗೆ ಭಾಸ್ಕರ್‌ರವರ ಮೇಲೆ ನಂಬಿಕೆ ಬಂದಿರುತ್ತದೆ. ಮುಂದಿನ ಪ್ಯಾರಾದಲ್ಲಿ ನಾನು ಅವರಿಗೆ ಮಾತನಾಡಿರುವ ಪ್ರಕಾರ 20 ಲಕ್ಷ ರೂ.ಗಳನ್ನು ದಿನಾಂಕ: 19.12.2014 ರಂದು ಭಾಸ್ಕರ್‌ರವರಿಗೆ ಐದು ಲಕ್ಷ ರೂ.ಗಳನ್ನು ಏಟ್ರಿಯಾ ಹೋಟೆಲ್‌ನಲ್ಲಿ ಕೊಟ್ಟಿರುತ್ತೇನೆ. ಮತ್ತೆ ದಿನಾಂಕ: 02.01.2014 ರಂದು Le Meridien ನಲ್ಲಿ ಭಾಸ್ಕರ್‌ರವರು massage ಮಾಡಿಸಿಕೊಳ್ಳುತ್ತಿದ್ದ ಜಾಗಕ್ಕೆ ಹೋಗಿ ಮೂರು ಲಕ್ಷ ರೂ.ಗಳನ್ನು ಕೊಟ್ಟೆ. ಅಶ್ವಿನ್‌ರಾವ್‌ರವರಿಗೆ ಕೊಟ್ಟಿರುವ ಬಗ್ಗೆ... ಈ ವಿಷಯವನ್ನು ನಾನು ಅಶ್ವಿನ್‌ರಾವ್‌ರವರ ಗಮನಕ್ಕೆ ತಂದೆನು. ಅವರು ನರಸಿಂಹರಾವ್‌ರವರ ಜೊತೆ ಮಾತನಾಡಿ ಜಮೀನನ್ನು ನೋಡಿಕೊಂಡು ಬಾ ಎಂದು ತಿಳಿಸಿದರು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಜಗದೀಶ್ ಶೆಟ್ಟರ್‌ರವರೆ, ನಾನು ನಿಮ್ಮ ಮಾತಿನ ಸರಣಿಗೆ ಅಡ್ಡ ಬರುವುದಿಲ್ಲ. ಈ ಸದನಕ್ಕೆ ತನ್ನದೇ ಆದಂತಹ ಒಂದು ಪಾವಿತ್ರ್ಯತೆ, ಘನತೆ ಇದೆ ಎಂದು ತಮಗೂ ನನಗಿಂತ ಚೆನ್ನಾಗಿ ಗೊತ್ತು. ನೀವು ಇಷ್ಟು ಹೊತ್ತು debate ಮಾಡುತ್ತಿರುವುದು, point out ಮಾಡುತ್ತಿರುವುದು about a person who is not a public servant, who is not a man of any eminence. At best ನೀವು ಹೇಳುತ್ತಿರುವುದನ್ನೆಲ್ಲಾ ಅವನು ಮಾಡಿದ್ದರೆ he is a criminal. ಅವನನ್ನು ಇಷ್ಟು glorify ಮಾಡಿ ನಾವು ಇಲ್ಲಿ ಚರ್ಚೆ ಮಾಡಬೇಕಾ? ಯಾರು public servant, ಆಗಿರುತ್ತಾರೆ, ಅವರು ಯಾರಾದರೂ ಇದರಲ್ಲಿ involve ಆಗಿದ್ದರೆ ಅವರ ಮೇಲೆ ಏನು ಕ್ರಮ ಜರುಗಿಸಬೇಕೆಂದು ನಮ್ಮಲ್ಲಿದೆ. We can tell the Government through the Speaker. ಒಬ್ಬ Criminal ಬಗ್ಗೆ alleged to be a criminal, I don't want to say he is a criminal. Alleged criminal ಬಗ್ಗೆ ನಾವು ಇಷ್ಟು glorify ಮಾಡುತ್ತಾ ಹೋದರೆ, ಎಲ್ಲೋ ಒಂದು ಕಡೆಗೆ, inadvertently are we not sending a wrong message to the society. He is a very small fellow, whoever he is. ಅವರ ಅಪ್ಪ ದೊಡ್ಡ ಮನುಷ್ಯ ಆದರೆ ಆತ ಬಂದು defend ಮಾಡಿಕೊಳ್ಳಲಿ. ನಾನು ಬಹಳ ದೊಡ್ಡ ಮನುಷ್ಯ. ನನ್ನ ಮಗ ಹೀಗೆ ಮಾಡಿಬಿಟ್ಟಿದ್ದಾನೆ ಎಂದು ಆವಾಗ the cat will be out of the bag. We have nothing against the incumbent by way of documentary evidence. I am not at all trying to defend. ನಮಗೆ ಮಾನ್ಯ ಸುರೇಶ್‌ಕುಮಾರ್‌ರವರು ಹೇಳಿದಂತಹ ಒಂದು ಮಾತು hurt ಮಾಡಿದೆ. ನಾವೆಲ್ಲರೂ ಈ ಸದನದ ಸದಸ್ಯರಾಗಿ ಹೇಗೆ ಹೊರಗೆ ಹೋಗಿ ಮುಖ ತೋರಿಸುವುದು? ಒಂದು ಕಡೆಗೆ ಸಮಾಜದಲ್ಲಿ ಬಹಳ ಪ್ರತಿಷ್ಠಿತರಾಗಿರುವಂಥವರು ಆತ ಹೋಗಬೇಕೆಂದು ಹೋರಾಟ ಮಾಡುತ್ತಿದ್ದಾರೆ. ನಾವು ಪ್ರತಿದಿವಸ ಕೈಕಟ್ಟಿ ಕುಳಿತುಕೊಂಡರೆ ನಮಗೆ ಇವೆಲ್ಲಾ ಅಪಮಾನ. We share your anxiety. I am totally with you. My appeal to you is since the man about whom you are raising all these issues does not enjoy any locus standi, should we glorify him

to that extent? ಹಾಗಾದರೆ ನಾವು ಚಾರ್ಲ್ಸ್ ಶೋಭರಾಜ್‌ರವರ ಬಗ್ಗೆ ಕೂಡ ಮಾತನಾಡಬೇಕಾಗುತ್ತದೆ. Sometimes ಏನಾಗುತ್ತದೆ ಎಂದರೆ, media, ನಾವು ಕೊಡುವಂತಹ adverse publicity ಯಿಂದ ಈ ರೀತಿಯ activities ನಲ್ಲಿರುವವರಿಗೆ credibility ಬರುತ್ತದೆ. Market ಹೆಚ್ಚುತ್ತದೆ. We should not do that. You have made out a very good case. ತಮ್ಮ Appeal ನಾವು helpless ಆಗಬಾರದು ಎನ್ನುವಂಥದ್ದು, I am totally with you. I fully endorse your views. For a minute, please do not think either I am trying to defend them or trying to derail you. Should we lay so much of emphasis on an inconspicuous person in this August House? Should he take so much of the valuable time of this August House? That's all my submission.

ಶ್ರೀ ಆರ್. ಜಗದೀಶ್‌ಕುಮಾರ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಮೇಶ್‌ಕುಮಾರ್‌ರವರು ಹೇಳುವುದು ಸರಿಯಿದ್ದರೆ why can't we pass a unanimous resolution? Because he is the son of Bhaskar Rao who is the Lokayukta, we all feel morally, the Lokayukta should not continue. Legal is separate. Why can't we pass a resolution in this House asking him to quit and go out?

SRI K.R. RAMESH KUMAR: Resolutions will not be passed by any sensible body to appeal to the conscience of people. If men who occupy positions have their conscience which is alive and kicking, they don't wait for our resolutions. By passing a resolution, you are further denigrating your importance. If that gentleman had conscience…. You read out sections 15 and 18, you please again read sections 15 and 18 underlying importance, the emphasis is laid on conscience. Either consensus or conscience; consensus is a deliberation, conscience is an individual act. It appeals to the conscience of the person…..

ಶ್ರೀ ಕೆ.ಜಿ. ಬೋಪಯ್ಯ: ನಾವೇ ಕಾನೂನು ಮಾಡಿ ಸ್ಥಾಪನೆ ಮಾಡಿದಂತಹ ಸಂಸ್ಥೆ ಆಗಿರುವುದರಿಂದ ನಾವೇನು resolution ಮಾಡುವುದು?

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ರಮೇಶ್‌ಕುಮಾರ್‌ರವರೆ ಒಂದು ನಿಮಿಷ. ಮಾನ್ಯ ರಮೇಶ್‌ಕುಮಾರ್‌ರವರು persona non grata ಗೆ ಈ ಸದನ ಇಷ್ಟು ಮಹತ್ವ ಕೊಡಬೇಕೇ ಎನ್ನುವ ಪ್ರಶ್ನೆ ಹೇಳಿದರು. ನೀವು normal ಆಗಿ ಹೇಳುವಂತಹ ಮಾತು ಸರಿಯಿದೆ. ಆದರೆ ಇಲ್ಲಿ ಇರುವಂತಹ ಸಂದರ್ಭ, circumstances, he is a person who has got all the proximity and he has positioned himself in such a way that he can misuse the office of the Lokayukta and all the transactions have been done through him ಎನ್ನುವಂತಹ ಬಹಳಷ್ಟು circumstance evidence ಮತ್ತು complaint is against such a person who is very very important person in the Lokayukta. Establishment ಇಲ್ಲದಿದ್ದರೂ ಕೂಡ ಮನೆಯಲ್ಲಿ important ಆಗಿದ್ದಾರೆ. ಹೀಗಾಗಿ ಇವತ್ತು ನೀವು ಲೋಕಾಯುಕ್ತ ಸರಿಯಿದ್ದಾರೋ, ತಪ್ಪು ಇದ್ದಾರೋ ಎನ್ನುವಂತಹ ಪ್ರಶ್ನೆ ಇಲ್ಲಿ ಇಲ್ಲ. ಆದರೆ modus operandi ಅವನ ಮುಖಾಂತರ ಆಗುವುದರಿಂದ ನೀವು ಏನಾದರೂ ಅಥವಾ investigation ಆಗಲಿ ಏಕೆ ಮಾಡಬೇಕು ಎನ್ನುವುದಕ್ಕಾಗಲಿ establish ಮಾಡಬೇಕಾದರೆ ಆ complaint ಅನ್ನು ಯಾವ ರೀತಿ ಗಂಭೀರತೆಯಿಂದ ತೆಗೆದುಕೊಳ್ಳಬೇಕು, ಎಷ್ಟೇ persona non grata ಇದ್ದರೂ ಕೂಡ proximity of that person and the position of that person what he can do and cannot do is so important. Let us not go by whether he is an important or not. We should go by the happenings, evidences and circumstantial evidences which has relied that this the key person, he is the king pin he is the key and everything depends on that person's investigation. Therefore, any action that has been done by him and through the complaint which has been established, at least prima facie

ಅದನ್ನು ನಾವು ಇಲ್ಲಿ ಹೇಳದೇ ಇದ್ದರೆ ಇವತ್ತು ಏಕೆ investigation CBI ಗೆ ಹೋಗಬೇಕು ಅಥವಾ ಇನ್ನೊಂದಕ್ಕೆ ಹೋಗಬೇಕು ಎನ್ನುವುದನ್ನು ನಮಗೆ establish ಮಾಡುವುದಕ್ಕಾಗುವುದಿಲ್ಲ. ಅದನ್ನು ನಾವು ಇಲ್ಲಿ ಹೇಳದೆ ಇದ್ದರೆ ಇವತ್ತು ಏಕೆ investigation CBI ಗೆ ಹೋಗಬೇಕು ಅಥವಾ ಇನ್ನೊಂದಕ್ಕೆ ಹೋಗಬೇಕೆನ್ನುವುದನ್ನು ನಮಗೆ establish ಮಾಡುವುದಕ್ಕಾಗುವುದಿಲ್ಲ ಆದಕಾರಣ ಅದನ್ನು ನಾವು ಹೇಳಬೇಕಾಗುತ್ತದೆ. It is not a question of persona non grata

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಬೊಮ್ಮಾಯಿಯವರೆ, ನಿಮಗೆ ಸಹಾಯ ಮಾಡುವುದಕ್ಕಾಗಿ ನಾನು ನಿಂತಿದ್ದೇನೆ ಮಾನ್ಯ ಸುರೇಶ್ ಕುಮಾರ್‌ರವರು...

ಶ್ರೀ ಬಸವರಾಜ ಬೊಮ್ಮಾಯಿ: ಅವನ Market ಹೆಚ್ಚಾಗುತ್ತದೆಯೋ ಕಡಿಮೆಯಾಗುತ್ತದೋ ಅದಕ್ಕೂ ನಮಗೂ ಸಂಬಂಧವಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್: Please listen to me. ಮಾನ್ಯ ಬಸವರಾಜ್ ಅವರೆ, kindly listen to me. ಮಾನ್ಯ ಸುರೇಶ್ ಕುಮಾರ್‌ರವರು ಮಾತನಾಡುವಾಗ ಒಂದು ಹಳೆಯ ವಿಚಾರವನ್ನು ಪ್ರಸ್ತಾಪ ಮಾಡಿದರು. ಅವರು extra constitutional authority ಬಗ್ಗೆ ಬಹಳ ಮಾರ್ಮಿಕವಾಗಿ ಹೇಳಿದರು. ಅವರು ಹೇಳಿದ್ದೇನು? Emergency ಯಲ್ಲಿ ಇದನ್ನು ಹೇರುವ ಮೊದಲ ಸನ್ನಿವೇಶದಲ್ಲಿ ಅಂದಿನ ಪ್ರಧಾನಮಂತ್ರಿಗಳಾಗಿದ್ದ ಇಂದಿರಾಗಾಂಧಿಯವರು ಅವರ ಮಗ ಸಂಜಯಗಾಂಧಿಯವರಿಗೆ ಎಲ್ಲಾ ವಿಚಾರಗಳಲ್ಲಿ ಆಡಳಿತದಲ್ಲಿ ಹಸ್ತಾಕ್ಷೇಪ ಮಾಡುವುದಕ್ಕೆ ಬಿಟ್ಟರು. ಅವರೆ ಯಾವುದೇ ಸಂವಿಧಾನಬದ್ಧವಾದಂತಹ ಅಧಿಕಾರವನ್ನು ಹೊಂದಿಲ್ಲದೆ even Chief Ministers had to go and wait for his appointment. This is exactly what the greatest man that was born on this soil ಜಯಪ್ರಕಾಶ್ ನಾರಾಯಣರಾವ್‌ರವರು Extra Constitutional Authorityಯ ವಿರುದ್ಧ ನಾವು ಹೋರಾಟ ಮಾಡಬೇಕೆಂದು ಅವರು first ಹೇಳಿದ್ದರು ಇದು ಹೌದು

ತಾನೇ. You were trying to shield, I am trying to reveal the whole thing. ಆಗ ಮಾನ್ಯ ಜಯಪ್ರಕಾಶ್ ನಾರಾಯಣರವರು ಏನು ಹೇಳಿದರೆಂದರೆ even appeal to the Armed Forces, ಅಸಂಬದ್ಧವಾದಂತಹ ಆದೇಶಗಳು ಬಂದರೆ ಸಂದೇಶಗಳು ಬಂದರೆ constitutional authority ಯಿಂದ ಬರದೆ ಹೋದರೆ ದೇಶದ ಹಿತಕ್ಕೆ ಅಲ್ಲದೆ ಹೋದರೆ defy ಮಾಡಿ ಎಂದು ಕೂಡ call ಕೊಟ್ಟರು, ಇದು ಹೌದಾ? He never took the name of Sanjay Gandhi. ನಾನು emergency ಇದ್ದಾಗ ಯೂತ್ ಕಾಂಗ್ರೆಸ್‌ನಲ್ಲಿದ್ದೆ. ಸಂಜಯಗಾಂಧಿಯವರ leadership ಇತ್ತಲ್ಲಾ, ಅಲ್ಲಿ ನಾನೂ ಇದ್ದೆ. ಒಂದು ಕಡೆಯೂ ಕೂಡ please listen to me ಒಂದೇ ಒಂದು ಸಂದರ್ಭದಲ್ಲಿಯೂ ಕೂಡ ಜಯಪ್ರಕಾಶ್ ನಾರಾಯಣರವರಂತಹ ಎತ್ತರದ ವ್ಯಕ್ತಿ ಎಚ್ಚರತಪ್ಪಿಯೂ ಕೂಡ ಸಂಜಯ್ ಗಾಂಧಿಯವರ ಹೆಸರನ್ನು ಉಲ್ಲೇಖ ಮಾಡಲೇ ಇಲ್ಲ. He went on telling ನೀನು constituiton ನಲ್ಲಿ you are sworn in as the Prime Minister. You have allowed a situation where your authority is being misused by a person who has proximity to you. He sits in your office. He is running all this show ಎಂದು ಹೇಳಿ ಹೇಳಿದರು. That is why he branded that person as the extra constitutional authotrity. We are not discussing about that big a person. ಅದಕ್ಕೆ ನಾನು ಏನು ಹೇಳಿದ್ದೇನೆಂದರೆ let us not try.....

ಶ್ರೀ ಬಸವರಾಜ ಬೊಮ್ಮಾಯಿ: ಸಾರ್ ಒಂದೇ ಒಂದು ಸೆಕೆಂಡ್ ಹೇಳುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: As you rightly said, persona non grata ಇದ್ದಾರಲ್ಲಾ, ಅವರಿಗೆ ಇಷ್ಟು glorification ಬೇಕಾ ಎಂದು ನಾನು ಹೇಳಿದ್ದು ಅಷ್ಟೆ.

ಶ್ರೀ ಬಸವರಾಜ ಬೊಮ್ಮಾಯಿ: ನೀವು ಮಾನ್ಯ ಜಯಪ್ರಕಾಶ್ ನಾರಾಯಣರವರ ಬಗ್ಗೆ ಹೇಳಿರುವಂತಹದ್ದು factually correct ಇದೆ. That shows the greatness of the man. ಇಲ್ಲಿ ಏನಾಗಿದೆ ಪ್ರಶ್ನೆ ಅದಲ್ಲ. The very Lokayuktha is using this position as a Lokayuktha to decide his investigation and his son being accused. That has to be established here ನೀವು ಆ ತರಹ ಬಹಳ ದೊಡ್ಡ ಎತ್ತರದ example ಕೊಟ್ಟು ಈಗ ಇರುವಂತಹ situation ಅನ್ನು ನಾವು ತಿಳಿ ಮಾಡುವುದಕ್ಕಾಗುವುದಿಲ್ಲ ಸಾರ್. ದಯವಿಟ್ಟು seriousness of that issue is, ನಾನು ಅದಕ್ಕೆ ಹೇಳಿದೆ he is a fulcrum of what is happening in the entire institution of Lokayuktha. We cannot just ignore him just because he is a non-public office. Therefore.....

ಶ್ರೀ ಕೆ.ಆರ್. ರಮೇಶ್‌ಕುಮಾರ್: ನೀವು ಏನು ಹೇಳಬೇಕಾಗಿತ್ತು ಗೊತ್ತಾ, Home Minister ಗೆ ಹೇಳಿ ಯಾರ್ರೀ who is this Ashwin? He is nobody. ಇವನಿಗೇನು ಕೆಲಸ, ಇವೆಲ್ಲವನ್ನು ಮಾಡಿದ್ದಾನೆ. FIR register ಆಗಿದ್ದರೆ why have you not taken him into custody? If it is a congnizable offence, why did you not take him into custody? Who is preventing you from taking him into custody? Why the law has not taken its course ಎಂದು ನೀವು ಅದನ್ನು ಕೇಳಿ.

ಶ್ರೀ ಬಸವರಾಜ ಬೊಮ್ಮಾಯಿ: ಅದನ್ನೇ ನೀವು ಕೇಳುವುದಕ್ಕೆ ಬಿಡಿ. ಕೇಳುತ್ತಾರೆ. ಒಬ್ಬ ಮನುಷ್ಯ de jure ನಾ de-facto ನಾ ಎಂದು ನಮಗೆ ಗೊತ್ತಾಗಬೇಕಲ್ಲವೇ?

(ಗೊಂದಲ)

ಶ್ರೀ ಅಶೋಕ ಖೇಣಿ: ಮಾನ್ಯ ಉಪಾಧ್ಯಕರೆ, 2 minutes...

ಶ್ರೀ ಕೆ.ಜೆ. ಜಾರ್ಜ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಮೇಶ್‌ಕುಮಾರ್‌ರವರು ಹೇಳಿರುವ ಬಗ್ಗೆ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ.

ಶ್ರೀ ಅಶೋಕ ಖೇಣಿ: ಮಾನ್ಯ ಉಪಾಧ್ಯಕರೆ, ಈಗ ಏನಾಗಿದೆ ಎಂದರೆ when you have only one Lokayuktha, he will be very powerful. What you have to do is just like in Election Commission, they have made three members, both the Upa Lokayukthas should be made Lokayuktha. So we will have three Lokayukthas.

ಶ್ರೀ ಕೆ.ಜೆ. ಜಾರ್ಜ್: ಈಗಾಗಲೇ ಮಾನ್ಯ ರಮೇಶ್ ಕುಮಾರ್‌ರವರು ಒಂದು ಮಾತನ್ನು ಹೇಳಿದ್ದಾರೆ. FIR ಅನ್ನು ಹಾಕಿದ ಮೇಲೆ ಏತಕ್ಕಾಗಿ ಅವರನ್ನು arrest ಮಾಡಲಿಲ್ಲ. ಈ ಬಗ್ಗೆ ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. Complaint ಹೋಗಿರುವುದು ಅದು ನಮ್ಮ ಪೊಲೀಸ್ ವ್ಯಾಪ್ತಿಗೆ ಬರಲಿಲ್ಲ. ಅದು ಲೋಕಾಯುಕ್ತ ಪೊಲೀಸ್‌ಗೆ complaint ಹೋಗಿದೆ. ಲೋಕಾಯುಕ್ತ ಪೊಲೀಸ್‌ನವರು ಕೇಸ್ ಅನ್ನು ರಿಜಿಸ್ಟರ್ ಮಾಡಿ enquiry ಮಾಡುತ್ತಾರೆ. ನಮಗೆ SIT ಎಂದು ... ಲೋಕಾಯುಕ್ತದವರು ಇಲ್ಲಿ ಯಾರನ್ನು ರಕ್ಷಣೆ ಮಾಡುವ ವಿಚಾರವಿಲ್ಲ. ಲೋಕಾಯುಕ್ತದವರು SIT ಮಾಡಿದ್ದೇವೆಂದು ಹೇಳಿದ್ದಾರೆಯೇ ಹೊರತು ಯಾವ officer ಕಡೆಯಿಂದ ಮಾಡಿಸಿದ್ದೇವೆಂದು ಹೇಳಲಿಲ್ಲ. ನಾವು ದಕ್ಷವಾದ ಆಫೀಸ್‌ರ್‌ಅನ್ನು SITಗೆ ಹಾಕಿದ್ದೇವೆ. ಯಾವುದೇ ಚರ್ಚೆ ಮಾಡಿದರೂ ಸಮೇತ ಈ ಬಗ್ಗೆ ತನಿಖೆಯಾಗಿ ಆ ಬಗ್ಗೆ ಸಾಕ್ಷ್ಯಾಧಾರ ಬಂದ ಮೇಲೆ ತಪ್ಪು ಯಾರು ಮಾಡಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುವಂತಹ ವ್ಯವಸ್ಥೆ ನಮ್ಮಲ್ಲಿ ಇದೆ. ಅದರ ಪ್ರಕಾರ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಸ್ವಲ್ಪ ನಮ್ಮ Police officer ಮೇಲೆಯೂ ಕೂಡ ಸ್ವಲ್ಪ ನಂಬಿಕೆ ಇಡಿ. ಅವರು ಇಂತಹ ಆಫೀಸರ್ ಅನ್ನು investingation ಮಾಡಿ ಎಂದು ಹೇಳಿರುವುದಿಲ್ಲ. ನಾವು ಸರ್ಕಾರದ ಪರವಾಗಿ ಒಳ್ಳೆಯ ದಕ್ಷ ಆಫೀಸರ್ ಅನ್ನು ಹಾಕಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್: ನಾನು ಮೊದಲು complete ಮಾಡುತ್ತೇನೆ, ಆಮೇಲೆ ತಾವು ಮಾತನಾಡಿ.

ಶ್ರೀ ಅಶೋಕ ಖೇಣಿ: ಮಾನ್ಯ ಉಪಾಧ್ಯಕರೆ, ಮಾನ್ಯ ಜಗದೀಶ್ ಶೆಟ್ಟರ್‌ರವರೆ, one minute. I will finish the same subject. ಇಲ್ಲಿ ಏನಾಗಿದೆ ಎಂದರೆ having one Lokayuktha is too much power for one person. So there will be no check for the imbalances. ಅದಕ್ಕೋಸ್ಕರ ಹೇಗೆ Election Commissionನಲ್ಲಿ 3 Commissioners ನ್ನು ಮಾಡಿದ್ದಾರೆ. ಇಬ್ಬರು ಉಪಲೋಕಾಯುಕ್ತ ಇದ್ದಾರೆ, ಅವರನ್ನು We should raise them to be Lokayuktha and that could be done immediately by this House and passed and signed by the Governor. So that will be a countercheck for the imbalances and this unilateral power could be taken away from the person.

ಶ್ರೀ ಜಗದೀಶ ಶೆಟ್ಟರ್: ನಾನು refer ಮಾಡಿ ಹೇಳುತ್ತಿದ್ದೆ. ಮಾನ್ಯ ರಮೇಶ್ ಕುಮಾರ್‌ರವರು ಆ ವ್ಯಕ್ತಿ ಯಾರಿದ್ದಾರೆ, ಆ centre stage ವೈಭವೀಕರಣ ಮಾಡುವುದು ಬೇಡ ಎನ್ನುವಂತಹ ಮಾತನ್ನು ಹೇಳಿದರು ಆ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಆ ವ್ಯಕ್ತಿ ಲೋಕಾಯುಕ್ತರವರ ಮಗನಾಗಿದ್ದಾನೆ. ಯಾರೊಬ್ಬ ಅಥವಾ ಕೃಷ್ಣಮೂರ್ತಿ ಮತ್ತೊಬ್ಬ ಯಾರೋ third party ಲೋಕಾಯುಕ್ತ ಸಂಸ್ಥೆಗೆ ಸಂಬಂಧವಿಲ್ಲದ ವ್ಯಕ್ತಿ ಆಗಿದ್ದರೆ ಅದು ಪ್ರಶ್ನೆಯೇ ಬೇರೆಯಾಗಿತ್ತು. ಇವತ್ತು ಲೋಕಾಯುಕ್ತದ ಹೆಸರನ್ನು ಉಪಯೋಗ ಮಾಡಿಕೊಂಡು ಆ ಅಶ್ವಿನ್‌ರಾವ್ ತನ್ನ ತಂದೆಯೇ ಇದನ್ನೆಲ್ಲಾ ಮಾಡಿಸುತ್ತಿದ್ದಾನೆ ಎನ್ನುವಂತಹ ರೀತಿಯಲ್ಲಿ ಇವತ್ತು conduct ಮಾಡಿ ಅಧಿಕಾರಿಗಳನ್ನು ಅಂದರೆ IAS/IPS ಅಧಿಕಾರಿಗಳನ್ನು ಲೋಕಾಯುಕ್ತ ಕಛೇರಿಗೆ ಕರೆಸುವಂತಹದ್ದು ಎಲ್ಲಿಯವರೆಗೆ ಅಂದರೆ Crescent ರಸ್ತೆಯಲ್ಲಿರುವಂತಹ ಮನೆಗೆ ಕರೆಸುವಂತಹದ್ದು ಕೆಲವರು ಈ ಬಗ್ಗೆ ಹೇಳಿದರು. ಅಶ್ವಿನಿರಾವ್ IAS/IPS ಅಧಿಕಾರಿಗಳನ್ನು ಕರೆಸುವಂತಹದ್ದು ಲೋಕಾಯುಕ್ತರು ಸಾಯಂಕಾಲ ಆಫೀಸ್ ಮುಗಿಸಿಕೊಂಡು ಮನೆಗೆ ಬಂದಿರಬೇಕು, ಅಲ್ಲಿ

ಅವರು ನೋಡುವುದಕ್ಕೆ ಒಂದು ರೂಮಿನಲ್ಲಿ ಕುಳಿತಿರಬೇಕು. ಅವರು ಅಲ್ಲಿ ಕುಳಿತಿರುವಂತಹ ಸಂದರ್ಭದಲ್ಲಿ ಲೋಕಾಯುಕ್ತರು ಹೀಗೆ ನೋಡಿ ಆಯಿತು ಎಂದು ಹೇಳಿ ಹೋಗುವಂತಹದ್ದು ಇದು signal ಏನು ಹೋಗುತ್ತದೆ, ಹೀಗಾಗಿ ಅಶ್ವಿನ್‌ರಾವ್ ಇವತ್ತು ಲೋಕಾಯುಕ್ತರ ಮಗನಲ್ಲದೆ ಇದ್ದರೆ ಯಾರಾದರೂ IAS/IPS ಅಧಿಕಾರಿಗಳು ಅವರ ಮನೆಗೆ ಹೋಗುತ್ತಿದ್ರಾ? ಯಾರಾದರೂ ಭ್ರಷ್ಟ ಅಧಿಕಾರಿಗಳು ಕೆಲವೊಂದು complaint file ಆಗಿದೆ, ಅವರು ಯಾರಾದರೂ ಅಶ್ವಿನ್‌ರಾವ್‌ರವರನ್ನು ನೋಡುವುದಕ್ಕೆ ಹೋಗುತ್ತಿದ್ದರಾ? ಇಲ್ಲಿ ಏನು ನಾನು ಕೃಷ್ಣಮೂರ್ತಿ ಎಂದು ಹೇಳಿ ಇವತ್ತು ಏನು refer ಮಾಡುತ್ತಿದ್ದೆ, ಮೊನ್ನೆ complaint ಕೊಟ್ಟಿದ್ದಾನೆ. ಅದರಲ್ಲಿ ಅವನು ಹೇಳುತ್ತಾನೆ, 5 ಲಕ್ಷ ಹಣ ಒಂದು ಸಲ ಕೊಟ್ಟಿದ್ದೇನೆ, ಇನ್ನೊಂದು ಸಲ 50,000 ರೂಪಾಯಿಗಳು, 10 ಲಕ್ಷ ರೂಪಾಯಿಗಳು ಒಂದು ಸಲ ನಾನು ನೇರವಾಗಿ ಹಣವನ್ನು ಕೊಟ್ಟಿದ್ದೇನೆಂದು ಹೇಳುವಂತಹದ್ದು ಲಿಖಿತವಾಗಿ complaint ಕೊಟ್ಟಿದ್ದಾನೆ. ಏತಕ್ಕಾಗಿ ಕೊಟ್ಟರು, ನಿಮಗೆ help ಮಾಡುತ್ತೇನೆ, ನಿನ್ನ problem solve ಮಾಡುತ್ತೇನೆ, ಲೋಕಾಯುಕ್ತದಲ್ಲಿರುವ ಕೇಸ್ ಅನ್ನು solve ಮಾಡುತ್ತೇನೆ, ಇದನ್ನು ಆ ದೃಷ್ಟಿಕೋನದಿಂದ ಇವತ್ತು ಲೋಕಾಯುಕ್ತರ ಮಗ ಎನ್ನುವಂತಹ ದೃಷ್ಟಿಯಿಂದ ಇವತ್ತು ಹಣ ಕೊಡುವಂತಹ ಕೆಲಸ ನಡೆಯಿತು. ಇದು ಬಹಳ ಮುಖ್ಯವಾಗಿರುವುದು. ಇಲ್ಲಿ ಪತ್ರಿಕೆಯಲ್ಲಿ ಬಂದಿರುವುದನ್ನು ನೋಡಿ, "Ashwin made several calls to Shyam Bhat," ಶ್ಯಾಮಭಟ್ BDA Commissionerಗೆ ನೂರಾರು ಕಾಲ್‌ಗಳನ್ನು ಅದು ನವೆಂಬರ್–ಡಿಸೆಂಬರ್ ತಿಂಗಳಿನಲ್ಲಿ ನೂರಾರು ಕಾಲ್‌ಗಳನ್ನು ಮಾಡುತ್ತಾರೆ. ಶಂಕರ್, ಡಿ.ಸಿ. ಅವರಿಗೂ ಸಹ ಒತ್ತಡ ಬರುತ್ತದೆ. ಅವರಿಗೂ ಒತ್ತುವರಿಯನ್ನು ತೆರವುಗೊಳಿಸುವ ವಿಚಾರವಾಗಿ ಒತ್ತಡ ಬರುತ್ತದೆ. ಇದೇ ಅಶ್ವಿನಿ open ಆಗಿ phone ಮಾಡುತ್ತಾನೆ. ಹೀಗಾಗಿ ಈ ಎಲ್ಲಾ phone calls ಗಳನ್ನು ಬಹುಶಃ ಸೋನಿಯಾ ನಾರಂಗ್‌ರವರು ಒಂದು interim....SIT ಗೆ ಎಲ್ಲಾ ಪ್ರಕರಣಗಳನ್ನು handover ಮಾಡುವಂತಹ ಸಂದರ್ಭದಲ್ಲಿ ಅವರು ಏನು ಒಂದಿಷ್ಟು investigation ಮಾಡಿದ್ದಾರೆ, ಏನು phone calls ಬಂದಿವೆ, ಆ

ವ್ಯಕ್ತಿಗಳಿಂದ ಲೋಕಾಯುಕ್ತ ಮನೆಯಿಂದ, ಕಛೇರಿಯಿಂದ ಇರಬಹುದು, ಅಥವಾ ಎಲ್ಲಾ ಮೊಬೈಲ್ ನಂಬರ್ಸ್ ಇದರಲ್ಲಿ ಇದೆ. ಆ ಮೊಬೈಲ್ ನಂಬರ್ಸ್‌ಗಳ ಮುಖಾಂತರ ಏನೊಂದು ಕಾಲ್‌ಗಳು ಹೋಗಿವೆ, ಅವೆಲ್ಲದರ ಬಗ್ಗೆ record ತೆಗೆದು ನೋಡಿದರೆ ಯಾರ್‍ಯಾರ ಜೊತೆಯಲ್ಲಿ ಮಾತನಾಡಿದ್ದಾರೆ, ಇದರಲ್ಲಿ ಯಾರ್‍ಯಾರಿಗೆ ಸಂಬಂಧ ಇತ್ತು, ಏನೊಂದು collection ಮಾಡಿದ್ದಾರೆ, ಇವೆಲ್ಲವೂ ಹೊರಗೆ ಬರುವುದಕ್ಕೆ ಸಾಧ್ಯತೆ ಇದೆ.

ಶ್ರೀ ಕೆ.ಜೆ. ಜಾರ್ಜ್: ಸನ್ಮಾನ್ಯ ಸಭಾಧ್ಯಕ್ಷರೆ, ಸದನದಲ್ಲಿ ತನಿಖೆ ಮಾಡಲಿಕ್ಕಾಗುತ್ತದೆಯೇ? ಅವರು ಯಾರ್‍ಯಾರ ಮೇಲೆ complaints ಹೇಳಿದ್ದಾರೆ, ಅವೆಲ್ಲಾ ಸಹಿತ SIT ಗೆ ಹೋಗಲಿ. Complaints ಯಾರ್‍ಯಾರದ್ದು ಇದೆ, ಯಾರು ಮಾಡಿದ್ದಾರೆ, ಅವರ ವಿಚಾರ ಬರಲಿ.

ಶ್ರೀ ಜಗದೀಶ ಶೆಟ್ಟರ್: ನಾನು complete ಮಾಡುತ್ತೇನೆ, ಆಮೇಲೆ ಇವರು ಹೇಳಲಿ. ಉತ್ತರ ಹೇಳುವಾಗ ಹೇಳಲಿ.

ಶ್ರೀ ಕೆ.ಜೆ. ಜಾರ್ಜ್: ಇವತ್ತೊಂದು investigation ನಡೆಯುತ್ತಿದೆ. ನಾವು ಇದನ್ನು ಇಲ್ಲಿ ಚರ್ಚೆ ಮಾಡುವುದರ ಮೂಲಕ ಆ investigation ಮೇಲೆ ಯಾವುದೇ ಪ್ರಭಾವ ಬೀರಬಾರದು.

ಶ್ರೀ ಜಗದೀಶ್ ಶೆಟ್ಟರ್: ನಾವು ಯಾವುದೇ ಪ್ರಭಾವ ಬೀರುವುದಿಲ್ಲ. ಬೀರುವಂಥ ಪ್ರಶ್ನೆಯೂ ಇಲ್ಲ.

ಶ್ರೀ ಕೆ.ಜೆ. ಜಾರ್ಜ್: ಆದ್ದರಿಂದ ಮಾನ್ಯ ಉಪಾಧ್ಯಕ್ಷರೆ, ನಾನು ತಮ್ಮ ಮೂಲಕ ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಕೇಳುತ್ತಿರುವುದು, ಹೌದು, ನಾವು ಯಾವುದನ್ನು deny ಮಾಡುತ್ತಿಲ್ಲ. ಆಗಿರಬಹುದು. ಪ್ರತಿಯೊಂದು ಸಹಿತ SIT ಮುಂದೆ ಹೋಗಲಿ. ಯಾರ ಮೇಲೆ complaint ಆಗಲಿ, ಯಾರೇ ಪ್ರಬಲ ವ್ಯಕ್ತಿ ಇದ್ದರೂ ಸಹಿತ ಅವರು ತಪ್ಪು ಮಾಡಿದರೆ ಅವರ ಮೇಲೆ ಈ ಸರ್ಕಾರ ಕ್ರಮ ಕೈಗೊಳ್ಳುತ್ತದೆ. ದಯವಿಟ್ಟು ಯಾರೊ ಒಬ್ಬರ officer ಹೆಸರು ಹೇಳುವ ಬದಲು ದೂರಿಗೆ ಸಂಬಂಧಪಟ್ಟವರು ನೇರವಾಗಿ SIT ಗೆ ದೂರು ಕೊಡಲಿ. ಆದಷ್ಟು ಬೇಗನೆ SIT ಯವರು ತನಿಖೆ ಮಾಡಿ ತೀರ್ಮಾನಕ್ಕೆ ಬರುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ, ಇಷ್ಟೆಲ್ಲಾ ದೂರುಗಳು FIR ಎಲ್ಲ file ಆದಮೇಲೆ ಇವತ್ತಿಗೂ ಆತನನ್ನು arrest ಮಾಡಲಿಕ್ಕೆ ಆಗಿಲ್ಲ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಈ ಅಧಿಕಾರ ದುರುಪಯೋಗ ಯಾವ ರೀತಿ ಲೋಕಾಯುಕ್ತದಲ್ಲಿ ಆಗುತ್ತಿದೆ ಎನ್ನುವುದಕ್ಕೆ ನಾನು ಒಂದೆರಡು ಮೂರು ಉದಾಹರಣೆಗಳನ್ನು ಕೊಡುತ್ತಿದ್ದೇನೆ. ಯಾವ ರೀತಿ ಇವತ್ತು ದುರುಪಯೋಗವಾಗುತ್ತದೆ, ಯಾವ ರೀತಿ ಇವತ್ತು ಕೆಲವೊಂದು ವ್ಯಕ್ತಿಗಳ ಮೇಲೆ pressure build up ಮಾಡುವಂಥದ್ದು. ಈಗ ಒಂದು ಉದಾಹರಣೆಗೆ ಹೇಳುವುದಾದರೆ ಈಗ ಸುರೇಶ್‌ಕುಮಾರ್‌ರವರು ಒಂದೆರಡು points refer ಮಾಡಿದರು. ಇವತ್ತೇನು Public Accounts Committee report ಕೊಡುತ್ತದೆ. ಯಾವುದೋ ಒಂದು ವಿಚಾರದ ಬಗ್ಗೆ, ಯಾವುದೋ ಒಂದು ವ್ಯವಹಾರದ ಬಗ್ಗೆ report ಕೊಡುತ್ತದೆ. ಆ report ಕೊಟ್ಟ ಮೇಲೆ ಆ ಒಂದು CAG report ಅನ್ನು ನಾವು ಸದನದಲ್ಲಿ ಮಂಡನೆ ಮಾಡುತ್ತೇವೆ. ಮಂಡನೆ ಮಾಡಿದ ಮೇಲೆ ಇದೊಂದು Public Accounts Committee ಇದೆ. Public Accounts Committee ಯಲ್ಲಿ ಅದು scrutiny ಆಗುತ್ತದೆ. Scrutiny ಆಗಿ ಇವತ್ತು CAG ಯಲ್ಲಿರುವಂಥ ವಿಚಾರಗಳು ಸರಿಯಿವೆ ಎನ್ನುವುದಾದರೆ Public Accounts Committee ಯವರು ಸರ್ಕಾರಕ್ಕೆ refer ಮಾಡುತ್ತಾರೆ. ಇವರ ಮೇಲೆ action ತೆಗೆದುಕೊಳ್ಳಿ. CAG ಯವರು observation ಮಾಡಿದ್ದಾರೆ. ಇಂಥ ತಪ್ಪಾಗಿದೆ, ಇದು ಕಾನೂನು ಬಾಹಿರವಾಗಿದೆ. ಇದರ ಪ್ರಕಾರ action ತೆಗೆದುಕೊಳ್ಳಬೇಕು. Further action ತೆಗೆದುಕೊಳ್ಳಿ ಎಂದು ಹೇಳಿ ಸರ್ಕಾರಕ್ಕೆ refer ಮಾಡುತ್ತಾರೆ. ಆಮೇಲೆ ಸರ್ಕಾರ ಅದರ ಬಗ್ಗೆ action ತೆಗೆದುಕೊಳ್ಳುವುದು, ಬಿಡುವುದು, ಯಾರಾದರೂ officerಗೆ refer ಮಾಡುವುದು ಇದು ಸರ್ಕಾರಕ್ಕೆ ಬಿಟ್ಟಂಥ ವಿಚಾರ. This is procedural aspect. ಅದರ ಬಗ್ಗೆ Supreme Court ನಲ್ಲಿ ಒಂದೆರಡು rulings ಆಗಿವೆ. ಅದರಲ್ಲಿ observation ಮಾಡಿದ್ದಾರೆ. ಅದರಲ್ಲಿ ಈ ರೀತಿ parliament ನಲ್ಲಿ ಸಹಿತ ಈ ರೀತಿ CAG report ಆಧಾರದ ಮೇಲೆ ಇವತ್ತು ಕೆಲವರು complaint ಕೊಟ್ಟಂಥ ಸಂದರ್ಭದಲ್ಲಿ Supreme Court ಗೆ ಹೋದಂಥ

ಸಂದರ್ಭದಲ್ಲಿ ಒಂದೆರಡು ಕಡೆ Rulings ನಲ್ಲಿ observations ಮಾಡಿದ್ದಾರೆ. ಆ ಒಂದೆರಡು observations ಬಗ್ಗೆ ನಾನು ಹೇಳುತ್ತಿದ್ದೇನೆ ಮಾನ್ಯ ಉಪಾಧ್ಯಕ್ಷರೆ,

ಶ್ರೀ ಕೆ.ಜೆ. ಜಾರ್ಜ್: ಜಗದೀಶ್ ಶೆಟ್ಟರ್‌ರವರೆ ಒಂದು ನಿಮಿಷ, ಈಗಾಗಲೇ ನಾನು ಸದನದಲ್ಲಿ ಹೇಳಿದ್ದೇನೆ. 2012 ರ CAG report ...

ಶ್ರೀ ಜಗದೀಶ್ ಶೆಟ್ಟರ್: ನೋಡಿ ನಾನು ಹೇಳುತ್ತೇನೆ, ನನಗೆ complete ಮಾಡುವುದಕ್ಕೆ ಬಿಡಿ. ನನಗೆ ಮಾತನಾಡಲಿಕ್ಕೆ ಬಿಡಿ. ಯಾವ ರೀತಿ ಲೋಕಾಯುಕ್ತದಲ್ಲಿ ದುರುಪಯೋಗವಾಗಿದೆ ಎಂದು ನಾನು ಹೇಳುತ್ತೇನೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ: ಅವರಿಗೆ ಮೊದಲು ಮಾತನಾಡಲಿಕ್ಕೆ ಬಿಡಿ.

ಶ್ರೀ ಕೆ.ಜೆ. ಜಾರ್ಜ್: ನೋಡಿ ಸುರೇಶ್‌ಕುಮಾರ್‌ರವರು ಆಗಲೇ ಹೇಳಿದರು. ಅದಕ್ಕೆ ನಾನು clarification ಕೊಟ್ಟ ಮೇಲೆ ನೀವು ಮಾತನಾಡಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ: ಮೊದಲು ಅವರಿಗೆ ಮಾತನಾಡಲಿಕ್ಕೆ ಬಿಡಿ. ಮಧ್ಯದಲ್ಲಿ ನೀವು ಹೇಗೆ ಕೇಳುತ್ತೀರಿ? ಅವರು ಮಾತನಾಡುವುದನ್ನು ಪೂರ್ತಿ ಕೇಳಿ. ಇನ್ನು ಅವರು ಪೂರ್ತಿ ಮಾಡಲಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ನನಗೆ ಮೊದಲು complete ಮಾಡಲಿಕ್ಕೆ ಬಿಡಿ. Home Minister ರವರೆ, ಅದೇನಾದರೂ unparliamentary ಇದ್ದರೆ, procedure ಗೆ ವಿರುದ್ಧವಿದ್ದರೆ ನೀವು ಹೇಳಿ.

ಶ್ರೀ ಕೆ.ಜೆ. ಜಾರ್ಜ್: ಜಗದೀಶ್ ಶೆಟ್ಟರ್‌ರವರೆ ಒಂದು ನಿಮಿಷ ನಾನು ಹೇಳಿಬಿಡುತ್ತೇನೆ ಕೇಳಿ. ನೀವು ಒಂದು ನಿಮಿಷ yield ಆಗಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ: ನೀವು ಏಕೆ ಪದೇ ಪದೇ ಮಧ್ಯದಲ್ಲಿ ಮಾತನಾಡುತ್ತಿದ್ದೀರಿ, ಅವರಿಗೆ ಪೂರ್ತಿ ಮಾತನಾಡುವುದಕ್ಕೆ ಬಿಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನಾನು ಏನು ಹೇಳುತ್ತಿದ್ದೇನೆ ಎಂದು ನಿಮಗೆ ಇನ್ನು ಗೊತ್ತಾಗಿಲ್ಲ. ನಾನು ಇನ್ನು ಹೇಳುವುದಿದೆ. ನನಗೆ ಪೂರ್ತಿ ಮಾಡಲಿಕ್ಕೆ ಬಿಡಿ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ನೀವು ಹೇಳುವುದಕ್ಕೆ ಮೊದಲು ನಮ್ಮ stand ಏನಿದೆ, ಅದನ್ನು clear ಮಾಡಿಬಿಡುತ್ತೇನೆ. ನಂತರ ನೀವು ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್: ನಿಮ್ಮ stand ಆಮೇಲೆ ಹೇಳಿ ಯಾರು ಬೇಡವೆನ್ನುತ್ತಾರೆ? ಸನ್ಮಾನ್ಯ ಉಪಾಧ್ಯಕ್ಷರೆ, ನನ್ನ ಮಾತನ್ನು Complete ಮಾಡಿಬಿಡುತ್ತೇನೆ.

ಉಪಾಧ್ಯಕ್ಷರು: ಆಯಿತು, ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಉಪಾಧ್ಯಕ್ಷರೆ, ಒಂದು Supreme Court Ruling ನಲ್ಲಿ observe ಮಾಡುತ್ತಾರೆ. "We have referred to the report of the C.A.G. The role of the P.A.C. and the procedure followed in the House only to indicate that the C.A.G. report is always subject to scrutiny by the Parliament and the Government can always offer its views on the report of the C.A.G. The question that is raised for consideration in this case is whether this court can grant reliefs merely placing reliance on the C.A.G. report. The C.A.G. report is always subject to be Parliamentary debates and it is possible that P.A.C. can action the Ministries objection to the C.A.G. report or reject the report of the C.A.G. The C.A.G. indisputedly is an

independent constitutional functionary. However, it is for the Parliament to decide whether after receiving the report that is P.A.C., to make its comments on the C.A.G. report" ಇಷ್ಟು clear ಇದೆ. Supreme Court observation and ruling. ಇನ್ನೊಂದು Centre for Public Interest and others –vs- Union of India. ಅದರಲ್ಲಿ ಒಂದು observation ಇದೆ. Before dealing with the arguments of the learned counsel for the parties and adverting to some of the precedents, we consider it necessary to mention that during the course of hearing Sri Prashanth Bhusan and Dr. Subramanya Swamy heavily relied upon the C.A.G. report has also been one man committee report. The learned Authority General and learned Senior counsel appearing for some of the private respondents also referred to the one man committee report. However, as the C.A.G., report is being examined by the Public Accounts Committee and joint Parliamentary committee or Parliament, we do not consider it proper to refer to the findings and conclusion contents". ಇಷ್ಟು clear cut ಆಗಿ ಅವರು ವರದಿಯನ್ನು ಕೊಟ್ಟಿದ್ದಾರೆ. ಈ ವರದಿಯನ್ನು ಏಕೆ refer ಮಾಡುತ್ತಿದ್ದಾರೆಂದರೆ ಲೋಕಾಯುಕ್ತದಲ್ಲಿ ಇವತ್ತು ಯಾವ ರೀತಿ ನಡೆಯುತ್ತಿದೆ. ಇಷ್ಟೊಂದು Supreme Court ನಿಂದ ruling ಇದೆ, observations ಇದೆ. ಆ ಸಂದರ್ಭದಲ್ಲಿ ಒಬ್ಬ ವ್ಯಕ್ತಿ complaint ಕೊಡುತ್ತಾನೆ. ಆ CAG report ಅನ್ನು ಆಧಾರವಾಗಿಟ್ಟುಕೊಂಡು ಮೊದಲು ಅವರು ಹೈಕೋರ್ಟ್‌ಗೆ ಹೋಗಿದ್ದರು, ಹೈಕೋರ್ಟ್‌ನಿಂದ observations ಆಗಿದೆ ಎಂದು ಮೊನ್ನೆ ಗೃಹ ಸಚಿವರು ಹೇಳಿದರು. ಹೈಕೋರ್ಟ್‌ನಲ್ಲೇನಾಗಿದೆ ಎಂಬುದನ್ನು ನಾನು ಹೇಳುತ್ತೇನೆ. ಹೈಕೋರ್ಟ್‌ನಲ್ಲಿ ಒಬ್ಬರು complaint ತೆಗೆದುಕೊಂಡು ಈ ಒಂದು ವಿಚಾರವನ್ನು CBI ಗೆ ಕೊಡಬೇಕೆಂದು ಹೇಳಿ ಹೈಕೋರ್ಟ್‌ಗೆ ಹೋಗುತ್ತಾರೆ. ಹೈಕೋರ್ಟ್‌ನಲ್ಲಿ ಆ ಕೇಸ್ ಅನ್ನು dismiss ಮಾಡಿ ಒಂದು observation ಮಾಡುತ್ತಾರೆ. ಒಂದು observation ನಲ್ಲಿ ನೀವು

ಲೋಕಾಯುಕ್ತಕ್ಕೆ ಹೋಗಿ ಎಂದು ಹೇಳುತ್ತಾರೆ. ಲೋಕಾಯುಕ್ತಕ್ಕೆ ಹೋಗಿ ನೀವು ಅಲ್ಲಿ case file ಮಾಡಿ. ಇಲ್ಲಿ ಅದು ಬರುವುದಿಲ್ಲ, ಇಲ್ಲಿ discuss ಮಾಡಲಿಕ್ಕೆ ಬರುವುದಿಲ್ಲ ಮತ್ತು ಈ CAG report ಪ್ರಕಾರ ಮೊದಲು ಅಲ್ಲಿ ಪಾರ್ಲಿಮೆಂಟ್‌ನಲ್ಲಿ Public Accounts Committee ಯಲ್ಲಿ discussion ಆಗಬೇಕೆಂದು observation ಮಾಡುತ್ತಾರೆ. ಇಲ್ಲಿ clear cut direction ಕೊಟ್ಟಿದ್ದಾರೆ.

ಶ್ರೀ ಕೆ.ಜೆ. ಜಾರ್ಜ್: ಮಾನ್ಯ ಉಪಾಧ್ಯಕ್ಷರೆ, ಜಗದೀಶ್ ಶೆಟ್ಟರ್‌ರವರು ಒಂದು ವಿಚಾರವನ್ನು ಸೂಕ್ಷ್ಮವಾಗಿ ಹೇಳಿದ್ದಾರೆ. ಇದು ಒಬ್ಬ ವ್ಯಕ್ತಿಯ 2012 ರ CAG report ಈ ಬಗ್ಗೆ ಸರ್ಕಾರ discuss ಮಾಡಿಲ್ಲ, Action ತೆಗೆದುಕೊಂಡಿಲ್ಲ ಎಂದು Chief Justice Division Benchಗೆ ಹೋಗುತ್ತಾರೆ. ಆಗ ಆ Division Bench ಏನು ಹೇಳುತ್ತಾರೆಂದರೆ ಇದು Prevention of Corruption Act ಅಡಿಗೆ ಬರುತ್ತದೆ. ಇದನ್ನು CBI ಗೆ ನಾವು ಕೊಡಲಿಕ್ಕೆ ಬರುವುದಿಲ್ಲ. ನೀವು ಲೋಕಾಯುಕ್ತರನ್ನು approach ಮಾಡಿ ಎಂದು ಹೇಳುತ್ತಾರೆ. ಕೇಳಿ, ಇದನ್ನು ತಪ್ಪು ಎಂದು ಹೇಗೆ ಹೇಳುವುದಕ್ಕಾಗುತ್ತದೆ?

ಶ್ರೀ ಜಗದೀಶ್ ಶೆಟ್ಟರ್: ಅವರು ಆ ರೀತಿ ಹೇಳಿದ್ದಾರೆ. ಅಲ್ಲ,

ಶ್ರೀ ಕೆ.ಜೆ. ಜಾರ್ಜ್: ಇವರು ಲೋಕಾಯುಕ್ತರನ್ನು approach ಮಾಡಿ ಎಂದು ಹೇಳಿದ್ದಾರೆ. ಅವರು ಅದನ್ನು ಹೇಳಿದ್ದಾರೆ. ನಾನು ಮಾತನಾಡಿ ಮುಗಿಸಿಬಿಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ನಾನು complete ಮಾಡುತ್ತೇನೆ. ಗೃಹಸಚಿವರೆ ಹರಿಬರಿ ಏನಿಲ್ಲ? ನೀವು ಆಮೇಲೆ answer ಕೊಡಿ. ನಾನು ಈ subject complete ಮಾಡಿದ ಮೇಲೆ ನೀವು ಮಾತನಾಡಿ. ಏನಾಗಿದೆ ಉಪಾಧ್ಯಕ್ಷರೆ, ಆ ಕೋರ್ಟ್‌ನಲ್ಲಿ ನೀವು ಲೋಕಾಯುಕ್ತಕ್ಕೆ ಹೋಗಿ ಎಂದು ಹೈಕೋರ್ಟ್ Judge ಹೇಳುತ್ತಾರೆ. ಇವತ್ತು ಮಾಜಿ ಮುಖ್ಯಮಂತ್ರಿಗಳ ಬಗ್ಗೆ ಇರುವಂಥ ಕೇಸ್, ಅದು ಕುಮಾರಸ್ವಾಮಿಯವರ ಮೇಲೆಯೂ ಇದೆ, ಯಡಿಯೂರಪ್ಪನವರ ಮೇಲೆಯೂ ಇದೆ. ಇವತ್ತು ಅವರ ಮೇಲೆ ಹೈಕೋರ್ಟ್‌ಗೆ ಹೋದಾಗ,

ಅವರು ಇಲ್ಲೇಕೆ ಬಂದಿರಿ, ನೀವು ಲೋಕಾಯುಕ್ತಕ್ಕೆ ಹೋಗಿ ಎನ್ನುವ ಮಾತನ್ನು ಹೇಳುತ್ತಾರೆ. ನಾವು Minute ಬಗ್ಗೆ ಏನೂ discussion ಮಾಡುವುದಿಲ್ಲವೆಂದು ಹೇಳುತ್ತಾರೆ. ಅದರ ಬಗ್ಗೆ ಏನೂ discussion ಮಾಡಿಲ್ಲ, ನೀವು ಲೋಕಾಯುಕ್ತಕ್ಕೆ ಹೋಗಿ ಎಂದು ಹೇಳುತ್ತಾರೆ. ಆಗ ಲೋಕಾಯುಕ್ತದಲ್ಲಿ ಅದರ ಬಗ್ಗೆ complaint file ಮಾಡುತ್ತಾರೆ. ಅಲ್ಲಿ complaint file ಮಾಡಿದ ಮೇಲೆ ಏನಾಗುತ್ತದೆ ಎಂದರೆ, ಲೋಕಾಯುಕ್ತದ proceedings ನಲ್ಲಿ ಒಂದೆರಡು ಮೂರು observations ಇದೆ. "Director General of Police, Bangalore submitted a letter dated: 17.01.2015 requesting time for four months to complete the investigation". ಲೋಕಾಯುಕ್ತದವರು CID ಗೆ refer ಮಾಡುತ್ತಾರೆ. ನೋಡಿ ಅವರು refer ಮಾಡುತ್ತಾರೆ. ಯಾವುದೇ ಇರಲಿ. ಈ ಒಂದು, ಎರಡು ತಿಂಗಳುಗಳಲ್ಲಿ ಏನು ಹರಿಬರಿ ತೋರಿಸುತ್ತಾರಲ್ಲಾ? ಇದು ಬಹಳ important. ನಾನು ಓದುತ್ತೇನೆ. ಕೇಳಿ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಇದರಲ್ಲಿ ಹರಿಬರಿ ವಿಚಾರವೇ ಬರುವುದಿಲ್ಲ. ಅದು ಸುಮಾರು ಎರಡು ವರ್ಷಗಳ ಹಿಂದಿನದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಆ proceedings ನಲ್ಲಿದೆ. ನೀವೇಕೆ ಹರಿಬರಿ ಮಾಡುತ್ತಿದ್ದೀರಿ? ನೀವು ಆಮೇಲೆ ಉತ್ತರ ಕೊಡಿ. ನಾನು ಮಾತನಾಡಿದ ಮೇಲೆ ನೀವು ಉತ್ತರ ಕೊಡಿ, ಯಾರು ಬೇಡವೆನ್ನುತ್ತಾರೆ. ನಾನೇನಾದರೂ ತಪ್ಪು ಮಾತನಾಡಿದ್ದರೆ... ನಂತರ ನೀವು ಅದನ್ನೇ ಹೇಳಿ. ಆಯಿತು. ನೋಡಿ ಈಗೇನು ಘಟನೆಗಳಾಯಿತು ಅದರ ಬಗ್ಗೆ ನಾನು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ: ವಿರೋಧ ಪಕ್ಷದ ನಾಯಕರಿಗೆ ನೀವು ಮಾತನಾಡಲಿಕ್ಕೆ ಕೊಡುವುದಿಲ್ಲವೆಂದರೆ ಹೇಗೆ? ನೀವು ಉತ್ತರ ಹೇಳುವಾಗ ಹೇಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನೀವು ಉತ್ತರ ಹೇಳುವಾಗ ಹೇಳಿ, explain ಮಾಡಿ, ನಿಮಗೆ ಹಕ್ಕಿದೆ, ಯಾರು ಬೇಡವೆನ್ನುತ್ತಾರೆ? ನೀವು ಉತ್ತರ ಕೊಡುವಾಗ ಹೇಳಿ.

ಶ್ರೀ ಬಸವರಾಜ ಬೊಮ್ಮಾಯಿ: ಜಾರ್ಜ್‌ರವರೆ, Private complaint ಲೋಕಾಯುಕ್ತದ ಮುಂದೆ ಇದೆ, ನೀವೇಕೆ defend ಮಾಡಿಕೊಳ್ಳುತ್ತೀರಿ? Why you want to defend Lokayukta?

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ನಾನೂ ಹೇಳಿದ್ದೂ ನೋಡಿ ಸರ್ಕಾರಕ್ಕೂ ಅದಕ್ಕೂ ಯಾವುದೇ ಸಂಬಂಧ ಇಲ್ಲ. ನಾನು ಹೇಳುತ್ತಿರುವುದು, ಜಗದೀಶ್ ಶೆಟ್ಟರ್‌ರವರೇ ಏನು ಹೇಳುತ್ತಿದ್ದಾರೆ ಅದು ಸರಿಯಿಲ್ಲ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ: ಲೋಕಾಯುಕ್ತ ಸಂಸ್ಥೆ ಬಗ್ಗೆ ಚರ್ಚೆ ನಡೆಯುತ್ತಿದೆ. ಸರ್ಕಾರದ ಬಗ್ಗೆ ನಾವು ಮಾತನಾಡುತ್ತಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಹಾಗೇನಾದರೂ ಇದ್ದರೆ ನೀವು ಉತ್ತರದಲ್ಲಿ ಹೇಳಿ. ನಿಮಗೆ ಉತ್ತರ ಹೇಳುವುದಕ್ಕೆ ನಿಮಗೆ ಹಕ್ಕಿದೆ. ನಾವು ಯಾವುದಾದರೂ ಮಾಹಿತಿ ಬಗ್ಗೆ ಹೇಳಲಿಲ್ಲವೆಂದರೆ ನೀವು ಹೇಳಿ.

ಶ್ರೀ ಬಸವರಾಜ ಬೊಮ್ಮಾಯಿ: ಜಾರ್ಜ್‌ರವರೆ, ನಿಮ್ಮ ambitಗೆ ಬರುವುದಿಲ್ಲ. ನಾವು ಸರ್ಕಾರದ ಬಗ್ಗೆ ಮಾತನಾಡುತ್ತಿಲ್ಲ. ಲೋಕಾಯುಕ್ತ ಯಾವ ರೀತಿ conduct ಮಾಡುತ್ತಿದೆ, ಅದರ ಬಗ್ಗೆ ಹೇಳುತ್ತಿದ್ದಾರೆ. ನಿಮ್ಮ ಬಗ್ಗೆ ಹೇಳುತ್ತಿಲ್ಲ. ನಿಮ್ಮ ಸರ್ಕಾರದ ಬಗ್ಗೆ ಹೇಳುತ್ತಿಲ್ಲ. Why you are defending Lokayukta?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಲೋಕಾಯುಕ್ತ ಯಾವ ರೀತಿ ನಡೆಯುತ್ತಿದೆ ಎಂಬ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಬಸವರಾಜ ಬೊಮ್ಮಾಯಿ: Why you are defending Lokayukta?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: No, No, ಇದು ಬಹಳ important.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ನೋಡಿ, ಸದನದಲ್ಲಿ ಚರ್ಚೆ ಆಗುವ ವಿಚಾರಗಳ ಬಗ್ಗೆ ಇರುವ ಸತ್ಯಾಂಶವನ್ನು ಹೊರತರುವುದು ಸರ್ಕಾರದ ಜವಾಬ್ದಾರಿ ಆಗಿರುತ್ತದೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೆ, ನಾನು continue ಮಾಡುತ್ತೇನೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಸಚಿವರೆ, ಚರ್ಚೆ ಮಾಡುವುದಕ್ಕೆ ಬಿಡಿ. ನೀವು ಮಧ್ಯೆದಲ್ಲಿ ಏಕೆ interfere ಆಗುತ್ತೀರಿ? ನೀವು ಏಕೆ ಅಡ್ಡಿ ಪಡಿಸುತ್ತೀರಿ?

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ಸಚಿವರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು ಮಾತನಾಡಲಿ ಬಿಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ, ಜನವರಿ 27 ರಂದು Director General of Police, CID, Bangalore submitted a letter dated 17.01.2015.

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಶೆಟ್ಟರ್‌ರವರೆ, ಒಂದು ನಿಮಿಷ. No, No, I am coming to your rescue. Please listen to me....

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ರಮೇಶ್ ಕುಮಾರ್‌ರವರೆ ನಾನು ಮೊದಲು ಮಾತನಾಡಿ ಮುಗಿಸುತ್ತೇನೆ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನನಗೆ ಇದನ್ನು ಪೂರ್ಣಗೊಳಿಸುವುದಕ್ಕೆ ಆಗುತ್ತಿಲ್ಲ. Divert ಆಗುತ್ತಿದೆ. ನಾನು ಏನೋ ಒಂದು ವಿವೇಕದಿಂದ ಮಾತನಾಡುತ್ತಿದ್ದೇನೆ. ಆಮೇಲೆ ತಾವು ಏನು ಬೇಕಾದರೂ ಕೇಳಿ. ನೀವು ಇದರ ಬಗ್ಗೆ ಮಾತನಾಡಿ.

ಶ್ರೀ ಕೆ.ಆರ್. ರಮೇಶ್ ಕುಮಾರ್: No, there is an issue which Speaker will have to resort. CAG obersvations ಇದೆ. C.A.G. looks into payment and receipts. ಅವರ ಸಿಬ್ಬಂದಿ ಇರುತ್ತಾರೆ, ಅವರು ಆಡಿಟ್ ಮಾಡಿ ರಿಪೋರ್ಟ್ಸ್ ಕೊಡುತ್ತಾರೆ. ಅದರ ಮೇಲೆ further actions, administrative actions ನಡೆಯುತ್ತದೆ. This petitioner has gone to High Court. ಹೈಕೋರ್ಟ್ ಏನೋ ಹೇಳಿತು, ಬಂದರು. ನನಗೆ, ತಮ್ಮಿಂದ ಒಂದು ಸ್ಪಷ್ಟೀಕರಣ ಏನು ಬೇಕೆಂದರೆ, ನಾನು ನಿಮ್ಮ ಮಾತಿಗೆ ಅಡ್ಡ ಬರುತ್ತಿದ್ದೇನೆಂದು ತಿಳಿದುಕೊಳ್ಳಬೇಡಿ. This matter is said to have been referred to Public Accounts committee by this House. ನಾನು ಕೇಳುತ್ತಿರುವುದು, Public Accounts committee ಈ ವಿಚಾರವನ್ನು ಇನ್ನೂ ತನ್ನ ಮುಂದೆ ಚರ್ಚೆಗೆ ಇಟ್ಟುಕೊಂಡಿದ್ದಾಗಲೇ ಲೋಕಾಯುಕ್ತರು ಇದನ್ನು ಪರಿಗಣನೆಗೆ ತೆಗೆದುಕೊಂಡು proceed ಆಗಿದ್ದಾರೆಯೇ? ಹಾಗೆ ಆಗಿದ್ದರೆ ಅದು ಸರಿಯೇ? That's all what I am trying to say. I am not coming in your way.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ರಮೇಶ್ ಕುಮಾರ್‌ರವರೆ ನಾನು ಅದನ್ನೇ ಹೇಳುತ್ತಿದ್ದೇನೆ. ನಾನು ಹೇಳುವುದಕ್ಕೆ ಯಾರೂ ಬಿಡುತ್ತಿಲ್ಲ. ಇದು procedure. ಸುಪ್ರೀಂಕೋರ್ಟ್ obersvation ಮಾಡಿದೆ.

SRI K.R. RAMESH KUMAR: ….The Speaker of this House, I am now talking about the Supremacy of this House. The Public Accounts Committee, which is constituted thereof on behalf of this Assembly. When that is looking into the observations of the C A G., can the Lokayukta parallelly proceed again in the same issue. ಇದು ಸರಿಯೇ ಎಂದು ತಾವು ನಮಗೆ ಬೆಳಕು ಚೆಲ್ಲಬೇಕು.

ಶ್ರೀ ಜಗದೀಶ್ ಶೆಟ್ಟರ್: ಖಂಡಿತವಾಗಿಯೂ. ಮಾನ್ಯ ರಮೇಶ್ ಕುಮಾರ್‌ರವರೆ, ನಾನು ಆ ವಿಷಯಕ್ಕೆ ಬರುತ್ತಿದ್ದೆ. ಆ ವಿಷಯಕ್ಕೆ ಬಂದಾಗ ಮಾನ್ಯ ಗೃಹ ಸಚಿವರು intervene ಆಗುತ್ತಿದ್ದರು. ಸುಪ್ರೀಂಕೋರ್ಟ್ obersvation ಮಾಡಿದ್ದು ಅದರ ಸಲುವಾಗಿಯೇ ಆಗಿದೆ. Public Accounts Committee ಮುಂದೆ ಬರಲಾರದಂಥ ವಿಚಾರಗಳನ್ನು, CAG ಅವರು ರಿಪೋರ್ಟ್ ಕೊಡುತ್ತಾರೆ. ಅವರು ಪಾರ್ಲಿಮೆಂಟರಿಯಲ್ಲಿಯೂ ಕೊಡುತ್ತಾರೆ. ಇಲ್ಲಿಯೂ ಕೊಡುತ್ತಾರೆ. ಕೊಟ್ಟ ಮೇಲೆ ಆ CAG ರಿಪೋರ್ಟ್ ಅನ್ನು ನಾವು ಸದನದಲ್ಲಿ ಮಂಡನೆ ಮಾಡುತ್ತೇವೆ. ನಂತರ Public Accounts Committee ಗೆ ಇದರ ಬಗ್ಗೆ scrutiny ಮಾಡಿ ಎಂದು refer ಮಾಡುತ್ತೇವೆ. ಈ ಒಂದು issue ಅನ್ನು ನಾನು ಏನು raise ಮಾಡುತ್ತಿದ್ದೇನೆ, ಇವತ್ತಿನ ದಿವಸ ಈ ಒಂದು CAG ರಿಪೋರ್ಟ್ ಆಧಾರದ ಮೇಲೆ ಯಾರೋ ಒಬ್ಬ ಖಾಸಗಿ ವ್ಯಕ್ತಿ ಹೋಗಿ ಮಾಜಿ ಮುಖ್ಯಮಂತ್ರಿಗಳ ಮೇಲೆ ಕಂಪ್ಲೇಂಟ್ ಕೊಟ್ಟಿದ್ದಾರೆ, Public Accounts Committee ಯಿಂದ scrutiny ಆಗಿಲ್ಲ. ಅಲ್ಲದೆ Public Accounts Committee ನಲ್ಲಿ ಅಂತಿಮವಾಗಿ ಯಾವುದೇ ಒಂದು ನಿರ್ಧಾರವನ್ನು ಕೈಗೊಂಡಿಲ್ಲ ಅಥವಾ ಸರ್ಕಾರಕ್ಕೆ ಇದರ ಬಗ್ಗೆ action

ತೆಗೆದುಕೊಳ್ಳಿ ಎಂದು refer ಮಾಡಿಲ್ಲ. It is under scrutiny, under discussion. ಇನ್ನು ಮುಂದುವರೆಯಲಾಗಿದೆಯೋ ಏನೋ ನನಗೆ ಗೊತ್ತಿಲ್ಲ. ಈ ರೀತಿ ಪರಿಸ್ಥಿತಿ ಇರುವ ಸಂದರ್ಭದಲ್ಲಿ ಒಬ್ಬ ವ್ಯಕ್ತಿ ಹೋಗಿ ಹೈಕೋರ್ಟ್‌ಗೆ approach ಆಗುತ್ತಾನೆ, ಹೈಕೋರ್ಟ್ ನೀವು ಲೋಕಾಯುಕ್ತಕ್ಕೆ ಹೋಗಿ ಎಂದು ಹೇಳುತ್ತದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಶೆಟ್ಟರ್‌ರವರೆ, this is where, I wanted to interfere. ಇಲ್ಲಿ Public Accounts Committee ಒಂದು ಸಲ constitute ಆದಮೇಲೆ ಒಂದೊಂದು ವರ್ಷದ ಆಡಿಟ್ ರಿಪೋರ್ಟ್ಸ್ ತೆಗೆದುಕೊಂಡು, ಒಂದೊಂದು ಇಲಾಖೆ ತೆಗೆದುಕೊಂಡು ಅವರ ಕೆಲಸ ಅವರು ಮಾಡುತ್ತಾ ಹೋಗುತ್ತಾರೆ. In the particular case, routine course ನಲ್ಲಿ ತನ್ನ ಕರ್ತವ್ಯ ನಿರ್ವಹಣೆ ಮಾಡುವಾಗ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯವರು ಈ ವಿಚಾರವನ್ನು ಪರಿಶೀಲನೆಗೆ ತೆಗೆದುಕೊಂಡಿದ್ದಿರಾ? ಕೆಲವು ವೇಳೆ ಏನಾಗುತ್ತದೆ ಎಂದರೆ ಇಂಥ ವಿಚಾರಗಳು ಬಂದಾಗ ಹೌಸ್ ಕೂಡ ಅದನ್ನು Public Accounts Committee ಗೆ refer ಮಾಡುತ್ತದೆ. ಯಾವ ಸ್ವರೂಪದಲ್ಲಿ ಇದು Public Accounts Committee ಮುಂದೆ ಇತ್ತು, ಹೌಸ್‌ನಿಂದ ಏನಾದರೂ refer ಆಗಿದೆಯೇ ಅಥವಾ ತಾನೇ ತನ್ನ ಕರ್ತವ್ಯವನ್ನು ನಿರ್ವಹಣೆ ಮಾಡುವಂಥ ಅವಧಿಯಲ್ಲಿ Public Accounts Committee ಯು ಇದನ್ನು ತೆಗೆದುಕೊಂಡಿತ್ತೆ? Public Accounts Committee ಯ Scrutiny ಒಳಗೆ ಇದು ಇದ್ದಾಗ parallel ಆಗಿ simultaneous ಆಗಿ at the same time ಅವರು ಇದರ ಮೇಲೆ ಕ್ರಮ ಜರುಗಿಸುವುದಕ್ಕೆ ಬರುತ್ತದೆಯೇ? Suppose, he gives a finding on that, we are handicapped. Then this, Public Accounts committee it loses its competence, can such a thing happen. I am coming to the fundamental.

ಶ್ರೀ ಕೆ.ಜೆ. ಜಾರ್ಜ್: ಮಾನ್ಯ ಉಪಾಧ್ಯಕ್ಷರೆ, ಪಾರ್ಲಿಮೆಂಟ್‌ನಲ್ಲಿ ಕೋಲ್ಗೇಟ್ ಮತ್ತು 2ಜಿ ಸ್ಕ್ಯಾಮ್ ಬಂದಾಗ ಸಿಎಜಿ ರಿಪೋರ್ಟ್ ಮೇಲೆ ಚರ್ಚೆ ಆಯಿತು. ಅಂದು ಕೋರ್ಟ್‌ಗೆ ಹೋಗಿ ಸಿಬಿಐ ಗೆಲ್ಲಾ ಬಂದಿದೆ. 2012 ರಲ್ಲಿ ಹೌಸ್ ನಲ್ಲಿ ಈ CAG ರಿಪೋರ್ಟ್ place ಆಗುತ್ತಾ? ಆಗ ಅದು Public Accounts Committeeಗೆ refer ಮಾಡಲಾಗಿತ್ತೆ? ಚರ್ಚೆ ಮಾಡುವಾಗ ಈ ವಿಚಾರಗಳನ್ನು ತೆಗೆದುಕೊಂಡು ಬರಬೇಕಾಗುತ್ತದೆ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಸಚಿವರೆ, 2ಜಿ sector ನಲ್ಲಿ, Public Accounts Committee ಯಲ್ಲಿ ಆದ ಮೇಲೆ ಕ್ರಮ ತೆಗೆದುಕೊಂಡಿರುವುದು.

(ಗೊಂದಲ)

SRI K. SHIVAMURTHY: What Home Minister is saying, it is a fact. Supremacy of the Parliament is ignored.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: 2012 ದು, ಅವರು ಹೈಕೋರ್ಟ್‌ಗೆ ಹೋದಾಗ ಈ ರಿಪೋರ್ಟ್ ಹೌಸ್‌ನಲ್ಲಿ accept ಆಗಿದೆಯೇ? ಈ ರಿಪೋರ್ಟ್ PAC ಗೆ refer ಆಗಿದೆಯೇ?

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಸಚಿವರೆ, ನಾನು ಅದನ್ನು clear ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಕಾರಜೋಳರವರು PACಯ ಅಧ್ಯಕ್ಷರಾಗಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ: ಸನ್ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಸರ್ಕಾರ 1995 ರಿಂದ 2012ರ ಅವಧಿಯೊಳಗೆ ಬೆಂಗಳೂರಿನ ಸುತ್ತಮುತ್ತ ಸೈಟುಗಳ ಬೇಡಿಕೆ ಹೆಚ್ಚಾಗಿದ್ದರಿಂದ 54 ಲೇಔಟ್‌ಗಳನ್ನು formation ಮಾಡಬೇಕೆಂದು 34,500 ಎಕರೆ.......

ಶ್ರೀ ಕೆ.ಶಿವಮೂರ್ತಿ: ಈ ವಿಚಾರದ ಚರ್ಚೆ ಎಲ್ಲೆಲ್ಲೋ ಹೋಗುತ್ತಿದೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ: ಇದಕ್ಕೆ ಸಂಬಂಧಪಟ್ಟಿರುವುದೇ ಆಗಿದೆ.

ಶ್ರೀ ವೈ.ಎಸ್. ವಿ.ದತ್ತಾ: ಅವರು PAC Committee Chairman.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ: ನಾನು yield ಆಗಿಲ್ಲ, ನನಗೆ ಅವಕಾಶ ಕೊಟ್ಟಿದ್ದೀರಿ. ನಾನು ನೇರವಾಗಿ ಅದೇ ವಿಷಯಕ್ಕೆ ಬರುತ್ತಿದ್ದೇನೆ. ಅದರ ಹಿನ್ನೆಲೆ ಹೇಳುತ್ತಿದ್ದೇನೆ.

SRI K. SHIVAMURTHY: Chairman is also equally responsible as a member.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ: ಮಾನ್ಯ ಉಪಾಧ್ಯಕ್ಷರೆ, ಅದರ ಹಿನ್ನೆಲೆ ಹೇಳುತ್ತಿದ್ದೇನೆ. 34,527 ಎಕರೆ ಜಮೀನನ್ನು ಬಿಡಿಎ ಮುಖಾಂತರ acquisition ಮಾಡುತ್ತಿದ್ದಾರೆ. ನಂತರ ಸಿಎಜಿಯವರು ಇದನ್ನು ಆಡಿಟ್ ಮಾಡುತ್ತಿದ್ದಾರೆ. ಆಡಿಟ್ ಮಾಡಿ particular ಆಗಿ 1995 ರಿಂದ 2012ರವರೆಗೆ ಮಾಡಿರುವುದನ್ನು ಬಿಟ್ಟು ಕೇವಲ 2007 ರಿಂದ 2012ರವರೆಗೆ 126 ಎಕರೆ ಡಿನೋಟಿಫಿಕೇಷನ್ ಆಗಿದೆಯೆಂದು ಅಂದಿನ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರು ಮತ್ತು ಬಿ.ಎಸ್. ಯಡಿಯೂರಪ್ಪನವರ

ಅವಧಿಯೊಳಗೆ ಆಗಿದೆಯೆಂದು ಸಿಎಜಿ ವದಿಯಲ್ಲಿ ಬರುತ್ತದೆ. ಸಿಎಜಿ ವರದಿ 2012ನ್ನು ಈ ಸದನದ ಮುಂದೆ ಮಂಡಿಸಿದ ಮೇಲೆ ಅದನ್ನು PAC ಗೆ refer ಮಾಡುತ್ತಾರೆ. PAC ಯಲ್ಲಿ scrutiny ಆಗುತ್ತಿದೆ. ಇನ್ನು ನಾವು ಅಂತಿಮವಾಗಿ ನಿರ್ಧಾರ ಮಾಡಿಲ್ಲ. ಯಾವುದೇ ಆಡಿಟ್ ಪ್ಯಾರಾಗಳನ್ನು ಸಂಬಂಧಪಟ್ಟಂಥ ಇಲಾಖೆಯವರು satisfactory compliance report ಕೊಟ್ಟರೆ ಅದನ್ನು delete ಮಾಡುವಂಥ ಮತ್ತು ಕೈಬಿಡುವಂಥ ಅಧಿಕಾರ PACಗೆ ಇದೆ. ನಾವು ಅದನ್ನು scrutiny ಮಾಡುತ್ತಿದ್ದೇವೆ. Scrutiny ಹಂತದಲ್ಲಿದ್ದಾಗಲೇ ಲೋಕಾಯುಕ್ತದವರು ಯಾರೋ ಒಬ್ಬರು complaint ಕೊಟ್ಟರೆಂದು ತರಾತುರಿಯಲ್ಲಿ ವರದಿ ತರಿಸುತ್ತಾರೆ. ಲೋಕಾಯುಕ್ತರು ಏನು ಹೇಳುತ್ತಾರೆಂದರೆ 02.06.2015ರಂದು ಪತ್ರ ಬರೆದು ಕೇವಲ 5 ದಿನಗಳಲ್ಲಿ ಲೋಕಾಯುಕ್ತಕ್ಕೆ ಪತ್ರ ಬರೆಯುತ್ತಾರೆ. ಲೋಕಾಯುಕ್ತದವರು 02.06.2015 ರಂದು ಸಿಐಡಿಗೆ 5 ದಿವಸದೊಳಗೆ ನೀವು ವರದಿ ಕೊಡಬೇಕೆಂದು ಪತ್ರ ಬರೆಯುತ್ತಾರೆ. ಆಗ Director General of Police ಲೋಕಾಯುಕ್ತ 05.06.2015ರಂದು ನನಗೆ ಕನಿಷ್ಠ 20 ದಿವಸಗಳ ಸಮಯ ಬೇಕಾಗುತ್ತದೆ, ಕಡಿಮೆ ಅವಧಿಯೊಳಗೆ ನಾನು ವರದಿ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಪತ್ರ ಬರೆಯುತ್ತಾರೆ. 02.07.2011ರಂದು ಇವರ ಒತ್ತಡಕ್ಕೆ ಮಣಿದು ಲೋಕಾಯುಕ್ತರವರು ಅರ್ಧಂಬರ್ಧ ವರದಿ ಕೊಡುತ್ತಾರೆ. ಅಪೂರ್ಣ ವರದಿ ಸಲ್ಲಿಸುತ್ತಾರೆ. ಅಂದೇ, ಗಡಿಬಿಡಿ ಮಾಡಿ ಇದನ್ನು FIR ಮಾಡಿ ಎಂದು ಲೋಕಾಯುಕ್ತರವರು directions ಕೊಡುತ್ತಾರೆ. ಇದರಲ್ಲಿಯೇ ಸಂಶಯ ತೋರಿಬರುತ್ತಿದೆ. ನನ್ನ ಮಾತನ್ನು ಮುಗಿಸಿಬಿಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ನಾನು ಆ sentenceನ್ನು ಓದಿಬಿಡುತ್ತೇನೆ. ಸನ್ಮಾನ್ಯ ಉಪಾಧ್ಯಕ್ಷರೆ, ಆಗಲೇ ನಾನು ಅದನ್ನೇ ಓದುತ್ತಿದ್ದೆ. ಇಲ್ಲಿ ದಿ:02.06.2015ರಂದು ಲೋಕಾಯುಕ್ತರವರು ಸಹಿ ಮಾಡಿದ ಪತ್ರ ಒಂದು ಇದೆ. ಅವರು The Director General of Polilce has requested time for six weeks to submit the report. Hence, time may be given ಎಂದು ಆಫೀಸರ್ ಹೇಳುತ್ತಾರೆ. ಇದಕ್ಕೆ ಲೋಕಾಯುಕ್ತರವರು ಏನು order

ಮಾಡುತ್ತಾರೆಂದರೆ, the request for extension of time for submission of the investigation report cannot be granted. Write letter to the Director General of CID to submit the report on or before 7th June ಸಿಐಡಿಯವರು ಜೂನ್ 30ನೇ ತಾರೀಖಿನವರೆಗೆ ಟೈಮ್ ಕೊಡಿ ಎಂದು ಕೇಳುತ್ತಾರೆ. ಇವರೇನು ಹೇಳುತ್ತಾರೆಂದರೆ, Write letter to the Director General of CID to submit the report on or before 7th June, 2015 without fail. No further time would be granted in the matter since the matter is long pending ಎಂದು ಹೇಳುತ್ತಾರೆ. ಮುಂದೆ, ಅವರ ಒತ್ತಾಯದ ಮೇಲೆ ಅನಿವಾರ್ಯವಾಗಿ ಏನೋ ಒಂದು report ಕೊಡುತ್ತಾರೆ. ರಿಪೋರ್ಟ್ ಕೊಟ್ಟಮೇಲೆ ಇಲ್ಲಿ ಎಷ್ಟನೇ ತಾರೀಖು ಎಂದರೆ, ಮುಂದೆ 'The DGP (CID) has submitted a report in respect of 35 cases. ಇದು 8ನೇ ತಾರೀಖಿನಂದು ಆಗಿದ್ದು. 7ನೇ ತಾರೀಖಿಗೆ ಅವರಿಗೆ ಗಡುವು ಕೊಟ್ಟಿರುತ್ತಾರೆ. ಇವರು ಆಯಿತು ಇನ್ನು ಲೋಕಾಯುಕ್ತ ಇಲಾಖೆಯವರು ಬಹಳ ಒತ್ತಾಯ ಮಾಡುತ್ತಾರೆ ಎಂದು ಆವತ್ತು, 'The DGP (CID) has submitted a report in respect of 35 cases pertaining to de-notification of land pointed out by the CAG in his report. In some cases prosecution is already launched and cases are pending in the Lokayuktha special court. In respect of other cases permission may be granted to file cases under the P.C. Act.' ಅಂದರೆ, ಜೂನ್‌ವರೆಗೆ ಟೈಮ್ ಕೇಳಿದ್ದರೂ ಬಿಡಲಿಲ್ಲ. ನೀವು 7ನೇ ತಾರೀಖಿನೊಳಗೆ ಕೊಡಲೇಬೇಕು ಎಂದರೆ ಕೊಡುತ್ತಾರೆ. ಆವತ್ತು ಏನು ಆರ್ಡರ್ ಮಾಡುತ್ತಾರೆ, ಅದೂ ಸಹ scrunity. ಆ ರಿಪೋರ್ಟ್‌ಅನ್ನು ಸಹಿತ scrunity ಮಾಡುವುದಕ್ಕೆ ಹೋಗುವುದಿಲ್ಲ. ಹೇಗೆ ಎಂದರೆ, ಒಂದನ್ನು ನಾನು ಓದುತ್ತೇನೆ. ಎಲ್ಲಾ ರಿಪೋರ್ಟ್ ಅನ್ನು ಓದುವುದಿಲ್ಲ. ಒಂದು ಓದುತ್ತೇನೆ. ಅವರು ಶಿಫಾರಸ್ಸು ಮಾಡುತ್ತಾರೆ. ಈ ಪ್ರಕರಣದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ...

ಶ್ರೀ ಕೆ.ಜೆ. ಜಾರ್ಜ್: ಮಾನ್ಯ ಜಗದೀಶ್ ಶೆಟ್ಟರ್‌ರವರೆ,.........

ಶ್ರೀ ಜಗದೀಶ್ ಶೆಟ್ಟರ್: ಒಂದು ಮಿನಿಟ್, ಈ ರೀತಿ intervene ಮಾಡುವುದು ಸರಿಯಲ್ಲ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಗೃಹಮಂತ್ರಿಗಳೇ, ನಿಮ್ಮ ಕೆಲಸವಲ್ಲ ಇದು. ನೀವು ಕುಳಿತು ಕೇಳ್ರಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಲೋಕಾಯುಕ್ತದ ವಿಷಯ ಹೇಳುತ್ತಿದ್ದೇನೆ. ಅಲ್ಲಿ ಏನು ನಡೆಯುತ್ತಿದೆ ಎಂದು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ: ಸದನದ ಹಕ್ಕುಚ್ಯುತಿಯಾಗಿದೆ. ಈ ವಿಷಯದಲ್ಲಿ ಸದನದ ಹಕ್ಕುಚ್ಯುತಿಯಾಗಿದೆ. ಅದನ್ನು ನಾವು ಹೇಳುತ್ತಿದ್ದೇವೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಕಾನೂನಿನ ಪ್ರಕಾರ ಏನಿದೆ, ಆ ಕಾನೂನಿನ ಪ್ರಕಾರ ಪ್ರಶ್ನೆ ಮಾಡ್ರಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಆಯಿತು ಮಾಡುತ್ತೇವೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಲೋಕಾಯುಕ್ತ ತಪ್ಪು ಮಾಡಿದರೆ ಕಾನೂನು ಇದೆ...

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನೋಡಿ ಏನಾಗಿದೆ ಎಂದು ನೋಡಿ......

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಇವರು ಈ ರೀತಿ ಮಾತನಾಡುವುದನ್ನು ನೋಡಿದರೆ ಲೋಕಾಯುಕ್ತ ಸಂಸ್ಥೆಯನ್ನು ಸರ್ಕಾರ ಹೇಗೆ ಬಳಕೆ ಮಾಡಿಕೊಂಡಿದೆ ಎಂಬುದು ಅರ್ಥವಾಗುತ್ತದೆ. ಸರ್ಕಾರ ಲೋಕಾಯುಕ್ತ ಸಂಸ್ಥೆಯನ್ನೇ ಬಳಕೆ ಮಾಡಿಕೊಳ್ಳುತ್ತಿದೆ ಎನ್ನುವ ಅನುಮಾನ ಬರುತ್ತಿದೆ.

(ಗೊಂದಲ)

ಶ್ರೀ ಆರ್. ರೋಷನ್‌ಬೇಗ್: ಇವರು ಯಾರನ್ನು protect ಮಾಡುತ್ತಿದ್ದಾರೆ?

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ: ನೀವು ಹಾಗೆ ಏಕೆ defend ಮಾಡಿಕೊಳ್ಳುತ್ತಿದ್ದೀರಿ?

(ಗೊಂದಲ)

ಶ್ರೀ ಆರ್. ರೋಷನ್‌ಬೇಗ್: You are trying to protect somebody.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಎರಡು ವರ್ಷ ಆದಮೇಲೆ seize ಮಾಡಿರುವುದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಏನು ಹೇಳುತ್ತಾರೆ ಎಂದರೆ ಶಿಫಾರಸ್ಸು. ಒಂದು ಪ್ರಕರಣ ಹೇಳುತ್ತೇನೆ. almost ಎಲ್ಲಾ ಪ್ರಕರಣದಲ್ಲಿಯೂ ಇದೆ. 'ಈ ಪ್ರಕರಣದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮತ್ತು ನಗರಾಭಿವೃದ್ಧಿ ಇಲಾಖೆಯ ವಿವಿಧ ಅಧಿಕಾರಿಗಳು

ವಿವಿಧ ಹಂತಗಳಲ್ಲಿ ಇಂತಹ ಅವ್ಯವಹಾರ ಆಗದೇ ಇರುವ ರೀತಿಯಲ್ಲಿ ಕಾನೂನಿನ ಅನ್ವಯ ಕ್ರಮ ಜರುಗಿಸಲು ಶಿಫಾರಸ್ಸು ಮಾಡದೇ ಇರುವುದು ವಿಚಾರಣಾ ಹಂತದಲ್ಲಿ ಕಂಡುಬಂದಿರುತ್ತದೆ.

(ಗದ್ದಲ)

ಶ್ರೀ ಕೆ.ಜೆ. ಜಾರ್ಜ್: ಇದರಲ್ಲಿ ಯಾರನ್ನು protect ಮಾಡುತ್ತಿದ್ದೀರಿ?

ಶ್ರೀ ಜಗದೀಶ್ ಶೆಟ್ಟರ್: ಸದರಿ ಸಾರ್ವಜನಿಕ ಸೇವಕರ ಮತ್ತು ಅವರ ಅಪರಾಧಗಳ ಬಗ್ಗೆ ಕೂಲಂಕಷವಾದ ಹೆಚ್ಚಿನ ತನಿಖೆ ಕೈಗೊಳ್ಳಬಹುದಾಗಿರುತ್ತದೆ'. ಇಷ್ಟೆಲ್ಲಾ observe ಮಾಡಿ ಇನ್ನೂ ತನಿಖೆ ಆಗಬೇಕು, ಇನ್ನೂ ಕೂಲಂಕುಷವಾಗಿ ಆಗಬೇಕು ಎನ್ನುವಂತಹದ್ದು, ಇಷ್ಟೆಲ್ಲಾ observe ಮಾಡಿದರೂ ಸಹ ಹಿಂದಿನ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಭೂಮಾಲೀಕರ ವಿರುದ್ಧ ಕೇಸ್ ಹಾಕಬಹುದು ಎಂದು ಶಿಫಾರಸ್ಸು ಮಾಡುತ್ತಾರೆ. ಅಂದರೆ ಇನ್ನೂ investigation complete ಆಗಿಲ್ಲ, complete report ಕೊಟ್ಟಿಲ್ಲ, incompelete report. (ಗೊಂದಲ) ಈ ರೀತಿ ಒತ್ತಡ ಇವತ್ತು ಲೋಕಾಯುಕ್ತಕ್ಕೆ ಹೇಗೆ ಬಂತು? ಇದನ್ನು ನಾನು ಇವತ್ತು question ಮಾಡುತ್ತಿದ್ದೇನೆ. ಈ ರೀತಿ ಲೋಕಾಯುಕ್ತದವರು ಇಷ್ಟು ಒತ್ತಡದಲ್ಲಿ ಇವತ್ತು ಮಾಜಿ ಮಾನ್ಯ ಮುಖ್ಯಮಂತ್ರಿಗಳು ಅಂದರೆ ಮಾನ್ಯ ಯಡಿಯೂರಪ್ಪನವರು ಇರಬಹುದು, ಮಾನ್ಯ ಕುಮಾರಸ್ವಾಮಿಯವರು ಇರಬಹುದು. ಇವತ್ತು 12 ಕೇಸ್, 15 ಕೇಸ್, 30 ಕೇಸ್...ಅಂದರೆ ಇದರಲ್ಲಿ ಯಾವ ಒತ್ತಡವಿದೆ ಎನ್ನುವುದನ್ನು ಇವತ್ತು ಹೇಳಬೇಕಾಗುತ್ತದೆ.

(ಗೊಂದಲ)

ಶ್ರೀ ಆರ್. ರೋಷನ್‌ಬೇಗ್: ನೀವು ಯಾರನ್ನು ಕಾಪಾಡುತ್ತಿದ್ದೀರಿ ನೀವು; ಯಾರನ್ನು protect ಮಾಡುತ್ತಿದ್ದೀರಿ? ಯಾರಿಗೆ ಕಾಪಾಡುತ್ತಿದ್ದೀರಿ? ಯಾರಿಗೆ protect ಮಾಡುತ್ತಿದ್ದೀರಿ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಲೋಕಾಯುಕ್ತ ಸಂಸ್ಥೆಯನ್ನು ನೀವು defend ಮಾಡಿಕೊಳ್ಳುತ್ತಿರುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಆರ್. ರೋಷನ್‌ಬೇಗ್: ಇವರು ಯಾರನ್ನು ಬಚಾವ್ ಮಾಡುವುದಕ್ಕೆ ಹೋಗುತ್ತಿದ್ದಾರೆ?

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಯಾರನ್ನೋ ಬಚಾವ್ ಮಾಡುವುದಕ್ಕೆ ಇವತ್ತು ಲೋಕಾಯುಕ್ತದ ಮೇಲೆ ಗೂಬೆ ಕೂರಿಸುತ್ತಿದ್ದಾರೆ.

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್: ಸರ್, ಲೋಕಾಯುಕ್ತಕ ಚರ್ಚೆ ದಾರಿ ತಪ್ಪುತ್ತಿದೆ.

(ಗೊಂದಲ)

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್: ಅಧಿಕಾರವನ್ನು ದುರುಪಯೋಗ ಮಾಡುತ್ತಿದ್ದೀರಿ. ಲೋಕಾಯುಕ್ತ ಕೂಡ ದುರುಪಯೋಗ ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಏನು PAC ಯಿಂದ judgment ಮಾಡುವುದಕ್ಕೆ ಆಗುವುದಿಲ್ಲ. ನೀವು PAC ಯಲ್ಲಿ ನಮ್ಮ ತನಿಖಾಧಿಕಾರಿಗಳನ್ನು ಕರೆದು ಅವರ ಮೇಲೆ pressurize ಮಾಡಿದ್ದೀರಿ. ನೀವು CID ಯವರನ್ನು ಕರೆಸಿ ಅವರನ್ನು pressurize ಮಾಡುತ್ತಿದ್ದೀರಿ ನೀವು. ಇದು ಸರಿಯಲ್ಲ.

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ: ಲೋಕಾಯುಕ್ತ ಸಂಸ್ಥೆಯನ್ನು ನೀವು ರಾಜಕೀಯದಲ್ಲಿ ಬಳಕೆ ಮಾಡುತ್ತಿದ್ದೀರಿ. ಮಾಜಿ ಮುಖ್ಯಮಂತ್ರಿಯವರ ಚಾರಿತ್ರ್ಯಹರಣ ಮಾಡುವುದಕ್ಕೆ ನೀವು ಲೋಕಾಯುಕ್ತರನ್ನು ಬಳಕೆ ಮಾಡುತ್ತೀರಿ ಎಂದು ನಿಮ್ಮ ಮೇಲೆ ಸಂಶಯ ಬರುತ್ತಿದೆ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ರಮೇಶ್ ಕುಮಾರ್‌ರವರು ಬಹಳ ಒಂದು specific ಪ್ರಶ್ನೆ ಕೇಳಿದರು. ಈ matter PACಯಲ್ಲಿ ಇರುವಾಗ ಈ ರೀತಿ ಮಾಡುವುದಕ್ಕೆ ಅವಕಾಶವಿದೆಯೇ ಎಂಬುದು ಬಹಳಷ್ಟು ಇದೆ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ: Parliament ಗೆ refer ಮಾಡಿ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್: ಇದು ಯಾರನ್ನೂ defend ಮಾಡುವುದಲ್ಲ. ತಾವು ಮಾತನಾಡುತ್ತಾ 2G spectrum ಅನ್ನು refer ಮಾಡಿದ್ದೀರಿ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ: 2G spectrum pertains to the Parliament.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ: ಇದು ಚರ್ಚೆಯಾಗಲಿ. ಈ ಸದನದ ಗೌರವದ ಪ್ರಶ್ನೆ. ಈ ಮನೆಯ ಘನತೆ–ಗೌರವದ ಪ್ರಶ್ನೆ. ಇದು ಚರ್ಚೆಯಾಗಲಿ.

ಶ್ರೀ ಕೆ. ಶಿವಮೂರ್ತಿ: ಬಿಜೆಪಿಯವರು propaganda ಮಾಡಿದ್ದೇ ಇದನ್ನು.

SRI. S.SURESH KUMAR: Center for Public Interest Litigation and others V/s. Union of India and others. 2G Scam case-Supreme Court-Volume-III-Page No. 1- 2012. ಒಂದೇ ಪ್ಯಾರಾ. "Before dealing with the arguments of the Learned counsel for the parties and adverting to some of the precedents....' Judge ರವರು Judgement ನಲ್ಲಿ ಹೇಳಿರುವುದು. 'Be considered if necessary, to mention that during the course of hearing Sri. Prashanth Bhushan and Dr. Subramanian Swami heavily relied upon CAG report, as also the one man committee report. The Learned Attorney General and Learned senior counsel appearing for some of the private respondents also referred to the one man committee report. However, as the CAG report is being examined by the Public Accounts Committee and Joint Parliamentary Committee of the Parliament, we do not consider it proper to refer to the findings and conclusions contained therein'. It is very very clear. ಇದು ಅವರು ಯಾರನ್ನೋ defend ಮಾಡುವುದಲ್ಲ. ನಾವು ಯಾರನ್ನೋ defend ಮಾಡುವುದಲ್ಲ. ಬಂದಿರುವುದು ಲೋಕಾಯುಕ್ತ ಸಂಸ್ಥೆ. ತನ್ನ ಮುಂದೆ ಬಂದಿರುವ ವಿಚಾರವನ್ನು ಯಾವ ರೀತಿ ಮಾಡಬೇಕೋ ಮಾಡದೇ ತನ್ನ ಕಾನೂನನ್ನೇ ಉಲ್ಲಂಘಿಸಿ ಯಾವ ರೀತಿ refer ಮಾಡುತ್ತಿದ್ದಾರೆ? ಮಾನ್ಯ ಕಾರಜೋಳರವರೆ ಹೇಳಿದ ಹಾಗೆ CID ಗೆ ಇಷ್ಟೇ ದಿವಸಗಳಲ್ಲಿ ಕೊಡಬೇಕು, ಇವತ್ತೇ ಕೊಡಬೇಕು ಅಂತ ಹೇಳುವುದು, ಅವರು inconclusive report ಕೊಡುವುದು, ಆ inconclusive report ಮೇಲೆ conclusive FIR ಹಾಕುವುದು. ಇದು ನಾವು ಯಾರೂ ಸರ್ಕಾರದ ಬಗ್ಗೆ ಮಾತನಾಡುತ್ತಿಲ್ಲ. ಮಾನ್ಯ ಜಾರ್ಜ್‌ರವರೆ, George the great, ನಾವು ಸರ್ಕಾರದ ವಿರುದ್ಧ ಮಾತನಾಡುತ್ತಿಲ್ಲ. ನಾವು ಹೇಳುತ್ತಿರುವುದು. ನಾನು ಮುಂಚೆಯೇ ಹೇಳಿದೆ. ಇಲ್ಲಿ ವಿರೋಧ ಪಕ್ಷ, Ruling party ಎಂದು ಮಾಡುವುದು ದಯವಿಟ್ಟು ಬೇಡ. ಒಂದು ಸಂಸ್ಥೆಯಲ್ಲಿ ಯಾವ ರೀತಿ

ಅವನತಿಯಾಗುತ್ತಿದೆ. ನಮ್ಮ ಕಣ್ಣ ಮುಂದೆ ಆಗುತ್ತಿದೆ ಎಂದು ನಾನು ಗಮನಕ್ಕೆ ತಂದಿದ್ದೇನೆ. ಅದಕ್ಕೋಸ್ಕರ ನಾವೂ ಯಾರನ್ನೂ defend ಮಾಡುವುದು ಬೇಡ. ನೀವೂ ಯಾರನ್ನೂ defend ಮಾಡುವುದು ಬೇಡ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಮಾನ್ಯ ಅಧ್ಯಕ್ಷರೆ, ಸಂಪೂರ್ಣವಾಗಿ ತಪ್ಪು ಮಾಹಿತಿ ಹೋಗುತ್ತಿದೆ.

ಶ್ರೀ **ಗೋವಿಂದ ಎಂ. ಕಾರಜೋಳ:** ತಪ್ಪು ಸಂದೇಶ ಏನು ಹೋಗುತ್ತಿದೆ? ಈ ಸದನದ ಘನತೆ-ಗೌರವದ ಬಗ್ಗೆ ನಾವು ಚರ್ಚೆ ಮಾಡುತ್ತಿದ್ದೇವೆ.

ಶ್ರೀ ಕೆ.ಜೆ. ಜಾರ್ಜ್: ಇಲ್ಲಿ ಕೇಳಿ, ಲೋಕಾಯುಕ್ತದವರು CAG report ಮೇಲೆ ತನಿಖೆ ಮಾಡುತ್ತಿಲ್ಲ. CAG report ನಲ್ಲಿ ಮಾಡಿದ ಕೆಲವು ಅಂಶಗಳನ್ನು ಒಬ್ಬರು private complaint ಲೋಕಾಯುಕ್ತಕ್ಕೆ ತೆಗೆದುಕೊಂಡು ಹೋಗಿ ಕೊಡುತ್ತಾರೆ. ಆಗ ಲೋಕಾಯುಕ್ತದವರು CIDಗೆ refer ಮಾಡುತ್ತಾರೆ. CID ಯಲ್ಲಿ ಸುಮಾರು ಒಂದೂವರೆ-ಎರಡು ವರ್ಷಗಳ ಸಮಯದಷ್ಟು ತನಿಖೆಯಾಗುತ್ತದೆ. ಈ ತನಿಖೆಗೆ ಮತ್ತೆ ಟೈಮ್ ಕೇಳಿದಾಗ ಆದಷ್ಟು ಬೇಗ ಕೊಡಿ ಎಂದು ಕೇಳಿದ್ದಾರೆಯೇ ಹೊರತು ಈಗ FIR file ಆಗುತ್ತದೆ. FIR ಆದಮೇಲೆ investigation ಆಗುತ್ತದೆ. ಚಾರ್ಜ್‌ಶೀಟ್ ಕೋರ್ಟ್‌ನಲ್ಲಿ file ಆಗುತ್ತದೆ. ಲೋಕಾಯುಕ್ತದವರಾಗಲಿ, CID ಯವರಾಗಲಿ ಯಾರು ತಪ್ಪು ಮಾಡಿದ್ದರೆ ಕೋರ್ಟ್ ಮುಂದೆ ಆರೋಪಿಗಳಿಗೆ ಅವರ ವಿಚಾರ ಹೇಳುವುದಕ್ಕೆ ಅವಕಾಶವಿರುತ್ತದೆ. ಅಲ್ಲಿ fight ಮಾಡಬೇಕೇ ಹೊರತು ಇಲ್ಲಿ ಸದನದಲ್ಲಿ ಯಾರನ್ನೂ ರಕ್ಷಣೆ ಮಾಡುವುದಕ್ಕೆ ಹೋಗಬಾರದು.

ಶ್ರೀ ಬಿ.ವೈ. ರಾಘವೇಂದ್ರ: ಮಾನ್ಯ ಅಧ್ಯಕ್ಷರೆ, ಕಾನೂನಿನ ಚೌಕಟ್ಟಿನಲ್ಲಿ ಲೋಕಾಯುಕ್ತಕ್ಕೆ ಅವಕಾಶವೇ ಇಲ್ಲ.

(ಗೊಂದಲ)

ಶ್ರೀ ಆರ್. ಜಗದೀಶ್ ಕುಮಾರ್: Prevention of orruption Act, Lokayuktha Act, ಇದು ಯಾವ್ಯಾವುದಕ್ಕೆ difference ಇದೆ. This shows the biased attitude of Lokayuktha. We are going in to the conduct of Lokayuktha. This House has got the power to discuss about the conduct of Lokayuktha. Lokayuktha is a biased person.

(ಗೊಂದಲ)

ಉಪಾಧ್ಯಕ್ಷರು: complete ಮಾಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಯಾವ ರೀತಿ ಮಾಡುತ್ತಿದ್ದಾರೆ, ಲೋಕಾಯುಕ್ತದಲ್ಲಿ ಏನು ನಡೆಯುತ್ತಿದೆ ಎನ್ನುವುದರ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಹಿಂದೊಮ್ಮೆ ನಾನು ಕಳೆದ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಮೇಲೆ ಏನು complaint ಆಗಿತ್ತು, ಅದರ ಬಗ್ಗೆ ಕೂಡ ನಾನು refer ಮಾಡಿದ್ದೆ. ಆಗ ಏನು ಮಾಡಿದರು ಎಂದರೆ, ಮಾನ್ಯ ಮುಖ್ಯಮಂತ್ರಿಗಳ ಮೇಲೆ complaint ಆಗಿದ್ದನ್ನು register ಮಾಡಿಕೊಂಡು ಅವರಿಗೆ Section-9 ಪ್ರಕಾರ ಒಂದು ನೋಟೀಸ್ ಕೊಡುತ್ತಾರೆ. ಇದರ ಬಗ್ಗೆ ಏನಿದೆ ಎಂದು ಕೊಡುತ್ತಾರೆ.

'Section-9(3)-Lokayuktha or an Upalokayuktha proposes, after making such preliminary inquiry as he deemed fit, to conduct any investigation under this Act, he shall forward a copy of the complaint and the case of investigation initiated suo-motto by him, the opinion recorded by him to initiate the investigation under Section-7 to the public servant and the competent authority concerned. Shall afford such public servant an opportunity to offer his comments on such complaint under sub-section (1) and (2) of the Section-7, as the

case may be. May make such order as to the safe custody of the documents'. ಅಂದರೆ ಒಂದು opportunity ಕೊಡುತ್ತಾರೆ. ಅದಕ್ಕೆ ಪ್ರಾವಿಷನ್ ಇದೆ. ಇವತ್ತು ಯಾವುದೋ ಒಂದು complaint register ಮಾಡಿಕೊಂಡಾಗ investigation ಆಗುವುದಕ್ಕೆ ಮುಂಚೆ, ಕಳೆದ ಬಾರಿ ರೆಫರ್ ಮಾಡಿದ ಹಾಗೆ ಅಲ್ಲಿಯೂ ಕೂಡ ಅವರು ಒಂದು opportunity ಕೊಟ್ಟು case refer ಮಾಡುತ್ತಾರೆ. ಇಲ್ಲಿ clear ಆಗಿದೆ. ಮುಖ್ಯಮಂತ್ರಿಗಳ ವಿರುದ್ಧವಾಗಿರುವ complaint ನಲ್ಲಿ ಏನು ಹೇಳುತ್ತಾರೆಂದರೆ,

(a) To take up the complaint for investigation under Section-7 of the Karnataka Lokayukta Act.

(b) To send a copy of the complaint to the respondent as required under Section-9(3)(a) of the Act for his comments by 22.4.2015'.

ಲೋಕಾಯುಕ್ತದವರು ಈ ರೀತಿ ಒಂದು ಕಡೆ ಮಾಡುತ್ತಾರೆ. ಮತ್ತೊಂದು ಕಡೆ ಮಾಜಿ ಮುಖ್ಯಮಂತ್ರಿಗಳ ಮೇಲೆ ದೂರು ಬಂದಾಗ, ನಾನು merit of the case ಹೋಗುವುದಿಲ್ಲ. ಇವರು conduct ಹೇಗಿದೆಯೆನ್ನುವುದು.

SRI K.R. RAMESH KUMAR: Sir, I am on a point of order. I don't want to break your thoughts. They started with Ashwin Rao. I said, nobody enjoys no locus standi. Now, as hon'ble member Mr. Jagadish Kumar pointed out, you have directly come to discuss the conduct of conduct of Lokayukta. This House is entitled. Section-6 ಗೆ ಹೋಗಿ. Please comply with the provisions of Section-6 of Lokayukta Act and start dissecting the conduct of Lokayukta. Nobody prevents you. No hold is barred. We can do it. But let us do it legally. Whatever is prescrived under rule-6, ….

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ಲೋಕಾಯುಕ್ತರಿಗೆ ಏನು mention ಮಾಡಿಲ್ಲ.

(ಗೊಂದಲ)

ಉಪಾಧ್ಯಕ್ಷರು: Let him complaint.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: Point of order ಗೆ ಉತ್ತರವನ್ನು ಹೇಳುತ್ತಿದ್ದೇನೆ. ಸುಮ್ಮನೆ ನಿಲುವಳಿ ಸೂಚನೆ ಕೊಡುವುದು ಒಂದು, ತೆಗೆಯುವುದು ಒಂದು ಏನಿದು?

ಉಪಾಧ್ಯಕ್ಷರು: ಬೋಪಯ್ಯರವರೆ ರಮೇಶ್ ಕುಮಾರ್ ರವರು ಮಾತನಾಡಲಿ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಬೋಪಯ್ಯರವರೆ ಒಂದು ನಿಮಿಷ. Please listen to me. There was direct reference. ತಾವು ರೆಕಾರ್ಡ್ಸ್ ತರಿಸಿ ನೋಡಿ. Lokayukta is baised. Lokayukta is conducing and discharging his duties under pressure ಎನ್ನುವಂತಹ ಮಾತುಗಳು ವ್ಯಕ್ತವಾಗಿದ್ದು, ಕಡತಕ್ಕೆ ಹೋಗಿದೆ. ನಾನು ಇಲ್ಲವೆಂದು ಹೇಳುವುದಕ್ಕೆ ನನಗೇನು ಅಧಿಕಾರವಿದೆ? You might have done that mistake. It amounts to discussing the conduct of Lokayukta. This House is competent to discuss that. But, ನಮ್ಮಲ್ಲಿ ಕಾನೂನಿನಲ್ಲಿ ಬೇರೆ ವ್ಯವಸ್ಥೆಯಿದೆ. Please do that. If he is incapacited, or if he is found indulging in practices which are not desirable, which do not defeat the stature and dignity of the office of Lokayukta, this House is competent. I am not trying to hold you back from doing it. Do it more conceretely. If it is your objective to establish a case

against Lokayukta, the incumbent and about his conduct as Lokayukta, please come out with concrete evıdence. Do ıt more legitimately. That will enhance the dignity of this House. That is my appeal.

ಶ್ರೀ ಜಗದೀಶ್ ಶೆಟ್ಟರ್: Conduct of the ಲೋಕಾಯುಕ್ತದ discussion ಬಗ್ಗೆ ಮಾಡುವುದಕ್ಕೆ ಅವರು ತಾಂತ್ರಿಕವಾಗಿ point of order ಮಾಡಿದರು. ನಾನು ಹೇಳುವುದೇನೆಂದರೆ, ಅಶ್ವಿನ್ ರಾವ್ ಬಗ್ಗೆ ಮಾತನಾಡಿ, ಎಲ್ಲಾ ಒಂದಕ್ಕೊಂದು connection ಬರುತ್ತಿದೆ. ಹೀಗಾಗಿ ಒಂದು ಕಡೆ opportunity ಕೊಡಲಿಲ್ಲ. ಮತ್ತೊಂದು ಕೊಡುವುದೇನಿದೆ, ಯಾವ ರೀತಿ ಒತ್ತಡದಲ್ಲಿ, ಇವತ್ತು ಲೋಕಯುಕ್ತ ಸಂಸ್ಥೆಯಲ್ಲಿ ಏನು ನಡೆಯುತ್ತಿದೆಯೆನ್ನುವುದನ್ನು ನಾನು ನೋಡಿದ್ದೇನೆ. ಯಡಿಯೂರಪ್ಪ ಪ್ರಕರಣ ಬಗ್ಗೆ ಅವರು challenge ಮಾಡಿದ್ದಾರೆ, merit of the case ಬಗ್ಗೆ ನಾನು ಹೇಳುವುದಿಲ್ಲ. ಈ ಒಂದು conduct ಏನಿದೆ, ಇದರ ಹಿನ್ನೆಲೆ ಯಾರಿದ್ದಾರೆ, ಇವೆಲ್ಲವನ್ನು ನಾನು ನೋಡುತ್ತಿದ್ದೇನೆ.

ಶ್ರೀ ಬಸವರಾಜ್ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಇಬ್ಬರು ಮುಖ್ಯಮಂತ್ರಿಗಳಿಗೆ minimum notice ಕೂಡ ಕೊಟ್ಟಿಲ್ಲ. Complaint ಬಂದಾಗ ನೋಟಿಸ್ ಕೂಡ ಕೊಡದಿರುವಂತಹ ರೀತಿ conduct ಮಾಡುತ್ತಾರೆ. This itself shows the baised action of the Lokayukta. ಇದಕ್ಕಿಂತ ಇನ್ನೇನು ಆಗಬೇಕು;

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನೋಟಿಸ್ ಕೊಡುವಂತಹ ಕೆಲಸವನ್ನೂ ಕೂಡ ಮಾಡಲಿಲ್ಲ. ಹೀಗಾಗಿ ಇದೆಲ್ಲಾ ಆಗಿದೆ. 12, 14, 15, 20, 25 ಯಾವುದೇ ನೋಟಿಸ್ ಕೊಡಲಾರದೆ, ಹೇಳಿಕೆ ಕೇಳಲಾರದೆ, ಆಗ ಸುಪ್ರೀಂಕೋರ್ಟ್ observation ಇದೆಲ್ಲಾ ಬರುತ್ತಿದ್ದಾಗ ತಿಳಿಯುತ್ತಿತ್ತು. ಈ ರೀತಿ ಏನು ಮಾಡಲಿಲ್ಲವೆಂಬುದು ನನ್ನ point ಆಗಿದೆ. ಮತ್ತೊಂದು ಲೋಕಾಯುಕ್ತ ವಿಚಾರವಾಗಿ ನಾನು ಆಗಲೇ ಹೇಳಿದ ಹಾಗೆ ಸರ್ಕಾರ

ಅಸಹಾಯಕ ಆಗಬಾರದೆಂದು ನಾನು ಅವತ್ತು ಕೂಡ suggestion ಮಾಡಿದ್ದೆ. ಲೋಕಾಯುಕ್ತದಲ್ಲಿ corruption ನಡೆಯುತ್ತಿದೆಯೆಂದರೆ ನಾವು ಅವರನ್ನು removal ಮಾಡುವುದಕ್ಕಾಗುವುದಿಲ್ಲ, ಮತ್ತೊಂದು ಕ್ರಮ ಕೈಗೊಳ್ಳುವುದಕ್ಕಾಗುವುದಿಲ್ಲವಾದ ಕಾರಣ ಸರ್ಕಾರವನ್ನು ಅಸಹಾಯಕ ವಾಗಬಾರದು, ಆದಕಾರಣ ಒಂದು ತಿದ್ದುಪಡಿಯನ್ನು ಮಾಡಿ ಎಂದು ಹೇಳಿದ್ದೆ. ತಕ್ಷಣ ತಿದ್ದುಪಡಿ ತಂದು ಈ ಸದನಕ್ಕೆ ಅಧಿಕಾರ ತೆಗೆದುಕೊಳ್ಳಲಿ ಎಂಬ ಮಾತನ್ನು ಹೇಳಿದ್ದೆ. ಇವತ್ತು ಇದೆಲ್ಲವನ್ನೂ ನೋಡಿದರೆ ಹಿಂದೆಯೂ ಸಹ ಚರ್ಚೆಯಾಗಿದೆ. ಇಂದು IAS, IPS ಅಧಿಕಾರಿಗಳು ಕ್ಯೂ ಹಚ್ಚಿ ಆ blackmailingಗೆ, ಆ pressure ಗೆ yield ಆಗಿ ಅಶ್ವಿನ್ ರಾವ್ ಅವರ ಟೀಮ್ ಏನಿದೆ, ಅವರು blackmail ಮಾಡುವುದಕ್ಕೆ ಕೋಟಿ, ಎರಡು ಕೋಟಿ, ಮೂರು ಕೋಟಿ ಎಲ್ಲಿಯವರೆಗೆ ಎಂದರೆ, ಲೋಕೋಪಯೋಗಿ ಇಲಾಖೆ ಇರಬಹುದು, Commerical Tax Department ಇರಬಹುದು, ಬೇರೆ ಬೇರೆ ಇಲಾಖೆ ಇರಬಹುದು, ಎಲ್ಲಾ ಅಧಿಕಾರಿಗಳನ್ನು blackmail ಮಾಡಿ ಎಲ್ಲಿಯವರೆಗೆ ಎಂದರೆ he collected more than two hundred crores ಎಂಬ information ಇದೆ. ಇವೆಲ್ಲ through investigation ಆದಾಗ ಹೊರ ಬರುವುದಕ್ಕೆ ಸಾಧ್ಯವಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ corruption ನಡೆದಾಗ ನಾವಾಗಲಿ, ಮತ್ತೊಬ್ಬರಾಗಲಿ ಕೈ ಕಟ್ಟಿ ಕುಳಿತುಕೊಳ್ಳಬಾರದೆಂಬ ಮಾತನ್ನು ನಾನು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ವಿರೋಧ ಪಕ್ಷದ ನಾಯಕರು ಎಲ್ಲಾ ಅಧಿಕಾರಿಗಳ ಮೇಲೆ ಅಪಾದನೆ ಹೊರಿಸುತ್ತಿದ್ದಾರೆ ಹೀಗಾದರೆ ಯಾವ ಅಧಿಕಾರಿಗಳು ಕೆಲಸ ಮಾಡುವುದಕ್ಕಾಗುತ್ತದೆ? ಇವರಿಗೇನಾದರೂ ದಾಖಲೆ ಇದೆಯೇ? ಇವರಿಗೇನಾದರೂ evidence ಇದೆಯೇ? ಏನೂ ಇಲ್ಲದೆ ಸುಮ್ಮನೆ ಎಲ್ಲಾ ಅಧಿಕಾರಿಗಳು ಎಂದು ಹೇಳಿ ನೀವೇ blackmail ಮಾಡುತ್ತಿದ್ದೀರಿ. This is too much.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಹೀಗಾಗಿ ಸರ್ಕಾರ ಅಸಹಾಯಕವಾಗಿದೆಯೆಂಬ ಒಂದು ಮಾತನ್ನು ನಾನು ಸರ್ಕಾರಕ್ಕೆ ಹೇಳುತ್ತೇನೆ. ನಾನು ಹಿಂದೆಯೂ ಹೇಳಿದ್ದೇನೆ. ಸರ್ಕಾರ ರಕ್ಷಣೆ ಮಾಡುವ ಕೆಲಸ ಮಾಡುತ್ತಿದೆ. ಇವತ್ತು ರಾಜ್ಯಸರ್ಕಾರ ಲೋಕಾಯುಕ್ತ, ಇಂದು ನನಗೇನು ಗೊತ್ತಿಲ್ಲ, ನನಗೇನು ಸಂಬಂಧವಿಲ್ಲ, ಕಾನೂನು ಪ್ರಕಾರ ಮಾಡಲು ಬರುವುದಿಲ್ಲ, ಸಿಬಿಐ ಗೆ ವಹಿಸಲಾಗುವುದಿಲ್ಲ, FIR ಮೂಲಕ refer ಮಾಡಬಹುದಿತ್ತು. ಮಾಡಲಿಕ್ಕೆ ಆಗುವುದಿಲ್ಲ ಎನ್ನುವ ಮುಖಾಂತರ ಇವತ್ತು ಆ ಲೋಕಾಯುಕ್ತ ಸಂಸ್ಥೆಯನ್ನು, ಇಂದು file ಆಗಿರುವ ಕೇಸ್‌ಗಳನ್ನು ರಕ್ಷಣೆ ಮಾಡಹೊರಟಿದೆ. ನಾನು ಇಲ್ಲಿ ಇದನ್ನು ಏಕೆ refer ಮಾಡಿದೆನೆಂದರೆ, ಇದು ರಕ್ಷಣೆ, ಪರಸ್ಪರ ರಕ್ಷಣೆ. ಅದಕ್ಕಾಗಿ ಈ ರಕ್ಷಣೆ ಮಾಡುವ ಸಲುವಾಗಿ ಲೋಕಾಯುಕ್ತವನ್ನು ಉಳಿಸುವಂತಹುದು, ರಕ್ಷಣೆ ಮಾಡುವಂತಹದ್ದು ಇಷ್ಟೊಂದು corruption ಬಗ್ಗೆ ಆಕ್ರೋಶವಿರುವಂತಹ ಸಂದರ್ಭದಲ್ಲಿ ಸರ್ಕಾರ ಒಂದು ದೃಢವಾದ ನಿರ್ಧಾರ ಮಾಡಿ ಸಿ.ಬಿ.ಐ ಗೆ ಕೊಡಬಹುದಾಗಿತ್ತು. ಆ FIR ಅನ್ನೇ ಸಿ.ಬಿ.ಐ ಗೆ ಕಳುಹಿಸಬಹುದಾಗಿತ್ತು. ಅದನ್ನೂ ಮಾಡಲಿಲ್ಲವೆಂದರೆ ಅವರನ್ನು ರಕ್ಷಣೆ ಮಾಡುವಂತಹ ಕೆಲಸವನ್ನು ಮಾಡುತ್ತಿದೆ. ಈ ಸರ್ಕಾರ ಅಸಹಾಯಕವಾಗಿದೆ. ಇದಕ್ಕೆ ಕಾರಣ ಇದರ ಹಿಂದೆ involve ಆಗಿದೆಯೆಂಬ ಮಾತನ್ನು ಹೇಳುತ್ತೇನೆ. ಅದಕ್ಕಾಗಿ ಈ ಹಿನ್ನೆಲೆಯಲ್ಲಿ ಸರ್ಕಾರ ಅವರನ್ನು ರಕ್ಷಣೆ ಮಾಡುವಂತಹ ಕೆಲಸ ಮಾಡುತ್ತಿದೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಮಾನ್ಯ ಅಧ್ಯಕ್ಷರೆ, ಮಾಜಿ ಮುಖ್ಯಮಂತ್ರಿಗಳನ್ನು ರಕ್ಷಣೆ ಮಾಡುತ್ತಿರುವವರು ನೀವು. ನಾವಲ್ಲ. ನೀವು ಭ್ರಷ್ಟಾಚಾರಿಗಳನ್ನು ರಕ್ಷಣೆ ಮಾಡುವುದಕ್ಕೆ ಹೊರಟಿದ್ದೀರಿ. ಅದಕ್ಕೆ ನಮ್ಮ ಮೇಲೆ ಹೇಳುತ್ತಿದ್ದೀರಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನೀವು ರಕ್ಷಣೆ ಮಾಡುವುದಕ್ಕೆ ಹೊರಟಿದ್ದೀರಿ.

(ಗೊಂದಲ)

ಶ್ರೀಕೆ.ಜೆ. ಜಾರ್ಜ್: ಲೋಕಾಯುಕ್ತದವರು ಮಾಜಿ ಮುಖ್ಯಮಂತ್ರಿಗಳ ಮೇಲೆ...........

(ಗೊಂದಲ)

ಶ್ರೀ ಆರ್. ರೋಷನ್‌ಬೇಗ್: ಅದಕ್ಕಾಗಿಯೇ ಇವರು ಈ ರೀತಿ ಮಾತನಾಡುತ್ತಿರುವುದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಈ ಸರ್ಕಾರ ಅಸಹಾಯಕವಾಗಿದ್ದು, ರಕ್ಷಣೆ ಮಾಡುವಂತಹ ಕೆಲಸವನ್ನು ಮಾಡುತ್ತಿದೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಎಲ್ಲಾ ಗೊತ್ತಾಯಿತು. ಲೋಕಾಯುಕ್ತದವರು ನಿಮ್ಮ ಮಾಜಿ ಮುಖ್ಯಮಂತ್ರಿಗಳ ಮೇಲೆ FIR ಮಾಡಬೇಕೆಂದು...

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಲೋಕಾಯುಕ್ತದವರನ್ನು ಸರ್ಕಾರ ತಮ್ಮ ರಕ್ಷಣೆಗೆ ಹೇಗೆ ಬಳಸಿಕೊಳ್ಳುತ್ತಿದೆಯೆಂದು ಅರ್ಥವಾಗುತ್ತಿದೆ. ನೀವು ಲೋಕಾಯುಕ್ತವನ್ನು ಬಳಸಿಕೊಳ್ಳುತ್ತಿದ್ದೀರಿ. ಆದರೂ ನೀವು ಮಾತನಾಡುತ್ತಿದ್ದೀರಿ. 200 ಕೋಟಿ ರೂ.ಗಳು ದಂಧೆ ಮಾಡಿರುವುದು ಏನಿದೆ, ಅದು ಎಲ್ಲೆಲ್ಲಿ ಹೋಗಿದೆಯೆಂಬುದು ಹೊರಗೆ ಬರಲಿ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಲೋಕಾಯುಕ್ತ ಮತ್ತು ಉಪ ಲೋಕಾಯುಕ್ತರನ್ನು ಬಳಸಿಕೊಳ್ಳುತ್ತಿರುವುದು ನೀವು.

(ಗೊಂದಲ)

ಉಪಾಧ್ಯಕ್ಷರು: ಅವರು ಮೊದಲು complete ಮಾಡಲಿ. ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಇವತ್ತು ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ, ಲೋಕಾಯುಕ್ತದಲ್ಲಿರುವಂತಹ ಭ್ರಷ್ಟಾಚಾರ ಹೊರಗೆ ಹಾಕುವುದಕ್ಕೆ.........

(ಗೊಂದಲ)

ಶ್ರೀ ಸಿ.ಟಿ. ರವಿ: ಇವರ ಲೆಕ್ಕದಲ್ಲಿ ಮಾಜಿ ಲೋಕಾಯುಕ್ತರಾದ ಸಂತೋಷ್ ಹೆಗಡೆ ಅವರು ಚಳುವಳಿ ಮಾಡುತ್ತಿರುವುದು ಸುಮ್ಮನೆ.

(ಗೊಂದಲ)

ಉಪಾಧ್ಯಕ್ಷರು: ನಿಮ್ಮ ನಾಯಕರು ಮಾತನಾಡುತ್ತಿದ್ದಾರೆ. ಸುಮ್ಮನಿರಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಲೋಕಾಯುಕ್ತದಲ್ಲಿರುವಂತಹ ಭ್ರಷ್ಟಾಚಾರವನ್ನು ಹೊರಗೆ ಹಾಕುವುದಕ್ಕೆ ಹೋದರೆ ಇವರು ಪದೇ ಪದೇ ಮಧ್ಯದಲ್ಲಿ ನಿಂತು disturb ಮಾಡುವುದನ್ನು ನೋಡಿದರೆ, ನಾವೇನು allegations ಮಾಡುತ್ತಿದ್ದೇವೆ, ಅವರನ್ನು ರಕ್ಷಣೆ ಮಾಡುವುದು, ಪದೇ ಪದೇ ಎದ್ದು ನಿಲ್ಲುವುದನ್ನು ನೋಡಿದರೆ "ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಳ್ಳುವ ಕೆಲಸವಾಗುತ್ತಿದೆ". ಅಲ್ಲಿ ಲೋಕಾಯುಕ್ತರ ಮೇಲೆ pressure ತರುವಂತಹದ್ದು, ರಚನೆ ಮಾಡುವಂತಹದ್ದೆಲ್ಲಾ ನಡೆಯುತ್ತಿದೆ. ಇವತ್ತು 200 ಕೋಟಿ ರೂ. ಗಳಿಗಿಂತಲೂ ಹೆಚ್ಚು ಭ್ರಷ್ಟಾಚಾರ ಆಗಿದ್ದು, ಇವತ್ತು ಸರ್ಕಾರದ ಕೈವಾಡವಿದೆಯೆಂಬುದನ್ನು ಸರ್ಕಾರದ ಇಲಾಖೆ ಸೃಷ್ಟಿ ಮಾಡುತ್ತಿದೆ. ಅದಕ್ಕಾಗಿ ರಕ್ಷಣೆ ಮಾಡುವಂತಹ ಕೆಲಸ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಕುಂಬಳಕಾಯಿಯನ್ನು ಕದ್ದವರು ನೀವು, ನೀವೇಕೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತೀರಿ; ನೀವೇ ಮಾಡುತ್ತಿರುವುದು. ಮಾಜಿ ಮುಖ್ಯಮಂತ್ರಿಗಳನ್ನು ರಕ್ಷಣೆ ಮಾಡುವ ಉದ್ದೇಶದಿಂದ ಇದೆಲ್ಲವನ್ನು ಮಾಡುತ್ತಿದ್ದೀರಿ. ಭ್ರಷ್ಟಾಚಾರದಲ್ಲಿ ಮುಳುಗಿ ಹೋಗಿದ್ದೀರಿ. ನಮ್ಮ ಬಳಿ ಕುಂಬಳಕಾಯಿ ಇದೆ, ಕುಂಬಳಕಾಯಿ ಕದಿಯಬೇಕಾದ ಅವಶ್ಯಕತೆಯಿಲ್ಲ. ನೀವು ಕದಿಯಬೇಕಾಗಿದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಇವರು ರಕ್ಷಣೆ ಮಾಡುವಂತಹ ಕೆಲಸ ಮಾಡುತ್ತಿದ್ದಾರೆ. ಹಾಗಾಗಿ ತಕ್ಷಣ ಕ್ರಮ ಕೈಗೊಳ್ಳಬೇಕು. ಹಾಗೂ ತಿದ್ದುಪಡಿ ತರಬೇಕು. ಸಿ.ಬಿ.ಐ.ಗೆ ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದೇವೆ. ಲೋಕಾಯುಕ್ತರು ತಕ್ಷಣವೇ ರಾಜೀನಾಮೆ ಕೊಡಬೇಕೆನ್ನುವ ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತಿದ್ದೇನೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ: ಲೋಕಾಯುಕ್ತರನ್ನು ನೇಮಕ ಮಾಡಿರುವುದು ತಮ್ಮ ಅವಧಿಯಲ್ಲಿ.

(ಗೊಂದಲ)

ಉಪಾಧ್ಯಕ್ಷರು: ಈಗ ಸದನವನ್ನು ಮೂರು ಗಂಟೆಗೆ ಸೇರಲು ಮುಂದೂಡಲಾಗಿದೆ.

(ಸದನವು ಅಪರಾಹ್ನ 1 ಗಂಟೆ 58 ನಿಮಿಷಕ್ಕೆ ಮುಂದೂಡಿ, ಮತ್ತೆ ಅಪರಾಹ್ನ 3.00 ಗಂಟೆಗೆ ಪುನಃ ಸಮಾವೇಶಗೊಳ್ಳಲು ನಿಶ್ಚಯಿಸಲಾಯಿತು.)